ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಡಿಸೆಂಬರ್ 2020

ಬೆಲೆ ರೂ.5/-




ವಿನಾ ವೇಂಕಟೇಶಂ ನ ನಾಥೋ ನ ನಾಥಃ,
ಸದಾ ವೇಂಕಟೇಶಂ ಸ್ಮರಾಮಿ ಸ್ಮರಾಮಿ।
ಹರೇ ವೇಂಕಟೇಶ ಪ್ರಸೀದ ಪ್ರಸೀದ,
ಪ್ರಿಯಂ ವೇಂಕಟೇಶ! ಪ್ರಯಚ್ಛ ಪ್ರಯಚ್ಛ ॥


ತಿರುಮಲೆ ತಿರುಪತಿ ದೇವಸ್ಥಾನಗಳು
ಭಾರತದ ರಾಷ್ಟ್ರಪತಿ ಗೌ॥ ಶ್ರೀರಾಮ್‌ನಾಥ್ ಕೋವಿಂದ್
ಸತೀ ಸಮೇತವಾಗಿ 24-11-2020 ರಂದು
ತಿರುಮಲೆ ಸ್ವಾಮಿಯವರನ್ನು,
ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರನ್ನು
ಸಂದರ್ಶಿಸಿದ ದೃಶ್ಯಗಳು








# ಭಗವದ್ಗೀತೆ



ಕಾಶ್ಯಶ್ಚ ಪರಮೇಷ್ವಾಸಃ ಶಿಖಂಡೀ ಚ ಮಹಾರಥಃ।

ಧೃಷ್ಟದ್ಯುಮ್ನೋ ವಿರಾಟಶ್ಚ ಸಾತ್ಯಕಿ ಶ್ಚಾಪರಾಜಿತಃ॥

ದ್ರುಪದೋ ದ್ರೌಪದೇಯಾಶ್ಚ ಸರ್ವಶಃ ಪೃಥಿವೀಪತೇ।

ಸೌಭದ್ರಶ್ಚ ಮಹಾಬಾಹುಃ ಶಂಖಾನ್ ದಧ್ಮುಃ ಪೃಥಕ್ಪೃಥಕ್॥

(ಅಧ್ಯಾಯ - 1, ಶ್ಲೋಕ - 17,18)

## ತಾತ್ಪರ್ಯ

**ಹಿರಿಯ ಬಿಲ್ಲೋಜ ಕಾಶಿರಾಜ, ಮಹಾರಥನಾದ ಶಿಖಂಡಿ, ಧೃಷ್ಟದ್ಯುಮ್ನ, ವಿರಾಟ, ಸೋಲರಿಯದ ಸಾತ್ಯಕಿ, ದ್ರುಪದ, ದ್ರೌಪದಿಯ ಮಕ್ಕಳು, ಮಹಾಬಾಹು ವಾದ ಅಭಿಮನ್ಯು ಹೀಗೆ ಎಲ್ಲರೂ ತಮ್ಮ ತಮ್ಮ ಶಂಖಗಳನ್ನು ಊದಿದರು.**



ಶ್ರೀ ವಿಷ್ಣು ಚಿತ್ತ ಕುಲನಂದನ ಕಲ್ಪವಲ್ಲೀಂ

ಶ್ರೀ ರಂಗರಾಜ ಹರಿಚಂದನ ಯೋಗದೃಶ್ಯಾಮ್।

ಸಾಕ್ಷಾತ್ಕ್ಷ ಮಾಂ ಕರುಣಯಾ ಕಮಲಾಮಿವಾನ್ಯಾಂ

ಗೋದಾಮನನ್ಯ ಶರಣಃ ಶರಣಂ ಪ್ರಪದ್ಯೇ॥

ವೈದೇಶಿಕಃ ಶ್ರುತಿಗಿರಾಮಪಿ ಭೂಯಸೀನಾಂ

ವರ್ಣೇಷು ಮಾತಿ ಮಹಿಮಾ ನ ಹಿ ಮಾದೃಶಾಂ ಶೇ।

ಇತ್ಥಂ ವಿದಂತಮಪಿ ಮಾಂ ಸಹಸ್ಯೈವ ಗೋದೇ

ಮೌನದ್ರು ಹೋ ಮುಖರಯಂತಿ ಗುಣಾಸ್ತ್ವದೀಯಾಃ॥2॥

ತ್ವತ್ರ್ರೇಯಸಃ ಶ್ರವಣಯೋರಮೃತಾಯಮಾನಾಂ

ತುಲ್ಯಾಂ ತ್ವದೀಯಮಣಿನೂಪುರಶಿಂಜಿತಾನಾಮ್।

ಗೋದೇ ತ್ವಮೇವ ಜನನಿ ತ್ವದಭಿಷ್ಟವಾರ್ಹಾಂ

ವಾಚಂ ಪ್ರಸನ್ನಮಧುರಾಂ ಮಮ ಸಂವಿಧೇಹಿ॥೩॥

**ಗೋದಾಸ್ತುತಿ.**

(ಆರನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಅತಿಕೃಪಣೋऽಪಿ ಜಂತುರಧಿಗಮ್ಯ ದಯೇ ಭವತೀ ಮಶಿಥಿಲಧರ್ಮಸೇತುಪದವೀಂ ರುಚಿರಾಮಚಿರಾತ್।**

**ಅಮಿತಮಹೋರ್ಮಿಜಾಲಮತಿಲಂಘ್ಯ ಭವಾಂಬುನಿಧಿಂ ಭವತಿ ವೃಷಾಚಲೇಶ ಪದ ಪತ್ತ ನನಿತ್ಯಧನೀ ॥೫೧॥**

ಈ ಪದ್ಯದಲ್ಲಿ ಕ್ಲೇಶಭೂಯಿಷ್ಠವಾದ ಸಂಸಾರವನ್ನು ಸಾಗರಕ್ಕೆ ಹೋಲಿಸಿ ಅದನ್ನು ದಾಟಬೇಕೆನ್ನುವವನಿಗೆ ದಯೆಯನ್ನು ದೃಢತಮವಾದ ಒಂದು ಸೇತುವೆಯಂತೆ ಕಲ್ಪಿಸಿ ಆಚಾರ್ಯರು ಮನೋಹರವಾಗಿ ಚಿತ್ರಿಸಿರುತ್ತಾರೆ. ಸಮುದ್ರವು ದೊಡ್ಡ ದೊಡ್ಡ ಅಲೆಗಳ ಸಮುದಾಯಗಳಿಂದಲೂ, ಭಯಂಕರವಾದ ಜಲಜಂತುಗಳಿಂದಲೂ ಸ್ವಾಭಾವಿಕವಾಗಿಯೇ ದುರ್ಲಂಘ್ಯವಾದುದು. ಆದರೂ ಅನೇಕವಿಧವಾದ ಉಪಾಯಗಳಿಂದ ಅದನ್ನು ದಾಟುವ ಪ್ರಯತ್ನವನ್ನು ಮಾಡಬಹುದು. ಆ ಉಪಾಯಗಳಲ್ಲಿ ದೃಢವಾಗಿರುವ ಸೇತುವೆಯ ನಿರ್ಮಾಣವೂ ಒಂದು. ಅಂತಹ ದೃಢವೂ, ಸುಂದರವೂ ಆದ ಸೇತುವೆಯ ಮೂಲಕ ಮಾನವನು ಸಾಗರವನ್ನು ದಾಟಿ ಗಮ್ಯಸ್ಥಾನವನ್ನು ಸೇರಿ ಹೇಗೆ ಸುಖಿಯಾಗುವನೋ ಹಾಗೆಯೇ ದೊಡ್ಡ ದೊಡ್ಡ ಅಲೆಗಳಂತಿರುವ ಜನ್ಮಜರಾದಿ ಕ್ಲೇಶಗಳಿಂದ ತುಂಬಿದುದು ಈ ಸಂಸಾರವೆಂಬ ಸಮುದ್ರ,ಇದನ್ನೂ ದಾಟಬೇಕಾದರೂ ಹಲವಾರು ಧರ್ಮಮಾರ್ಗಗಳುಂಟು ಆದರೆ, ಎಲ್ಲ ಧರ್ಮಮಾರ್ಗಗಳಿಗಿಂತಲೂ ಶ್ರೇಷ್ಠವಾದ ಧರ್ಮಮಾರ್ಗವೆಂದರೆ ಪ್ರಪತ್ತಿಮಾರ್ಗ. ಅದು ಶ್ರೇಷ್ಠವಾದುದು ಮಾತ್ರವಲ್ಲ, ಅತ್ಯಂತ ಸುಂದರವಾದುದೂ ಆಗಿದೆ. ಅಂತಹ ಧರ್ಮ (ಪ್ರಪತ್ತಿ) ಸೇತುವೆಯ ಮೂಲಕ ಶೀಘ್ರವಾಗಿಯೂ, ಸುಲಭವಾಗಿಯೂ ಈ ಸಂಸಾರ ಸಮುದ್ರವನ್ನು ದಾಟಿ, ಯಾವ ರೀತಿಯಿಂದಲೂ ಯಾವ ವಿಧವಾದ ಐಶ್ವರ್ಯವನ್ನೂ ಕಾಣದ ಸಂಸಾರಿಚೇತನನು ಗಮ್ಯಸ್ಥಾನವಾದ ಪರಮಪದವನ್ನು ಶಾಶ್ವತವಾಗಿಯೂ, ಅಪರಿಮಿತ ವೈಭವಯುಕ್ತವಾಗಿಯೂ, ಇರುವ ನಗರವಾದ ಪರಮ ಪುರುಷನ ಸಾನಿಧ್ಯವನ್ನು ಹೊಂದಿ ನಿತ್ಯಧನಿಯಾಗಿಯೂ, ನಿತ್ಯ ಸುಖಿಯಾಗಿಯೂ ಆಗುವನು, ಓ ದಯಾದೇವಿ! ಇದೆಲ್ಲವೂ ನಿನ್ನ ವಾತ್ಸಲ್ಯದ ಪ್ರಭಾವವೆಂದು ಭಾವವು.

ಪ್ರಪತ್ತಿ ಮಾರ್ಗವನ್ನು ಆಶ್ರಯಿಸಿದವನನ್ನು, ಸುಕೃತ ವಿಶೇಷದಿಂದ ತಿರುಮಲೆಗೆ ಬಂದು ಶ್ರೀನಿವಾಸನ ಅಡಿದಾವರೆಗಳನ್ನು ಆಶ್ರಯಿಸಿದವನನ್ನು, ಅವನು ಅತ್ಯಂತ ಪಾಪಿಯೇ ಆಗಿದ್ದರೂ ಪರಮಕಾರುಣಿಕನಾದ ಶ್ರೀನಿವಾಸನು ಅವ್ಯಾಜವಾದ ಕರುಣೆ ಯಿಂದ ಅವನನ್ನು ಉದ್ಧರಿಸುವನೆಂಬುದು ಇಲ್ಲಿನ ಶಾಸ್ತ್ರಾರ್ಥ.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಶಾರ್ವರಿನಾಮ ಸಂವತ್ಸರ ಕಾರ್ತಿಕ - ಮಾರ್ಗಶಿರಮಾಸ ಸಂಚಿಕೆ

ಸಂಪುಟ - 51 | ಡಿಸೆಂಬರ್ 2020 | ಸಂಚಿಕೆ - 7




## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಶ್ರೀ ಸುಬ್ರಮಣ್ಯಸ್ವಾಮಿ ಕ್ಷೇತ್ರಗಳು | - ಶ್ರೀಮತಿ. ಪಾರಿಜಾತ.ಬಿ.ಎಸ್. | 7 |
| ಪಂಚಲಿಂಗ ದರ್ಶನ | - ಬಿ. ಆರ್. ಶ್ರೀಕಂಠಯ್ಯ | 11 |
| ಭಗವದ್ಗೀತೆ ಹಾಗೂ ಅದರ ಪ್ರಸ್ತುತತೆ | -ಪ್ರಕಾಶ ಪರ್ವತೀಕರ | 15 |
| ಹೊಯ್ಸಳರ ಐಸಿರಿ ಬೆಳ್ಳೂರಿನ ಆದಿಮಾಧವ ದೇವಾಲಯ | - ಕೆಂಗೇರಿ ಚಕ್ರಪಾಣಿ | 21 |
| ಶ್ರೀ ಮಹಿಪತಿರಾಯರು | - ಡಾ|| ಲಕ್ಷ್ಮೀಕಾಂತ ವಿ.ಮೊಹರೀರ | 24 |
| ಶ್ರೀ ನರಸಿಂಹಾವತಾರ | -ಡಿ.ಎಸ್. ಬದ್ರಿನಾಥ್ | 25 |
| ಭಗವದ್ಗೀತೆಯ ಮಹತ್ವ ಗೀತಾ ಜಯಂತಿ | - ಶ್ರೀಮತಿ. ಡಾ|| ಸಿ.ಎಸ್. ಊರ್ಮಿಳಾ | 51 |
| ಕಾಗಿನೆಲೆಯ ಕಾಂತಿ ಕನಕದಾಸರು | -ಡಾ || ರಾಮಚಂದ್ರದಾಸ್ ಸಿ.ಜೆ. | 56 |
| ಧನುರ್ಮಾಸ ಪಾರಮಾರ್ಥಿಕತೆ, | -ಡಾ || ಗುರುರಾಜ್‌ಪೋಶೆಟ್ಟಿ ಹಳ್ಳಿ | 59 |
| ಉತ್ತಮಗುರಿ - ಉತ್ತಮ ಅಭಿರುಚಿ | -ಡಿ.ಎಸ್. ಭೂಮಿಕ | 62 |
| ಶ್ರೀ ವೈಷ್ಣವರ ವಿಶಿಷ್ಟಪೂಜೆ ಆನೆಹಬ್ಬ | - ಶ್ರೀಮತಿ. ಕೆ.ವಿ. ಪದ್ಮಾವತಿ | 63 |
| ಮುಕ್ತಿಗಾಥೆ ತಿರುಪ್ಪಾವೈ | - ಶ್ರೀಮತಿ. ಸುಮ ಚಂದ್ರಶೇಖರ್ | 65 |
| ಆರೋಗ್ಯಾಮೃತ ಅಮೃತ ಬಳ್ಳಿ | - ಶ್ರೀಮತಿ | 68 |
| ಅಂಜನೇಯನ ಜನನ | - ಡಾ || ಪ್ರಕಾಶ್ ಕೆ. ನಾಡಿಗ್ | 70 |


ಮುಖಚಿತ್ರ - ಶ್ರೀ ಪದ್ಮಾವತೀ ಅಮ್ಮನವರು, ತಿರುಚಾನೂರು
ಹಿಂಬದಿಚಿತ್ರ - ಶ್ರೀ ಪದ್ಮಾವತೀ ಅಮ್ಮನವರ ಪುಷ್ಪಯಾಗ , ತಿರುಚಾನೂರು


**ಗೌರವ ಸಂಪಾದಕರು**
ಡಾ || ಕೆ. ಎಸ್. ಜವಹರ್ ರೆಡ್ಡಿ , ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್, ಪಿ.ಎಚ್.ಡಿ.

**ಸಂಪಾದಕರು**
ಡಾ|| ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.


| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ಶ್ರೀ ಕೃಷ್ಣ – ಆಂಡಾಳ್

ಪರಮಾತ್ಮನಾದ ಮಹಾವಿಷ್ಣು ಪರ, ವ್ಯೂಹ, ವಿಭವ, ಅಂತರ್ಯಾಮಿ, ಅರ್ಚಾ ಎಂಬ ಐದು ಸ್ವರೂಪಗಳಲ್ಲಿ ವ್ಯಕ್ತನಾಗಿದ್ದಾನೆ. ವೈಕುಂಠದಲ್ಲಿ ಪರಸ್ವರೂಪದಲ್ಲಿ, ಕ್ಷೀರಾಬ್ಧಿಯಲ್ಲಿ ವ್ಯೂಹ ಸ್ವರೂಪದಲ್ಲಿ ವಾಸುದೇವನಾಗಿಯೂ, ತನ್ನ ಭಕ್ತರನ್ನು ರಕ್ಷಿಸಲು ಅನೇಕ ಅವತಾರಗಳಲ್ಲಿ ವಿಭವ ಸ್ವರೂಪನಾಗಿಯೂ, ಎಲ್ಲರ ಹೃದಯಕಮಲಗಳಲ್ಲಿ ಅಂತರ್ಯಾಮಿಯಾಗಿ, ದಿವ್ಯ ದೇಶಗಳಲ್ಲಿ ಅರ್ಚಾಸ್ವರೂಪ ದಲ್ಲಿಯೂ ಆ ಪರಮಾತ್ಮನು ವಿರಾಜಮಾನನಾಗಿದ್ದಾನೆ. ಇವುಗಳಲ್ಲಿ ವಿಭವವೆಂಬ ಅವತಾರ ಸ್ವರೂಪದಲ್ಲಿ, ತನ್ನ ಭಕ್ತರನ್ನು ಪೊರೆಯಲು ಅನೇಕ ಅವತಾರಗಳನ್ನು ಧರಿಸಿ ಭಕ್ತಜನರನ್ನು ರಕ್ಷಿಸಿದ್ದಾನೆ ಆ ನಾರಾಯಣನು ಪರಮಾತ್ಮನ ಎಲ್ಲ ಅವತಾರಗಳ ಪೈಕಿ ಕೃಷ್ಣಾವತಾರವನ್ನು ಪೂರ್ಣ ಅವತಾರ ಎನ್ನುತ್ತಾರೆ ಪೂರ್ವಾಚಾರ್ಯರು. ಈ ಅವತಾರದಲ್ಲೆ ಎಲ್ಲರನ್ನೂ ತನ್ನ ಮಾಯಾಲೀಲೆಗಳಿಂದ ಆಕರ್ಷಿಸಿದ್ದಾನೆ.

ಮಹಾವಿಷ್ಣುವಿನ ಎಲ್ಲಾ ಅವತಾರಗಳ ಪೈಕಿ ಕೃಷ್ಣಾವತಾರದಲ್ಲೇ ಅವನ ಲೀಲೆಗಳು ಅನೇಕವೆನಿಸಿವೆ. ಬೆಟ್ಟವನ್ನು ಕೊಡೆಯಾಗಿ ಹಿಡಿದದ್ದು, ಕಾಳಿಂಗನ ಮೇಲೇರಿ ನರ್ತನವನ್ನು ಮಾಡಿದ್ದು, ಇವೆಲ್ಲವೂ ತನ್ನವರನ್ನು ರಕ್ಷಿಸಲಿಕ್ಕಾಗಿಯೇ ಅಷ್ಟೇ ಅಲ್ಲದೇ,ಅರ್ಜುನನಿಗೆ, ಉದ್ಧವನಿಗೆ ಉಪದೇಶವನ್ನು ಮಾಡಿದನು. ಪರೋಪಕಾರವೇ ಮಹಾಭಾಗ್ಯವೆನ್ನುವುದನ್ನು ಕೃಷ್ಣ ಪರಮಾತ್ಮನು ಸ್ಪಷ್ಟಗೊಳಿಸುತ್ತಾನೆ. ಮಣ್ಣಿನಾಶೆಯಿಂದ ಉಂಟಾಗುವ ಪರಿಣಾಮವೇ ಈ ಮಹಾಭಾರತ ಯುದ್ಧವೆನ್ನುವುದನ್ನು ಎಲ್ಲರಿಗೂ ತಿಳಿಯಪಡಿಸುತ್ತಾನೆ. ಆದ್ದರಿಂದ ಈ ಮಣ್ಣಿನಾಶೆಯನ್ನು ಬಿಟ್ಟೊಗೆಯಬೇಕೆಂದು ಸ್ಪಷ್ಟವಾಗಿ ತಿಳಿಸಿಕೊಡುತ್ತಾನೆ. ಪಂಚಮವೇದವೆಂದು ಖ್ಯಾತವಾದ ಮಹಾಭಾರತದ ಮೂಲಕ, ಶ್ರೀ ಕೃಷ್ಣನು, ಮಾನವರು ಉತ್ತಮ ಜೀವನಕ್ಕೆ ಅನುಸರಿಸಬೇಕಾದ ಕರ್ತವ್ಯಗಳನ್ನು, ಧರ್ಮಗಳನ್ನು ಗೀತೋಪದೇಶದಲ್ಲಿ ವಿವರಿಸುತ್ತಾನೆ. ಭಕ್ತನಿಗಾಗಿ ಭಗವಂತನು ಅನುಗ್ರಹಿಸಿದ ಪ್ರಸಾದವೇ ಭಗವದ್ಗೀತೆ. ಅದೇ ರೀತಿ ಭಕ್ತನು ಭಗವಂತನಿಗಾಗಿ ಹೇಳಿರುವುದೇ ವಿಷ್ಣು ಸಹಸ್ರನಾಮ. ಈ ಎರಡು ಕೃತಿಗಳು ಇದೇ ಅವತಾರದಲ್ಲಿ ನಡೆದಿರುವುದು ಮಹಾಆಶ್ಚರ್ಯದಾಯಕವಾಗಿದೆ. ವಿಲ್ಲಿಪುತ್ತೂರುನಲ್ಲಿ ಅವತರಿಸಿದ ಆಂಡಾಳ್ ಕೃಷ್ಣನಲ್ಲಿ ಅತೀವಭಕ್ತಿಯನ್ನು ಬೆಳಸಿಕೊಂಡಿದ್ದಳು. ಪೆರಿಯಾಳ್ವಾರರಿಗೆ ಕೃಷ್ಣ ಭಕ್ತಿಯೇ ಅವರ ಸಾಕುಮಗಳಾದ ಆಂಡಾಳಿನ ಮನಸ್ಸಿನಲ್ಲಿ ಆಳವಾಗಿ ಏರ್ಪಟ್ಟ ಕೃಷ್ಣಭಕ್ತಿಗೆ ಕಾರಣವಾಯಿತು. ಚಿಕ್ಕವಯಸ್ಸಿನಿಂದಲೇ ತಂದೆ ಹೇಳುತ್ತಿದ್ದ ಕೃಷ್ಣ ಲೀಲಾಮೃತವನ್ನು ಸವಿಯುತ್ತ ಬೆಳೆದ ಆಂಡಾಳಿಗೆ ಕೃಷ್ಣನಲ್ಲಿ ಭಕ್ತಿ ಚಿಗುರಿತು. ಈ ಭಕ್ತಿಯೇ ಕಾಲಕ್ರಮದಲ್ಲಿ ಪ್ರೀತಿಯಾಗಿ ಬೆಳೆದು ಕೃಷ್ಣನನ್ನೇ ಪತಿಯಾಗಿ ಪಡೆಯಬೇಕೆಂಬ ಭಾವನೆಗೆ ಕಾರಣವಾಯಿತು.

"ಉಣ್ಣುಮ್ ಸೋರು ಪರುಗುಮ್‌ನೀರ್ ತಿನ್ನುಮ್ ವೆತ್ರಿಲೈ ಎಲ್ಲಾಮ್ ಕಣ್ಣನ್ ಎಂಬೆರುಮಾನ್" (ತಿರುವಾಯ್ ಮೊಳಿ 6.7. 1) ಎಂಬ ನಮ್ಮಾಳ್ವಾರರ ಪಾಶುರದಂತೆ, ಆಂಡಾಳ್ ಕೂಡಾ ಎಲ್ಲಾ ಕೃಷ್ಣನೇ ಎಂದು ಸ್ತುತಿಸುತ್ತಾಳೆ. ಭಗವದ್ಗೀತೆಯಲ್ಲಿ ಕೃಷ್ಣನು, "ನನ್ನನ್ನೇ ಶರಣಾಗು" ಎಂದಂತೆ. ಆ ಶರಣಾಗತಿ ತಕ್ಷವನ್ನೇ ಆಂಡಾಳ್ ಕೂಡಾ ತನ್ನ ಪಾಶುರಗಳಲ್ಲಿ ತಿಳಿಸುತ್ತಾಳೆ. ಆಂಡಾಳಿನ ತಿರುಪ್ಪಾವೈ ಪಾಶುರಗಳು ಶುದ್ಧ ಭಕ್ತಿಯ ಮಹತ್ವ , ಕಲ್ಪನೆ, ಶ್ರೇಷ್ಠ ಸಾಹಿತ್ಯ, ಸಾಮಾಜಿಕ ತತ್ವಗಳನ್ನು ಸರಳವಾಗಿ ವಿವರಿಸುವಂತಿವೆ. ಆಂಡಾಳಿನ ಪಾವೈ ವ್ರತದಲ್ಲಿ ಮಾಡಬೇಕಾದ ಕಾರ್ಯಗಳು, ಎಲ್ಲಾ ಹೆಣ್ಣುಮಕ್ಕಳು ಮಾಡಬಹುದಾದ ಸುಲಭವಾದ ಕೆಲಸಗಳೇ. "ಸಖಿಯರೇ! ಭಗವಂತನನ್ನು ಎಬ್ಬಿಸಿ, ನಿಮಗೆ ಬೇಕಾದವುಗಳನ್ನು ಕೇಳಿ. ಬಾಹ್ಯ ಶುದ್ಧಿ ಮತ್ತು ಅಂತಃಶುದ್ಧಿಯಿಂದ ಪರಮಾತ್ಮನನ್ನು ಪಡೆಯಬಹುದು" ಎಂದು ತನ್ನ ಪಾಶುರದಲ್ಲಿ ಹಾಡಿರುತ್ತಾಳೆ ಆಂಡಾಳ್.

ಮಧುರವಾದ ಮಾರ್ಗಳಿ ಮಾಸದಲ್ಲಿ "ಮಾಸಗಳಲ್ಲಿ ನಾನು ಮಾರ್ಗಶಿರ" ವೆಂದ ಕೃಷ್ಣನನ್ನು, ಕೃಷ್ಣನಿಲ್ಲದಿದ್ದರೇ ಏನೂ ಇಲ್ಲವೆಂದ ಆಂಡಾಳನ್ನು ಸ್ತುತಿಸಿ ಆಡೋಣ.





# ಶ್ರೀ ಸುಬ್ರಮಣ್ಯಸ್ವಾಮಿ ಕ್ಷೇತ್ರಗಳು

– ಶ್ರೀಮತಿ. ಪಾರಿಜಾತ . ಬಿ.ಎಸ್.
9008335689

ಜೀವನದಲ್ಲಿ ಸುಖ, ಶಾಂತಿ, ಸದ್ಗುಣ,ಉತ್ತಮ ಭವಿಷ್ಯ ಹಾಗೂ ಮೋಕ್ಷಗಳನ್ನು ಪಡೆಯಲು ಮನುಷ್ಯರು ಬಹು ಹಿಂದಿನ ಕಾಲದಿಂದಲೂ ಜಪ, ತಪ ಹೋಮ, ಹವನ ನಡೆಸುತ್ತಾ ವಿಪತ್ತು ಬಂದಾಗ ಸಹಜವಾಗಿಯೇ ಧಾರ್ಮಿಕತೆಯತ್ತ ಮನ ನೀಡುತ್ತಾರೆ. ಮನಃಶಾಂತಿಗಾಗಿ ಹಾಗೂ ಆಧ್ಯಾತ್ಮಿಕ ಅನುಭೂತಿಗಾಗಿ ಪವಿತ್ರ ಯಾತ್ರಾ ಸ್ಥಳಗಳ ಭೇಟಿ, ಧಾರ್ಮಿಕ ಗ್ರಂಥಗಳ ಅಧ್ಯಯನ ಕೈಗೊಳ್ಳುತ್ತಾರೆ. "ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಮನುಷ್ಯರು ನನ್ನನ್ನು ಯಾವ ಯಾವ ರೀತಿಯಲ್ಲಿ ಗುರುತಿಸುವರೋ, ಅದೇ ರೀತಿ ಅವರಿಗೆ ನಾನು ಫಲ ನೀಡುತ್ತೇನೆ" ಎಂದು ಹೇಳಿರುವನು. ಹಿಂದೆ ತ್ರಿಪುರಾಸುರನ ಮಕ್ಕಳ ಉಪಟಳವು ಲೋಕದಲ್ಲಿ ಸಜ್ಜನರಿಗೆ ತಡೆಯದಾಯಿತು. ಇದರ ನಿವಾರಣೆಗಾಗಿ ಸ್ವಾಮಿಯು ಸ್ಕಂದನಾಗಿ ಅವತರಿಸಿದನು. ಶಿವಪಾರ್ವತಿಯರ ಪುತ್ರನಾಗಿ ಜನಿಸಿದ ಕಾರ್ತಿಕೇಯನನ್ನು ಕುಮಾರನೆಂದು, ಮುರುಗನೆಂದೂ ಸರ್ಪರೂಪಿಯಾದ ಸುಬ್ರಮಣ್ಯಸ್ವಾಮಿಯೆಂದು ಆರಾಧಿಸುವವರು. ಕಾರ್ತೀಕ ಮಾಸದ ಶುಕ್ಲ ಪಕ್ಷದ ೬ ನೇ ದಿನವನ್ನು ಸ್ವಾಮಿಯು ಅವತರಿಸಿದ ಸ್ಕಂದಷಷ್ಠಿ ದಿನವೆಂದು ಆಚರಿಸಲಾಗುತ್ತದೆ. ಆದಿ ಸುಬ್ರಮಣ್ಯನಾಗಿ ದಕ್ಷಿಣ ಕನ್ನಡದ ಕುಕ್ಕೆಸುಬ್ರಮಣ್ಯ, ಮಧ್ಯ ಸುಬ್ರಮಣ್ಯನಾಗಿ ದೊಡ್ಡಬಳ್ಳಾಪುರದ,ಘಾಟಿಸುಬ್ರಮಣ್ಯ ಹಾಗೂ ಅಂತ್ಯ ಸುಬ್ರಮಣ್ಯನಾಗಿ ತುಮಕೂರಿನ ಪಾವಗಡದ ನಾಗಲಮಡಿಕೆ ಸುಬ್ರಮಣ್ಯನ ದರ್ಶನ ಮಾಡುವುದು ಉತ್ತಮ ಪುಣ್ಯ ಸಂಪಾದನೆ ಎಂಬ ನಂಬಿಕೆ ಇದೆ. ಅದರಂತೆಯೇ ಕರ್ನಾಟಕ ನಾಗದೇವತೆಗಳ ಕ್ಷೇತ್ರಗಳಲ್ಲೇ ಇವು ಅಷ್ಟೇ ಪ್ರಾಮುಖ್ಯತೆಯನ್ನೂ ಪಡೆದಿವೆ.

### ಶ್ರೀ ಕುಕ್ಕೆಸುಬ್ರಮಣ್ಯ ಕ್ಷೇತ್ರ

ಜೀವನದಲ್ಲಿ ಕಾಡುವ ಸಂತಾನ ಹೀನತೆ,ಚರ್ಮ ವ್ಯಾಧಿಯಂತಹ ಅನೇಕ ವ್ಯಾಧಿಗಳಿಗೆ ಸರ್ಪದೋಷವೇ ಕಾರಣವೆಂಬ ನಂಬಿಕೆ ಎಲ್ಲರಲ್ಲೂ ಇದೆ. ಇಂತಹ ಸರ್ಪದೋಷ ನಿವಾರಣ ಕೇಂದ್ರವೆಂದು ನಂಬಿರುವ ಪ್ರಮುಖ ಕ್ಷೇತ್ರಗಳಲ್ಲೊಂದು ಶ್ರೀಕುಕ್ಕೆ ಸುಬ್ರಮಣ್ಯ ಕ್ಷೇತ್ರ. ಈ ಕ್ಷೇತ್ರವು ಬೆಂಗಳೂರಿನಿಂದ ಸುಮಾರು ೨೮೬ ಕಿ.ಮೀ. ದೂರದಲ್ಲಿದೆ.

### ಸ್ಥಳಪುರಾಣ

ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಸೂಳ್ಯ ತಾಲೂಕಿನಲ್ಲಿರುವ ಈ ಕ್ಷೇತ್ರವು ಪಶ್ಚಿಮಘಟ್ಟಗಳ ಮಡಿಲಿನಲ್ಲಿರುವ ಪ್ರಸಿದ್ಧ ಕ್ಷೇತ್ರಗಳಲ್ಲಿ ಪ್ರಮುಖವಾಗಿದ್ದು ಕುಮಾರಧಾರ ನದಿಯ ತಟದಲ್ಲಿದೆ. ದುಷ್ಟ ಶಿಕ್ಷಣ ಶಿಷ್ಟರಕ್ಷಣೆಗಾಗಿ ಸ್ವಾಮಿಯು ಅವತಾರ ತಾಳಿ ತಾರಕಾದಿ ಅಸುರರರನ್ನು ಸಂಹರಿಸಿದನು. ಸ್ವಾಮಿಯು ತನ್ನ ಶಕ್ತ್ಯಾಯುಧವನ್ನು ಈ ನದಿಯಲ್ಲಿ ತೊಳೆದ ಕಾರಣ ನದಿಗೆ "ಕುಮಾರಧಾರ"ವೆಂಬ ಹೆಸರಿದೆ. ಇಲ್ಲಿ ಹಿಂದೆ ಸರ್ಪರಾಜ ವಾಸುಕಿ ತಪಸ್ಸು ಮಾಡಿದನೆಂದು ನಂಬಲಾಗುತ್ತದೆ. ಅವನ ಪ್ರಾರ್ಥನೆಗೆ ಮನ್ನಣೆಯಿತ್ತು ಕುಮಾರಸ್ವಾಮಿಯು ದೇವಸೇನಾ ಸಹಿತನಾಗಿ ಈ ಕ್ಷೇತ್ರದಲ್ಲಿ ನೆಲೆಸಿದನೆಂಬ ನಂಬಿಕೆಯಿದೆ. ಇಲ್ಲಿ ಸ್ವಾಮಿಯನ್ನು

ನಾಗಸ್ವರೂಪಿಯಾಗಿ ಪೂಜಿಸುವ ವಾಡಿಕೆ ಇದೆ. ಇಲ್ಲಿನ ಮೃತ್ತಿಕಾ ಪ್ರಸಾದ ಅತ್ಯಂತ ಪವಿತ್ರವೆನಿಸಿದೆ.

### ೧. ದರ್ಪಣ ತೀರ್ಥ

ಹೆಸರೇ ಹೇಳುವಂತೆ ವಿಶೇಷ ಗುಣ ವಿಶೇಷತೆಯನ್ನು ಹೊಂದಿರುವ ಈ ತೀರ್ಥದಲ್ಲಿ ಸ್ನಾನ ಮಾಡಿ ನಂತರ ಸ್ವಾಮಿ ಆದಿ ಸುಬ್ರಮಣ್ಯನ ದರ್ಶನ ಮಾಡುವುದು ಪದ್ಧತಿ.

### ೨. ಆದಿ ಸುಬ್ರಮಣ್ಯ

ಈ ದೇವಾಲಯವು ಮೂಲ ಸುಬ್ರಮಣ್ಯ ದೇವಾ ಲಯದ ಶಿಖರದ ಉತ್ತರ ಭಾಗದಲ್ಲಿದೆ. ದೇವಾಲಯದ ಹೊರಾಂಗಣವು ವಿಶಾಲವಾಗಿದ್ದು ಗರ್ಭಗುಡಿಯಲ್ಲಿ ವಲ್ಮಿಕ (ಹುತ್ತ)ವನ್ನು ಒಳಗೊಂಡಿದೆ. ಈ ಕ್ಷೇತ್ರದಲ್ಲಿ ಆಚಾರ ಸಂಪ್ರ ದಾಯಕ್ಕೆ ಹೆಚ್ಚಿನ ಮಹತ್ವವಿದೆ. ಭಕ್ತರು ಇಲ್ಲಿ ಉರುಳು ಸೇವೆ, ಹರಕೆ, ಹೆಜ್ಜೆ ನಮಸ್ಕಾರ ಇತ್ಯಾದಿ ಸೇವೆಗೆ ಅವಕಾಶ ವಿದೆ.

### ೩. ಶ್ರೀ ಸುಬ್ರಮಣ್ಯಸ್ವಾಮಿ ದೇವಾಲಯ



"ಭಜೇ ಕುಕ್ಕೆ ಲಿಂಗಮ್" ಎಂದು ಶ್ರೀ ಶಂಕರಭಗವತ್ಪಾ ದರು ಸುಬ್ರಮಣ್ಯ ಭುಜಂಗ ಸ್ತ್ರೋತ್ರದಲ್ಲಿ ಹಾಡಿ ಹೊಗಳಿದ್ದಾರೆ. ಈ ದೇವಾ ಲಯದ ಪ್ರವೇಶದ್ವಾರ ಪಶ್ಚಿಮಕ್ಕಿದೆ. ಗರ್ಭಗುಡಿಯಲ್ಲಿ ಮೂರು ಮುಖ್ಯ ಪೀಠ ಗಳಿದ್ದು ಪೀಠದಲ್ಲಿ, ವಾಸುಕಿ ಹಾಗೂ ಶೇಷ ದೇವರುಗಳು ಕ್ರಮವಾಗಿ ನಂತರದ ಪೀಠಗಳಲ್ಲಿ ವಿರಾಜಮಾನರಾಗಿದ್ದಾರೆ. ದೇವಾಲಯದ ಪ್ರಾಂಗಣವು ವಿಶಾಲವಾಗಿದ್ದು ಭಕ್ತರು ತಮ್ಮ ಹರಕೆ, ತೀರಿಸಲು ಉಷಃ ಕಾಲದಲ್ಲಿ ಇಲ್ಲಿ ಉರುಳು ಸೇವೆ, ಪ್ರದಕ್ಷಿಣೆ ಹಾಕುವ ರೂಢಿ ಯಿದೆ. ನಂತರ ಒಳ ಪ್ರಾಂಗಣದ ಕುಕ್ಕೆ ಸುಬ್ರಮಣ್ಯನನ್ನು ಲಿಂಗರೂಪಿಯಾಗಿ ಪೂಜಿಸಿ ಶ್ರೀ ಸುಬ್ರಮಣ್ಯನನ್ನು ಪ್ರಾರ್ಥಿಸುತ್ತಾರೆ. ಆಶ್ಲೇಷ ಬಲಿ ಎನ್ನುವ ನಾಗ ಸೇವೆಗೆ ಮುಂಚಿತ ವಾಗಿ ಹಾಜರಿದ್ದು ಸಂಕಲ್ಪ ಮಂಟಪದಲ್ಲಿ ಸಂಕಲ್ಪ ಮಾಡಿಸು ವುದು ಇಲ್ಲಿನ ಪದ್ಧತಿಯಾಗಿದೆ.

### ೪. ಬಿಲದ್ವಾರ :

ಕುಮಾರಧಾರಕ್ಕೆ ಸಾಗುವ ದಾರಿಯಲ್ಲಿ ಈ ಸ್ಥಳವಿದೆ. ಹಿಂದೆ ಸರ್ಪರಾಜ ವಾಸುಕಿ ಗರುಡನಿಂದ ತಪ್ಪಿಸಿಕೊಳ್ಳಲು ಇಲ್ಲಿ ಅವಿತಿದ್ದನೆಂದು ನಂಬಲಾಗುತ್ತದೆ.

### ೫. ಕಾಶಿಕಟ್ಟೆ:

ಮೂಲ ದೇವಾಲಯದಿಂದ ಕುಮಾರಧಾರಕ್ಕೆ ಹೋಗುವ ಮಾರ್ಗ ಮಧ್ಯೆ ನಾರದ ಮಹರ್ಷಿಯಿಂದ ಪ್ರತಿಷ್ಠಾಪಿಸಲ್ಪಟ್ಟಿರುವ ಶ್ರೀ ಗಣಪತಿಯ ದರ್ಶನ ದೊರೆಯುತ್ತದೆ.

### ೬. ಕುಮಾರಧಾರ :

ಸುಂದರ ನಯನ ಮನೋಹರ ಪ್ರಕೃತಿಯ ಸೊಬಗನ್ನು ಹೊಂದಿರುವ ವನಗಳಿಂದ ಕೂಡಿದ "ಕುಮಾರ ಪರ್ವತ"ದ ಮಡಿಲಿನಲ್ಲಿ ಹರಿಯುವ ಬಳುಕಿನ ಜಲಧಾರೆಯೇ "ಕುಮಾರ ಧಾರ" ಬಿಲ್ವ ದ್ವಾರದ ದರ್ಶನದ ನಂತರ ೨೧ ಅಡಿ ಎತ್ತರದ ಗಣಪತಿ ಆಲಯದ ವೀಕ್ಷಣೆ ಮಾಡಿ ಮುನ್ನಡೆದರೆ ಗಿಡಮೂಲಿಕೆ ಗಳಿಂದ ಕೂಡಿದ ವನಸಿರಿಯ ನಡುವೆ ಕುಮಾರಧಾರಾ ಜಲ ರಾಶಿಯ ಸೊಬಗು ಆಕರ್ಷಿಸುತ್ತದೆ. ಈ ಸ್ಥಳದಲ್ಲಿ ಸ್ನಾನ ಮಾಡಿದರೆ ಚರ್ಮವ್ಯಾಧಿಯು ನಿವಾರಣೆಯಾಗುತ್ತದೆಂಬುದು ಭಕ್ತರ ನಂಬಿಕೆ.

### ೭. ಪಂಚಮಿತೀರ್ಥ:

ತುಸು ದೂರದಲ್ಲಿರುವ ಈ ಸ್ಥಳವು ಕುಮಾರಧಾರದ ಎಡಭಾಗದಲ್ಲಿದೆ. ಈ ಪ್ರದೇಶದಲ್ಲಿ ಇಲ್ಲಿಯ ಮಠದ ಪೂರ್ವಯತಿಗಳ ಬೃಂದಾವನ ವನ್ನು ಹಾಗೂ ಸೋಮನಾಥ ದೇವರ ದರ್ಶನವನ್ನು ಪಡೆಯಬಹುದಾಗಿದೆ.

### ೮. ಸಂಪುಟ ನಾರಸಿಂಹ

ಈ ಸ್ಥಳವು ಮೂಲ ಸುಬ್ರಮಣ್ಯ ದೇವಾಲಯದ ಪಕ್ಕದಲ್ಲಿದೆ. ಮಧ್ವಾಚಾರ್ಯರಿಗೆ ವೇದವ್ಯಾಸರು ನೀಡಿದ ನರಸಿಂಹ ದೇವರ ವಿಗ್ರಹದ ದರ್ಶನ ಭಾಗ್ಯವು ದೊರೆಯುತ್ತದೆ.

### ಶ್ರೀ ಘಾಟಿ ಸುಬ್ರಮಣ್ಯಸ್ವಾಮಿ ಕ್ಷೇತ್ರ

ಶ್ರೀಘಾಟಿ ಸುಬ್ರಮಣ್ಯ ಕ್ಷೇತ್ರವು ಕರ್ನಾಟಕ ರಾಜ್ಯದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿಗೆ ಸೇರಿದೆ. ಬಹಳ ಪುರಾತನವಾದ ಈ ಕ್ಷೇತ್ರದಲ್ಲಿ ಸ್ವಾಮಿಯು ಶಿಲಾರೂಪದಲ್ಲಿದ್ದು, ಮುಂಭಾಗದಲ್ಲಿ ಪೂರ್ವಾಭಿಮುಖವಾಗಿ ಲಕ್ಷ್ಮೀ ಸಮೇತನಾದ ಶ್ರೀನರಸಿಂಹಸ್ವಾಮಿಯೂ ಒಂದೇ ಶಿಲೆ ಯಲ್ಲಿ ನೆಲೆಸಿರುವರು, ಸ್ವಾಮಿಯು ಗೋಚರವಾಗಿ ಸುಮಾರು ೬೦೦ ವರ್ಷಗಳಾಗಿವೆ ಎಂದು ತಿಳಿದು ಬಂದಿದೆ.

**ಐತಿಹಾಸಿಕ**

ಹಿಂದೆ ದೊಡ್ಡಬಳ್ಳಾಪುರವನ್ನು ಮಲ್ಲ ಬೈರೇಗೌಡನೆಂಬ ಪಾಳೇಗಾರನು ಆಳುತ್ತಿದ್ದ ನೆಂದು ಇತಿಹಾಸದಿಂದ ತಿಳಿದು ಬರುತ್ತದೆ. ಈ ಕಾಲದಲ್ಲಿ ಬೆಂಗಳೂರಿನ ಯಶವಂತಪುರ ದವರೆಗೂ ಮರಾಠರ ರಾಜ್ಯವಿತ್ತು. ಈ ಸರ ಹದ್ದು ಸೊಂಡೂರು ಸಂಸ್ಥಾನದ ಘೋರ್ಪಡೆ ಮಾಂಡಲೀಕರ ಆಳ್ವಿಕೆಯಲ್ಲಿತ್ತು. ಅವರು ದೈವ ಭಕ್ತರು ಆಚಾರವಂತರೂ ಆಗಿದ್ದು ಅವರ ಮನ ದೇವರು ಶ್ರೀ ಸುಬ್ರಮಣ್ಯಸ್ವಾಮಿ. ಒಬ್ಬ ವೀಳ್ಯದೆಲೆ ವರ್ತಕನು ವ್ಯಾಪಾರಕ್ಕಾಗಿ ಊರಿನಿಂದ ಊರಿಗೆ ಸಾಗುವಾಗ ವಿಶ್ರಾಂತಿಗೆಂದು ಒಂದು ಮರದ ನೆರಳಿನಲ್ಲಿ ಶಿಲೆಯ ಮೇಲೆ ಮಲಗು ತ್ತಿದ್ದನು. "ಈ ಶಿಲೆಯ ಮೇಲೆ ಭಾರವಾಗಿ ಮಲ ಗಿರುವೆ ಏಳು ಮೇಲೆ" ಎಂಬ ಶಬ್ದ ಬರಲು ಅದರ ಬಗ್ಗೆ ಹೆಚ್ಚು ಆಸಕ್ತನಾಗದ ವರ್ತಕನಿಗೆ ರಾತ್ರಿ ಸ್ವಪ್ನದಲ್ಲಿ ಶ್ರೀಸ್ವಾಮಿಯು ಕಾಣಿಸಿ ಕೊಂಡು ನಾನು ಇಲ್ಲೇ ಸಮೀಪದಲ್ಲೇ ಇರುವೆ. ನಿನ್ನ ರಾಜನನ್ನು ಭೇಟಿ ಮಾಡಿ ನನಗೊಂದು ಗುಡಿ ಗೋಪುರವನ್ನು ನಿರ್ಮಿಸಿ ಪೂಜೆ ಪುನ ಸ್ಕಾರವು ನೆರವೇರುವಂತೆ ಮಾಡು ಎಂದು ಹೇಳಿದಂತಾಯ್ತು. ಮಾರನೆ ದಿನ ಸ್ವಪ್ನದಲ್ಲಿ ಕಂಡಂತೆ ಎಲ್ಲವೂ ಜರುಗಿತು. ಅದೇ ರಾತ್ರಿ ರಾಜನಿಗೂ ಸ್ವಪ್ನ ಉಂಟಾಗಲು ರಾಜನು ಸ್ವಾಮಿಯ ಆಜ್ಞೆಯಂತೆ ಆ ಸುಬ್ರಮಣ್ಯ ಸ್ವಾಮಿಗೆ ಗುಡಿಯನ್ನು ಈ ಕ್ಷೇತ್ರದಲ್ಲಿ ನಿರ್ಮಿಸಿ ಯಥಾವತ್ತಾಗಿ ಪೂಜೆ ಪುನಸ್ಕಾರಗಳು ನೆರ ವೇರಲು ನಿರ್ಧರಿಸಿದನು. ಆ ಸ್ಥಳದಲ್ಲಿದ್ದ ವಾಲ್ಮೀಕವನ್ನು ಸ್ವಾಮಿಯ ಆದೇಶದಂತೆ ತೆಗೆಸಲು ಸರ್ಪರೂಪನಾದ ಶಿಲಾಮೂರ್ತಿ ಲಕ್ಷ್ಮೀನರಸಿಂಹಸ್ವಾಮಿ ಸಮೇತನಾಗಿ ಸ್ವಾಮಿಯು ಗೋಚರಿಸಿದನಂತೆ.

**ಪೌರಾಣಿಕ ಹಿನ್ನೆಲೆ**

ಹಿಂದೆ ದೇವತೆಗಳು, ಮಾನವರು, ಶಾಂತಿಯಿಂದ ಜೀವನ ನಡೆಸುತ್ತಿರಲು, ತ್ರಿಪುರಾಸುರನೆಂಬ ರಾಕ್ಷಸನ ಮಕ್ಕಳಾದ ತಾರಕಾಸುರ, ಸಿಂಹಮುಖ, ಗಜಾಸ್ಯ, ಶೂರ ಪದ್ಮ ಎಂಬ ನಾಲ್ವರು ಶಿವನನ್ನು ಕುರಿತು ಘೋರವಾದ ತಪಸ್ಸನ್ನು ಆಚರಿ ಸಿದರು. ಪರಶಿವನು ಪ್ರತ್ಯಕ್ಷನಾಗಿ ಆ ರಾಕ್ಷಸ ಪುತ್ರರ ಕೋರಿಕೆ ಏನೆಂದು ಕೇಳಿದನು ಅದಕ್ಕೆ ಅವರು "ನಮಗೆ ಮರಣವಿಲ್ಲದಂತೆ ಮಾಡು" ಎಂದರು. ಅದಕ್ಕೆ ಶಿವನು ಯಾರಿಗೂ ಮರಣವೆಂಬುದು ತಪ್ಪಿದ್ದಲ್ಲ ಆದ ಕಾರಣ ಈ ವರ ಬಿಟ್ಟು ಬೇರೇನಾದರೂ ಬೇಡಿರಿ ಎಂದನು. ಪರಶಿವನು ವಿವಾಹವಾಗು ವುದು ಸಾಧ್ಯವಿಲ್ಲ ಅಂದುಕೊಂಡ ಆ ರಾಕ್ಷಸ ಪುತ್ರರು "ನಮಗೆ ಮರಣ ಆಗುವುದೇ ಆದರೆ ನಿನ್ನ ಔರಸ ಪುತ್ರನಿಂದ ಆಗಲಿ ಅವನು ವಿವಾಹವಾಗಿಯೂ ಬ್ರಹ್ಮಚಾರಿಯಾಗಿರಬೇಕು. ತ್ರೈಲೋಕ್ಯ ವಂದ್ಯನಾಗಿರಬೇಕು ಎಂದು ಬೇಡಿದರು. "ಶಿವನು ತಥಾಸ್ತು" ಎಂದರು.

ಇತ್ತ ದಕ್ಷಯಜ್ಞ ಕುಂಡದಲ್ಲಿ ಹಾರಿದ ದಾಕ್ಷಾಯಿಣಿಯು ಹಿಮವಂಶ ಮತ್ತು ಮೈನಾದೇವಿಯರ ಎರಡನೇಯ ಮಗಳಾಗಿ "ಗಿರಿಜೆ" ಎಂಬ ಹೆಸರಿನಿಂದ ಜನ್ಮ ತಳೆದು, ಬೆಳೆದು ಶಿವನನ್ನು ವಿವಾಹವಾಗುವುದಾಗಿ ನಿಶ್ಚಯಿ ಸಿದಳು. ಇತ್ತ ತ್ರಿಪುರಾಸುರನ ಪುತ್ರರ ಅಟ್ಟಹಾಸವು ಹೆಚ್ಚಾಗಲು ದೇವಾನು ದೇವತೆಗಳು ಈಗ ಶಿವ ಕಲ್ಯಾಣವಾಗದ ಹೊರತು ಇವರ ಸಂಹಾರಕ್ಕೆ ಬೇರೆ ಮಾರ್ಗವಿಲ್ಲವೆಂದು ಆಲೋಚಿಸಿ ಮನ್ಮಥನ ಸಹಾಯದಿಂದ ಧ್ಯಾನಾಸಕ್ತನಾದ ಶಿವನು ಗಿರಿಜೆಯಲ್ಲಿ ಅನುರಕ್ತನಾಗುವಂತೆ ಮಾಡಿದರು. ಹೀಗೆ ಶಿವನು ಗಿರಿಜೆ ಯನ್ನು ವಿವಾಹವಾದನು. ಗಿರಿಜೆಯರ ಮಗನೇ ಸುಬ್ರಮಣ್ಯ ಚಿಕ್ಕಂದಿನಲ್ಲಿಯೇ ಅಸಾಮಾನ್ಯ ಗುಣಗಳನ್ನು ಹೊಂದಿದ್ದರಿಂದ ಕುಮಾರಸ್ವಾಮಿ ಅವನನ್ನು ಪೋಷಿಸಲು ನೇಮಿಸಲ್ಪಟ್ಟ ಕೃತ್ತಿಕಾದೇವಿಯರು ಆರು ಮಂದಿ ಆರು ತಾಯಂ ದಿರ ಎದೆ ಹಾಲು ಕುಡಿದುದರಿಂದ ಷಣ್ಮುಖನೆನಿಸಿದನು. ಹೀಗೆ ಬೆಳೆದ ಸ್ವಾಮಿಯು ಒಮ್ಮೆ ತಾನು ಕೇಳಿದ ಪ್ರಶ್ನೆಗಳಿಗೆ ಬ್ರಹ್ಮನು ಉತ್ತರಿಸಿದ ಕಾರಣ, ಸರ್ಪವಾಗ ಲೆಂದು ತಾನೇ ಶಪಿಸಿಕೊಂಡು ದಕ್ಷಿಣ ವಿಂಧ್ಯ ಪರ್ವತದಿಂದೀಚೆಗೆ ಪಯಣಿಸಿ ವಾಲ್ಮೀಕಿ ಕ್ಷೇತ್ರದಲ್ಲಿ ತಪಸನ್ನು ಆಚರಿಸಿದನು. ತನಗೆ ಗರುಡ ಬಾಧೆ ಉಂಟಾ ಗದಿರಲೆಂದು ಶ್ರೀ ಲಕ್ಷ್ಮೀಪತಿಯನ್ನು ಧ್ಯಾನಿಸಲು ಶ್ರೀ ಹರಿಯು ಆತನಿಗೆ ಅಭಯ ವಿತ್ತನು. ತಾನು ಸದಾ ನಿನ್ನೊಂದಿಗೆ ಶ್ರೀ ಲಕ್ಷ್ಮೀ ನರಸಿಂಹ ರೂಪದಿಂದ ಬೆಂಗಾ ವಲಾಗಿ ಇರುವನೆಂದು ಹೇಳಿದನು.

ಶ್ರೀ ಸ್ವಾಮಿಯು ಮುಂದೆ ಘಟಕಾಸುರನೆಂಬ ರಾಕ್ಷಸನನ್ನು ಸಂ ಹರಿಸಿದನು. ಇಂದಿಗೂ ಈ ಸುಬ್ರಮಣ್ಯ ಕ್ಷೇತ್ರದಲ್ಲಿ ಶಿಲಾರೂಪದಲ್ಲಿ ಸ್ವಾಮಿಯು ಲಕ್ಷ್ಮೀನರಸಿಂಹ ಸಮೇತನಾಗಿ ಭಕ್ತರ ಸಕಲ ಇಷ್ಟಾರ್ಥಗಳನ್ನು ನೆರವೇರಿಸಲು ನೆಲೆಸಿದ್ದಾನೆಂಬುದು ನಂಬಿಕೆ.

ಶ್ರೀ ಸುಬ್ರಮಣ್ಯ ಸ್ವಾಮಿ ದೇವಾಲಯ, ಕುಮಾರ ತೀರ್ಥ, ಕುಮಾರಾಧಾರ ಉದ್ಯಾನವನ ಶ್ರೀನಾಗಲಿಂಗ ದೇವಾಲಯ, ಶ್ರೀರಾಜರಾಜೇಶ್ವರಿ ದೇವಾಲಯ, ಸತ್ಯನಾರಾಯಣ ಸ್ವಾಮಿ ದೇವಾಲಯ, ಶ್ರೀಮುದ್ದನಾಗಮ್ಮನ ಗುಡಿ ಇತ್ಯಾದಿ ಇಲ್ಲಿನ ಪ್ರಮುಖ ದೇಗುಲಗಳು.

ಕ್ಷೇತ್ರಕ್ಕೆ ದೇಶದ ವಿವಿಧ ಭಾಗಗಳಿಂದ ಭಕ್ತರು ಆಗಮಿಸಿ ತಮ್ಮ ಇಷ್ಟಾರ್ಥ ಗಳನ್ನು ನೆರವೇರಿಸುವಂತೆ ಸ್ವಾಮಿಯನ್ನು ಬೇಡುವುದು ನಿರಂತರವಾಗಿ

ನಡೆಯುತ್ತಿದೆ. ಅನನ್ಯ ಭಕ್ತಿಯಿಂದ ಬೇಡಿದವರಿಗೆ ಪೂಜಿಸಿದ ವರಿಗೆ ಸರ್ಪ ದೋಷನಿವಾರಣೆ, ಮಾಂಗಲ್ಯಭಾಗ್ಯ, ಸಂತಾನ ಭಾಗ್ಯ, ಆರೋಗ್ಯಭಾಗ್ಯ ಲಭಿಸುತ್ತದೆ ಎಂಬ ನಂಬಿಕೆ ಭಕ್ತರಲ್ಲಿ ಧೃಡವಾಗಿದೆ.

**ನಾಗಲಮಡಿಕೆ ಶ್ರೀ ಸುಬ್ರಮಣ್ಯ ಕ್ಷೇತ್ರ**

ಜೀವನಿಗೆ ಮೂರು ಅವಸ್ಥೆಗಳುಂಟು ಪಂಚೇದ್ರಿಯಗಳ ಮೂಲಕ ವಿವಿಧ ವಿಷಯಗಳನ್ನು ಅನುಭವಿಸುವ "ಜಾಗೃತ ಅವಸ್ಥೆ"ಇಂದ್ರೀಯಗಳಲ್ಲಿ ವಿರಮಿಸಿದಾಗ 'ಸ್ವಪ್ನಾವಸ್ಥೆ' ಹೊಂದುತ್ತಾನೆ. ಸುಖದುಃಖಗಳನ್ನು ಅನುಭವಿಸಿ ಬಳಲಿದ ಮೇಲೆ 'ಸುಷುಪ್ತಾವಸ್ಥೆಗೆ' ತೆರಳುತ್ತಾನೆ ಈ ಎಲ್ಲಾ ಅವಸ್ಥೆಗಳನ್ನು ದಾಟುವಾಗ ಅನೇಕ ಕಾರ್ಯಗಳಲ್ಲಿ ತೊಡಗುತ್ತಾನೆ.

ಕರ್ನಾಟಕದ ತುಮಕೂರು ಜಿಲ್ಲೆಯ ಪಾವಗಡದಲ್ಲಿ ನಾಗಲಮಡಿಕೆ ಸುಬ್ರಮಣ್ಯ ಕ್ಷೇತ್ರವು ಪ್ರಸಿದ್ಧವಾಗಿದೆ. "ನಾಗಲ ಮಡಕ" ತೆಲುಗಿನ ಪದವಾಗಿ ನಾಗಲ ಎಂದರೆ ಸುಬ್ರಮಣ್ಯ, 'ಮಡಕ ಎಂದರೆ ನೇಗಿಲು' ಈ ಅರ್ಥದಲ್ಲಿ ನೇಗಿಲಿಗೆ ಸಿಕ್ಕಿದ ವಿಗ್ರಹ ನಾಗಲಮಡಿಕೆ ಎನಿಸಿಕೊಂಡಿದೆ.

**ಪೌರಾಣಿಕ ಹಿನ್ನೆಲೆ**

ಹಿಂದೆ ಈ ಕ್ಷೇತ್ರಕ್ಕೆ ಶ್ರೀ ರಾಮನು ತಮ್ಮ ಲಕ್ಷ್ಮಣನ ಸಮೇತ ಭೇಟಿ ನೀಡಿದ್ದರೆಂದು ಹೇಳಲಾಗುತ್ತದೆ. ಈ ಕ್ಷೇತ್ರದಲ್ಲಿ ಹಿಂದೆ ಬ್ರಾಹ್ಮಣರ ಕುಟುಂಬಗಳು ಹೆಚ್ಚಾಗಿ ವಾಸಿಸುತ್ತಿದ್ದು, ಅವರಲ್ಲಿ ಅನ್ನಭಟ್ಟನೆಂಬುವವನು ತನ್ನ ಆರಾಧ್ಯ ದೈವ ಸುಬ್ರ ಮಣ್ಯನನ್ನು ಪೂಜಿಸುತ್ತಿದ್ದರು. ಪ್ರತೀವರ್ಷವೂ ಸ್ವಾಮಿಯ ದರ್ಶನಕ್ಕಾಗಿ ಕುಕ್ಕೆಗೆ ಭೇಟಿ ನೀಡುತ್ತಿದರಂತೆ.ಆದರೆ ವಯಸ್ಸಾ ದಂತೆ ಒಮ್ಮೆ ಈ ಕಾರ್ಯ ಮಾಡಲು ಅಶಕ್ತನಾದಾಗ ಕುಕ್ಕೆ ತಲುಪಲು ಸಾಧ್ಯವಾಗಲಿಲ್ಲವಂತೆ. ಆ ಸಮಯದಲ್ಲಿ ಕುಕ್ಕೆಯ ರಥೋತ್ಸವದ ದಿನ ರಥವು ಮುಂದೆ ಸಾಗದೆ ನಿಂತಿತಂತೆ ಯಾರೋ ಭಕ್ತಾದಿಗಳು ಹರಕೆ ಪೂರೈಸಿಲ್ಲವೆಂದು ಭಕ್ತರು ಮನಗಂಡು ಅನ್ನಭಟ್ಟರನ್ನು ಕರೆತಂದು ರಥೋತ್ಸವ ಜಾತ್ರೆ ನೆರವೇರಿಸಿದರಂತೆ, ಹೀಗಿರುವಾಗ ಸುಬ್ರಮಣ್ಯ ಸ್ವಾಮಿಯು ವಟುವಿನ ರೂಪದಲ್ಲಿ ಭಟ್ಟರಿಗೆ ಕನಸಿನಲ್ಲಿ ಕಾಣಿಸಿಕೊಂಡು ನಾನು ಇಲ್ಲೇ ನಿನ್ನ ಬಳಿಯೇ ನೆಲೆಸುವೇ ನಾಗಾಭರಣವನ್ನು ಕುಕ್ಕೆಯಿಂದ ತಂದು ನೀನು ಇಲ್ಲೇ ನನ್ನನ್ನು ಆರಾಧಿಸೆಂದು ಹೇಳಿದಂತಾಯ್ತಂತೆ. ಹೀಗಿರುವ ಸಂದರ್ಭದಲ್ಲಿ, ಪಿನಾಕಿನಿ ನದಿಯ ಉತ್ತರ ಭಾಗದಲ್ಲಿ ಏಳು ಹೆಡೆಯ ನಾಗರೂಪದ ಸ್ವಾಮಿಯ ವಿಗ್ರಹವು ನೇಗಿಲಿಗೆ ಸಿಕ್ಕು ದೊರೆಯಿತು. ಅಂದಿನಿಂದ ಸುಬ್ರಮಣ್ಯನ ಸೇವೆ ನಾಗಲ ಮಡಿಕೆಯಲ್ಲಿ ಪ್ರಾರಂಭವಾಯಿತೆಂದು ಇಂದಿಗೂ ಭಕ್ತರೂ ತಮ್ಮ ಬೇಡಿಕೆಗಳನ್ನು ಹೊತ್ತು ಇಲ್ಲಿಗೆ ಬರುತ್ತಾರೆ.

**ಐತಿಹಾಸಿಕ ಹಿನ್ನೆಲೆ**

ಅನ್ನಭಟ್ಟರ ಕಾಲದಲ್ಲಿ ಸ್ಥಾಪಿತವಾದ ವಿಗ್ರಹಕ್ಕೆ ಮುಂದೆ ವ್ಯಾಪಾರಿ ಬಾಲಸುಬ್ಬಯ್ಯ ಎಂಬುವರಿಂದ ಛಾವ ಣಿಯ ಹೊದಿಕೆ ನಿರ್ಮಾಣವಾಯಿತಂತೆ ಮುಂದುವರಿದು ತನ್ನ ವ್ಯಾಪಾರದಲ್ಲಿ ಸ್ವಾಮಿಯ ಕೃಪೆಯಿಂದ ಅಭಿವೃದ್ಧಿ ಕಂಡ ಇವರು ಸುಂದರ ದೇಗುಲವನ್ನು ನಿರ್ಮಾಣ ಮಾಡಿ ಸಿದ್ದಾರೆ.

**ಸುಬ್ರಮಣ್ಯ ದೇಗುಲ**

ಸುಂದರವಾದ ಗುಡಿಯೊಳಗೆ ಅಂದದ ಗರ್ಭಗೃಹದಲ್ಲಿ ಏಳು ಹೆಡೆಯ ವಿಗ್ರಹರೂಪದ ಸ್ವಾಮಿ ದರ್ಶನ ನೀಡುತ್ತಾನೆ. ದೇಗುಲದ ಸುತ್ತಲೂ ಶಿವ ಹಾಗೂ ಆಂಜನೇಯ ದೇಗುಲ ವಿದೆ. ಇಲ್ಲಿ ಪ್ರತೀ ವರ್ಷವೂ ಪುಷ್ಯ ಶುದ್ಧ ಷಷ್ಠಿಯ ದಿನ ವಾರ್ಷಿಕ ಬ್ರಹ್ಮ ರಥೋತ್ಸವವು ಜರುಗುತ್ತದೆ. ಆಂಧ್ರಪ್ರದೇಶದ ಗಡಿ ಭಾಗವಾದ್ದರಿಂದ ಕರ್ನಾಟಕ ಮತ್ತು ಆಂಧ್ರಪ್ರದೇಶ ಭಕ್ತ ಜನರು ಹೆಚ್ಚಾಗಿ ಆಗಮಿಸುತ್ತಾರೆ. ಸರ್ಪ ಸಂಸ್ಕಾರ, ಆಶ್ಲೇಷ ಬಲಿ,ನಾಗಪ್ರತಿಷ್ಠೆ, ನಾಗದೋಷ ಪರಿಹಾರ ಇತ್ಯಾದಿ ಪೂಜಾ ವಿಧಿಗಳನ್ನು ನೆರವೇರಿಸಲಾಗುತ್ತದೆ.


## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

– ಕಾರ್ಯನಿರ್ವಹಣಾಧಿಕಾರಿ



# ಪಂಚ ಲಿಂಗ ದರ್ಶನ


- ಬಿ. ಆರ್. ಶ್ರೀಕಂಠಯ್ಯ

9449457684


ಪಂಚ ಎಂದರೆ "ಐದು" . ಈ ಪಂಚದ ಪ್ರಾಮುಖ್ಯತೆ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ. ಈಶ್ವರನ ಪಂಚ ಮುಖಗಳು-ತತ್ಪುರುಷ, ಅಘೋರ, ಸದ್ಯೋಜಾತ, ವಾಮ ದೇವ, ಈಶಾನ. ತಲಕಾಡಿನ ಪಂಚಲಿಂಗಗಳು, ಆಂಧ್ರ ಪ್ರದೇಶದಲ್ಲಿರುವ,ಪಂಚರಾಮ ಕ್ಷೇತ್ರಗಳು ಬಹಳ ಪ್ರಸಿದ್ಧಿ ಯಾಗಿವೆ.ಹಾಗೆಯೇ ಪಂಚಪಾಂಡವರು, ಪಂಚೇಂದ್ರಿಯ ಗಳು,ಪಂಚಕೋಶಗಳು,ಪಂಚಾಮೃತ,ಪಂಚಗವ್ಯ, ಪಂಚಾ ಯತ ಪೂಜೆ, ಪಂಚಾಂಗ, ಪಂಚಪಲ್ಲವ, ಪಂಚವಟಿ, ಪಂಚ ರತ್ನಗಳು,ಪಂಚಕನ್ಯೆಯರು ಇತ್ಯಾದಿ. ಶಿವನ ಪಂಚ ಮುಖಗಳಿಂದ ಹರಿದ ಪಂಚಧಾರೆಗಳು'ಪಂಚಧಾರ' ಎಂಬ ಹೆಸರಿನಲ್ಲಿ,ಶ್ರೀಶೈಲಕ್ಷೇತ್ರದಲ್ಲಿ ಹರಿಯುತ್ತದೆ.

'ಪೃಥ್ವೀ'',''ಜಲ'',ತೇಜಸ್ಸು'',''ವಾಯು'',ಮತ್ತು ಆಕಾಶ''. ಲಿಂಗಗಳು ಪಂಚಭೂತಗಳನ್ನು ಪ್ರತಿನಿಧಿಸುತ್ತದೆ. ಕಾಂಚಿಪುರದಲ್ಲಿ-ಪೃಥ್ವಿಲಿಂಗ; ಜಂಬುಕೇಶ್ವರ-ಅಪೋಲಿಂಗ; ಅರುಣಾಚಲ-ತೇಜೋಲಿಂಗ; ಕಾಳಹಸ್ತಿ-ವಾಯುಲಿಂಗ; ಚಿದಂಬರ-ಆಕಾಶಲಿಂಗ, ಈ ಕ್ಷೇತ್ರಗಳ ದರ್ಶನಕ್ಕೆ ಅದರದೇ ಆದ ಪ್ರಾಮುಖ್ಯತೆ ಇದೆ. ವಿವಿಧ ರೀತಿಯ ಲಿಂಗಗಳನ್ನು ನಾವು ಕಾಣಬಹುದು. ಕಲ್ಲು, ರತ್ನ, ಲೋಹ, ಮರ, ಮಣ್ಣು,

"ಶೈಲಜಂ ರತ್ನಜಂ ಚೈವ ಲೋಹಜಂ ದಾರುಜಂ ತಥಾ।
ಮೃಣಯಂ ಕ್ಷಣಿಕಂ ಚೈವ ಷಡ್ವಿಧಂ ಲಿಂಗಮುಚ್ಯತೆ ॥

ರತ್ನಜಲಿಂಗಗಳು. ಮುತ್ತು, ಹವಳ, ಮಾಣಿಕ್ಯ, ಪುಷ್ಯ ರಾಗ, ವಜ್ರ, ನೀಲ, ವೈಡೂರ್ಯ, ಮರಕತ, ಗೋಮೇಧಿಕ, ಈ ಒಂಭತ್ತು ನವರತ್ನಗಳು. ಹಾಗೆಯೇ, ಪಚ್ಚೆಕಲ್ಲು, ಸ್ಪಟಿಕ, ಸೂರ್ಯಕಾಂತ,ಚಂದ್ರಕಾಂತ ಇತ್ಯಾದಿ ಲಿಂಗಗಳು. ಶ್ರೀ ಶೃಂಗೇರಿ ಪೀಠದಲ್ಲಿ "ಸ್ಪಟಿಕಲಿಂಗ'',ಬೆಂಗಳೂರಿನ, ರಾಗಿ ಗುಡ್ಡ ಕ್ಷೇತ್ರ, ನಂಜನಗೂಡು, ಹೀಗೆ ನಾವು ಅನೇಕ ಕ್ಷೇತ್ರಗಳಲ್ಲಿ ವಿವಿಧ ರೀತಿಯ ಲಿಂಗಗಳನ್ನು ಕಾಣಬಹುದು. ನರ್ಮದಾ ನದಿ ಯಲ್ಲಿ ದೊರೆಯುವ ಬಾಣಲಿಂಗ."ಸ್ವಯಂಭು" ಲಿಂಗಗಳು, ತನಗೆ ತಾನೇ ಉದ್ಭವಿಸಿರುವುದು. ಇದನ್ನು ಅನೇಕ ಯಾತ್ರಾ ಕ್ಷೇತ್ರಗಳಲ್ಲಿ ನೋಡಿದ್ದೇವೆ.

ಶಿವಲಿಂಗ ಮತ್ತು ನೀರಿಗೆ ಹೆಚ್ಚಿನ ಸಂಬಂಧವಿದೆ. ಶಿವ "ಅಭಿಷೇಕ" ಪ್ರಿಯ, ವಿಷ್ಣು - ಅಲಂಕಾರಪ್ರಿಯ. ಧಾರಪಾತ್ರೆಯ ಮೂಲಕ ನಿರಂತರವಾಗಿ ಲಿಂಗದ ಮೇಲೆ ಜಲ ಬೀಳಬೇಕು. ರುದ್ರನಿಗೆ ನಮಕ, ಚಮಕಗಳಿಂದ ಅಭಿಷೇಕ ಮಾಡಿದರೆ, ಶಿವನು ನಮಗೆ ಎಲ್ಲ ರೀತಿಯ ಮಂಗಳವನ್ನು ದಯಪಾಲಿಸು ತ್ತಾನೆ. ಮಹನ್ಯಾಸಪೂರ್ವಕವಾಗಿ, ಏಕವಾರ (ಒಂದು ಸಾರಿ), ಏಕಾದಶವಾರ (ಹನ್ನೊಂದುಸಾರಿ ) ರುದ್ರಾಭಿಷೇಕ ಮಾಡುವ ಪದ್ಧತಿ ಸಾಮಾನ್ಯವಾಗಿ ಪ್ರಚಲಿತವಾಗಿದೆ. ಹೀಗೆಯೇ, "ರುದ್ರ ಹೋಮ" ಮಾಡುವುದನ್ನು ನಾವು ನೋಡಿದ್ದೇವೆ. ಹೋಮ ಮತ್ತು ರುದ್ರ ಪಾರಾಯಣಕ್ಕೂ ಕೆಲವು ಸಂಖ್ಯೆಯ ಲೆಕ್ಕಚಾರವಿದೆ. "ರುದ್ರ" ಎಂಬುದಕ್ಕೆ ಅನೇಕ ಆಚಾರ್ಯರು ವಿವಿಧ ರೀತಿಯ



ಅರ್ಥಗಳನ್ನು ಕೊಟ್ಟಿದ್ದಾರೆ. ರುದ್ರನು ನಮಗೆ ಬರುವ, ಕಷ್ಟ, ದುಃಖ, ನಿವಾರಣೆ ಮಾಡಿ ಮಂಗಳವನ್ನುಂಟು ಮಾಡುತ್ತಾನೆ. ಜ್ಞಾನವನ್ನು ದಯಮಾಡುತ್ತಾನೆ. ಅಜ್ಞಾನವನ್ನು ಕಳೆದು ಜ್ಞಾನವನ್ನು ಕರುಣಿಸುತ್ತಾನೆ. ಶಿವನ ನಾನಾ ರೂಪದ ಮೂರ್ತಿಗಳನ್ನು ನಾವು ಕಾಣಬಹುದು - ಗೌರಿಶಂಕರ, ನಟರಾಜ, ಯೋಗೇಶ್ವರ, ಗಂಗಾಧರ, ಉಮಾಮಹೇಶ್ವರ, ತಾಂಡವೇಶ್ವರ, ಚಂದ್ರಶೇಖರ, ಸದಾಶಿವ, ಕಿರಾತಾರ್ಜುನ ಭಿಕ್ಷಾಟನ ಮೂರ್ತಿ, ಅರ್ಧನಾರೀಶ್ವರ, ಹಾಗೆಯೇ ರಾಜರುಗಳ ಹೆಸರಿನಲ್ಲಿ ಚಾಮರಾಜೇಶ್ವರ, ರಾಜರಾಜೇಶ್ವರ, ಶ್ರೀರಾಮನ ಹೆಸರಿನಲ್ಲಿ "ರಾಮೇಶ್ವರ", ವರ್ತಕರ ಹೆಸರಿನಲ್ಲಿ "ನಗರೇಶ್ವರ" ಇತ್ಯಾದಿ .

## ತಲಕಾಡು ಪಂಚಲಿಂಗೇಶ್ವರ

"ಪಂಚಲಿಂಗ" ಗಳ ದರ್ಶನ ಬಹಳ ಪವಿತ್ರವಾದುದು ಮತ್ತು ಪ್ರಸಿದ್ಧಿಯಾದುದು. ಪಂಚಲಿಂಗಗಳನ್ನು ನಾವು ಅನೇಕ ಕಡೆ ನೋಡಬಹುದು. ಆದರೆ ಕರ್ನಾಟಕದ ತಲಕಾಡಿನ "ಪಂಚಲಿಂಗ" ದರ್ಶನ ವಿಶೇಷವಾದುದು. ಈ ಕ್ಷೇತ್ರ, ಮರಳಿನಿಂದ ಅವೃತವಾಗಿದೆ. ಇದಕ್ಕೆ "ಅಲಮೇಲಮ್ಮನ" ಶಾಪ ಕಾರಣ.

ಸ್ಥಳ ಪುರಾಣದ ಪ್ರಕಾರ, "ತಲಕಾಡು" ಎಂಬ ಹೆಸರಿನ ಹಿಂದೆ ಕಾರಣವಿದೆ. ಇದು "ತಲ" ಮತ್ತು ಕಾಡ" ಎಂಬ ಇಬ್ಬರು ಬೇಡರ ಹೆಸರುಗಳು. ಹಿಂದೆ ಸೋಮದತ್ತನೆಂಬ ಬ್ರಾಹ್ಮಣನು, ಕಾಶಿಯಲ್ಲಿ ವಿಶ್ವೇಶ್ವರನನ್ನು ಕುರಿತು ಮೋಕ್ಷಕ್ಕಾಗಿ ತಪಸ್ಸು ಮಾಡುತ್ತಿದ್ದನು. ಶಿವನು ಪ್ರತ್ಯಕ್ಷನಾಗಿ ಆತನಿಗೆ, ಇಲ್ಲಿ ನಿನ್ನ ತಪಸ್ಸಿಗೆ "ಫಲ" ಸಿಗುವುದಿಲ್ಲ. ಅದರಿಂದ ದಕ್ಷಿಣದಿಕ್ಕಿನಲ್ಲಿ, ದಕ್ಷಿಣ ಗಂಗೆಯಾದ "ಕಾವೇರಿ" ತೀರದಲ್ಲಿ "ಗಜಾರಣ್ಯ" ಎಂಬ ಕ್ಷೇತ್ರವಿದೆ, ಅಲ್ಲಿಗೆ ಹೋಗಿ ತಪಸ್ಸನ್ನು ಆಚರಿಸು ನಿನಗೆ "ಸಾಯುಜ್ಯ ಮುಕ್ತಿ"ಯನ್ನು ಕರುಣಿಸುತ್ತೇನೆ ಎಂದು ಹೇಳಿ ಅಂತರ್ಧಾನನಾದನು. ಶಿವನ ಅಣತಿಯಂತೆ, ಸೋಮದತ್ತನು ತನ್ನ ಶಿಷ್ಯರೊಡನೆ, ದಕ್ಷಿಣಕಾಶೀ ಕ್ಷೇತ್ರಾಭಿಮುಖವಾಗಿ ಬರುತ್ತಿರುವಾಗ, ವಿಂದ್ಯಪರ್ವತ ಸಮೀಪದಲ್ಲಿದ್ದ "ಕಾಡಾನೆಗಳು", ಸೋಮದತ್ತ ಮತ್ತು ಅವರ ಶಿಷ್ಯರನ್ನು ಸಂಹರಿಸಿಬಿಟ್ಟವು. ಅವಸಾನಕಾಲದಲ್ಲಿ "ಆನೆ, ಆನೇ" ಎಂದು ಸಂಹೃತರಾದ ಕಾರಣ, ಅವರೆಲ್ಲರೂ, ಆನೆಗಳಾಗಿ ಜನ್ಮತಳೆದು, ಪವಿತ್ರಸ್ಥಳವಾದ "ಋಚೀಕ" ಋಷಿಗಳ ಆಶ್ರಮದ ಬಳಿಯಿದ್ದ ಅರಣ್ಯದಲ್ಲಿ ಸೇರಿ ಆನೆಯ ರೂಪದಲ್ಲಿ ವಾಸವಾಗಿದ್ದರು. ಆನೆಯ ರೂಪದಲ್ಲಿದ್ದರೂ, ಪೂರ್ವಜನ್ಮದ ಸಂಸ್ಕಾರ ಮತ್ತು ಪರಮೇಶ್ವರನ ಅನುಗ್ರಹದಿಂದ, ಸೋಮದತ್ತ ಮತ್ತು ಅವನ ಶಿಷ್ಯರಿಗೆ ಪೂರ್ವಜನ್ಮದ ಸ್ಮರಣೆಯಿಂದ, ಈ ಆನೆಯ ರೂಪದ ಗುರುಶಿಷ್ಯರು, ಪ್ರತಿನಿತ್ಯವೂ, "ಗೋಕರ್ಣ " ಸರೋವರದಲ್ಲಿ ಸ್ನಾನ ಮಾಡಿ ಸೊಂಡಲಿನಲ್ಲಿ ಜಲವನ್ನು ತೆಗೆದುಕೊಂಡು , ಅಲ್ಲಿಯೇ ಬೆಳೆದಿದ್ದ ಪುಷ್ಪಗಳಿಂದ, ಬೂರುಗದ ಮರದ ಬುಡದಲ್ಲಿ ನೀರನ್ನು ಹಾಕಿ ಪುಷ್ಪಗಳಿಂದ ಪೂಜಿಸಿ ಹೊರಟುಹೋಗುತ್ತಿದ್ದವು.

ಈ ಆನೆಗಳ ದಿನಚರಿಯನ್ನು ಅದೇ ಅರಣ್ಯದಲ್ಲಿ ವಾಸವಿದ್ದ "ತಲ" ಮತ್ತು "ಕಾಡ" ಎಂಬ ಇಬ್ಬರು ಬೇಡರು

ಗಮನಿಸುತ್ತಿದ್ದರು. ಒಂದು ದಿನ ಕುತೂಹಲದಿಂದ, ಇದರ ರಹಸ್ಯವನ್ನು ತಿಳಿಯಲು, ಆ ಬೂರುಗದ ಬುಡಕ್ಕೆ "ಕೊಡಲಿ" ಯಿಂದ ಕತ್ತರಿಸಲು ಪ್ರಯತ್ನಿಸಿದರು. ಬುಡಕ್ಕೆ ಏಟುಬಿದ್ದಾಗ, ರಕ್ತಧಾರೆಯು ಚಿಮ್ಮಿತು. ಭಯಭೀತರಾದ ತಲ ಮತ್ತು ಕಾಡ, ರಕ್ತದ ತಾಣವನ್ನು ಹುಡುಕಲಾರಂಭಿಸಿದರು. ಆಗ ತಲೆಯ ಭಾಗದಲ್ಲಿ ರಕ್ತ ಬರುತ್ತಿರುವ "ಶಿವಲಿಂಗ"ವನ್ನು ಕಂಡರು. ತಾವು ತಪ್ಪು ಮಾಡಿದೆವು ಎಂಬ ಭಾವನೆಯಿಂದ ಮೂರ್ಛಾವಸ್ಥೆಯಲ್ಲಿದ್ದ, ಬೇಡರಿಗೆ "ಹೆದರ" ಬೇಡಿ ಇದೆಲ್ಲ ನನ್ನ ಸಂಕಲ್ಪದಿಂದ ನಡೆದಿದೆ. ಈ ಬೂರುಗದ ಮರದ ಹಣ್ಣನ್ನು ಮತ್ತು ಎಲೆಯನ್ನು ಅರೆದು ನನ್ನ ತಲೆಗೆ ಲೇಪಿಸಿದರೆ, ರಕ್ತವು ನಿಲ್ಲುತ್ತದೆ. ಈ ಹರಿಯುತ್ತಿರುವ ರಕ್ತವು ಹಾಲಾಗುತ್ತದೆ. ಈ ಹಾಲನ್ನು ನೀವು ಪಾನಮಾಡಿ. ಇದರಿಂದ ನಿಮಗೆ ವಿಶೇಷ ಆದಿಪತ್ಯವು ದೊರೆಯುತ್ತದೆ ಮತ್ತು ನಿಮ್ಮ ಹೆಸರಿನಿಂದಲೆ ಈ ಕ್ಷೇತ್ರವು ಪ್ರಸಿದ್ಧಿಯಾಗುತ್ತದೆ ಎಂದು ಹೇಳಿ ಮೂರ್ಛಾವಸ್ಥೆಯಲ್ಲಿದ್ದ ಬೇಡರನ್ನು ಎಚ್ಚರಿಸಿದನು. ಬೇಡರು ತಮ್ಮ ಸಹಜ ಸ್ಥಿತಿಗೆ ಮರಳಿ, ಶಿವನ ಆದೇಶದಂತೆ, ಹಣ್ಣು ಮತ್ತು ಎಲೆಯನ್ನು ಅರೆದು ಶಿವಲಿಂಗಕ್ಕೆ ಹಚ್ಚಿದರು. ರಕ್ತವು ನಿಲ್ಲಿತು, ರಕ್ತವು ಹಾಲುಧಾರೆಯಾಗಿ ಪರಿಣಮಿಸಿತು.ಹಾಲನ್ನು ಸೇವಿಸಿದರು. ಅವರಿಗೆ ವಿಶೇಷ ಜ್ಞಾನಲಭಿಸಿ ಪ್ರಮಥಗಣಾಧಿಪತ್ಯ ಲಭ್ಯವಾಯಿತು. ಈ ಎಲ್ಲ ಮಹಿಮೆಗೆ ಕಾರಣರಾದವರು "ತಲ ಮತ್ತು ಕಾಡ". ಪರಮೇಶ್ವರನ ಅನುಗ್ರಹದಂತೆ,ಈ ಕ್ಷೇತ್ರಕ್ಕೆ "ತಲಕಾಡು" ಎಂಬ ಹೆಸರು ಬಂದಿದೆ. ಶಿವನು ತನ್ನ ಗಾಯಕ್ಕೆ "ಔಷಧ"ವನ್ನು ತಾನೇ ಹೇಳಿದ ಕಾರಣ, ಆ ಲಿಂಗಕ್ಕೆ "ವೈದ್ಯೇಶ್ವರ" ನೆಂದು ಪ್ರಸಿದ್ಧಿಯಾಗಿದೆ ಎಂದು ತಿಳಿದು ಬರುತ್ತದೆ.

ಆನೆಗಳ ರೂಪದಲ್ಲಿ ಸೋಮದತ್ತ ಮತ್ತು ಅವರ ಶಿಷ್ಯರು, ಪೂಜೆಗಾಗಿ ಬಂದಾಗ, ಅಲ್ಲಿಯ ಪವಾಡವನ್ನು ನೋಡಿ, ಅಲ್ಲಿ ಹರಿಯುತ್ತಿದ್ದ "ಕ್ಷೀರ" ವನ್ನು ಪಾನ ಮಾಡಿದರು. ಈ ಪವಿತ್ರವಾದ ಕ್ಷೀರಪಾನದಿಂದ, ಅವರುಗಳ ಆನೆಯ ರೂಪಮಾಯವಾಗಿ ಮಾನವ ಜನ್ಮ ಪಡೆದು ಸಶರೀರವಾಗಿ "ಮೋಕ್ಷ"ವನ್ನು ಹೊಂದಿದರು. ಆನೆಯ ರೂಪದಲ್ಲಿದ್ದ "ಸೋಮದತ್ತ" ಮತ್ತು ಅವನ ಶಿಷ್ಯರಿಗೆ , ಈ ಪವಿತ್ರ ಸ್ಥಳದಲ್ಲಿ ಮೋಕ್ಷ ಲಭ್ಯವಾದ್ದರಿಂದ, ಈ ಪವಿತ್ರ ಕ್ಷೇತ್ರಕ್ಕೆ "ಗಜಾರಣ್ಯ" ಕ್ಷೇತ್ರವೆಂಬ ಹೆಸರು ಬಂದಿದೆ. ಈ ಎಲ್ಲಾ ಮಹಿಮೆಗಳು ನಡೆದ ಪವಿತ್ರದಿನ "ವೈಶಾಖ ಶುದ್ಧ ಪೂರ್ಣಿಮೆ". ಆದ್ದರಿಂದ, ಪ್ರತಿ ವರ್ಷವೂ, ಈ ದಿನವನ್ನು"ವೈದ್ಯೇಶ್ವರ ಪ್ರತ್ಯಕ್ಷ ದರ್ಶನೋತ್ಸವ"ಎಂದು ವಿಶೇಷವಾಗಿ ಆಚರಿಸಲಾಗುವುದು ಎಂದು ತಿಳಿದು ಬರುತ್ತದೆ.

ತಲಕಾಡು ಬರೀ ಮರಳಾಗಿದೆ ಮತ್ತು ಮಾಲಂಗಿ ಮಡುವಾಗಿದೆ. ಇದಕ್ಕೆ ಕಾರಣ ಅಲಮೇಲಮ್ಮನ ಶಾಪ. ಸಂತೋಷದಿಂದ ಕೊಟ್ಟರೆ "ವರ" ಕೋಪದಲ್ಲಿ ಕೊಟ್ಟರೆ "ಶಾಪ". ಅದರಿಂದ , ಕೋಪವೇ ಎಲ್ಲ ಮೂಲಕ್ಕೂ ಕಾರಣ. ಅದರಿಂದ, ಕೋಪದಲ್ಲಿ ಏನು ಮಾತಾಡುತ್ತೇವೆ ಎಂಬ ಅರಿವು ಇರುವುದಿಲ್ಲ. ಕೋಪದಲ್ಲಿ ಮಾಡಿದ ಅನೇಕ ಕಾರ್ಯಗಳು, ಅನಾಹುತಕ್ಕೆ ಕಾರಣವಾಗುತ್ತದೆ. ಅಲಮೇಲಮ್ಮ, ಶ್ರೀರಂಗರಾಯನ ಮಡದಿ, ಶ್ರೀರಂಗರಾಯ, ಶ್ರೀರಂಗಪಟ್ಟಣದ ರಾಜ ಪ್ರತಿನಿಧಿಯಾಗಿದ್ದನು. ಶ್ರೀರಂಗರಾಯನಿಗೆ "ಬೆನ್ನುಫಣಿ" ಖಾಯಿಲೆ ಇದ್ದಿತು. ಅದರ ಪರಿಹಾರಕ್ಕಾಗಿ, ತಲಕಾಡಿನ "ವೈದ್ಯನಾಥೇಶ್ವರ"ನ ಸೇವೆಮಾಡಲು, ಮಡದಿಯಾದ ಅಲಮೇಲಮ್ಮನ ಸಹಿತ, ತಲಕಾಡಿಗೆ ಬಂದನು. ಆದರೆ ಅವರ ಕರ್ಮಾನುಸಾರ, ಖಾಯಿಲೆ ವಾಸಿಯಾಗದೆ ಶ್ರೀರಂಗರಾಯನು ಮರಣ ಹೊಂದಿದನು. ಪತಿವಿಯೋಗದ ನಂತರ, ಅಲಮೇಲಮ್ಮನು, ತಲಕಾಡಿನ ಸಮೀಪದ, "ಮಾಲಂಗಿ" ಎಂಬ ಊರಿನಲ್ಲಿ ನೆಲೆಸಿದರು.

ಅಲಮೇಲಮ್ಮನು, ಶ್ರೀರಂಗಪಟ್ಟಣದಲ್ಲಿದ್ದಾಗ, ಪ್ರತಿ "ಶುಕ್ರವಾರ"ಗಳಂದು, ಶ್ರೀರಂಗನಾಥನ ದೇವಾಲಯದ "ಶ್ರೀರಂಗನಾಯಕಿ" ಯ ವಿಶೇಷ ಪೂಜೆಗಾಗಿ, ತನ್ನ ಮೂಗುತಿ, ಮತ್ತು ಅಮೂಲ್ಯವಾದ ಆಭರಣಗಳನ್ನು ದೇವಿಯ ಅಲಂಕಾರಕ್ಕಾಗಿ ಕೊಡುತ್ತಿದ್ದಳು ಮತ್ತು ಪೂಜೆಯ ನಂತರ ಹಿಂದಕ್ಕೆ ಪಡೆಯುತ್ತಿದ್ದಳು. ಆ ಕ್ಷೇತ್ರವನ್ನು ಬಿಟ್ಟ ಮೇಲೆ ಈ ಕಾರ್ಯ ನಿಂತು ಹೋಗಿತ್ತು. ಈ ಆಭರಣಗಳ ವಿಷಯವಾಗಿ, ದೇವಾಲಯದ ಅಧಿಕಾರಿ, ರಾಜ ಒಡೆಯರಿಗೆ ತಿಳಿಸುತ್ತಾನೆ. ಒಡೆಯರು, ಅಲಮೇಲಮ್ಮನನ್ನು, ಆಭರಣಗಳನ್ನು ಎಂದಿನಂತೆ, ದೇವಿಯ ಅಲಂಕಾರಕ್ಕಾಗಿ ಕಳಿಸಿಕೊಡಲು ಕೇಳುತ್ತಾರೆ. ಆದರೆ ಆಕೆ ಒಪ್ಪುವುದಿಲ್ಲ. ಅದಕ್ಕೆ ರಾಜಒಡೆಯರು, ಆಭರಣಗಳನ್ನು ಕೊಡದಿದ್ದರೆ , ಬಲತ್ಕಾರವಾಗಿ ತೆಗೆದುಕೊಳ್ಳಲಾಗುವುದು ಎಂದು ಆದೇಶವನ್ನು ಕಳಿಸುತ್ತಾರೆ.ಆದರೆ ಆತುರದಿಂದ ಅಲ ಮೇಲಮ್ಮನು, ತನ್ನ ಆಭರಣಗಳನ್ನು ತನ್ನ ಸೆರಗಿನಲ್ಲಿ ಕಟ್ಟಿಕೊಂಡು,ಮಾಲಂಗಿ ಮಡುವಿಗೆ ಹಾರಿ ಪ್ರಾಣಕಳೆದು ಕೊಳ್ಳುತ್ತಾಳೆ ಎಂದು ತಿಳಿದು ಬರುತ್ತದೆ ಹಾರುವಾಗ ಆಕೆ -

ತಲಕಾಡು ಮರಳಾಗಲಿ, ಮಾಲಂಗಿ ಮಡುವಾಗಲಿ
ಮೈಸೂರು ದೊರೆಗಳಿಗೆ ಮಕ್ಕಳಿಲ್ಲದೆ ಹೋಗಲಿ

ಎಂದು ಶಾಪ ಹಾಕಿ ಹಾರುತ್ತಾಳೆ. ಅದರಂತೆ, ಆಕೆಯ ಶಾಪ ಇಂದಿಗೂ ಪ್ರಸ್ತುತವಿದೆ. ಆದರಿಂದಲೆ, ತಲಕಾಡು "ಮರಳು" ಕಾಡಾಗಿದೆ. ನಂತರ, ರಾಜ ಒಡೆಯರು ಅಲ

ಮೇಲಮ್ಮನು ಆತುರದಲ್ಲಿ ಮಾಡಿದ ಕಾರ್ಯಕ್ಕೆ ವ್ಯಥೆ ಪಡುತ್ತಾರೆ. ಇದು ತಲಕಾಡಿನ ಸಂಕ್ಷಿಪ್ತ ವಿವರಣೆ.

**ಇಲ್ಲಿರುವ ಪಂಚಲಿಂಗಗಳು -**

೧)ಶ್ರೀವೈದ್ಯನಾಥೇಶ್ವರ ೨) ಶ್ರೀಪಾತಾಳೇಶ್ವರ ೩)ಶ್ರೀಮರಳೇಶ್ವರ ೪) ಶ್ರೀಅರ್ಕೇಶ್ವರ ೫) ಶ್ರೀಮಲ್ಲಿಕಾರ್ಜುನೇಶ್ವರ. ಈ ಪಂಚಪರಮೇಶ್ವರರೆ, ಪ್ರಸಿದ್ಧಿಯಾದ ತಲಕಾಡಿನ ಪಂಚಲಿಂಗಗಳು.

ಶ್ರೀವೈದ್ಯನಾಥೇಶ್ವರ - ತಲಕಾಡಿನಲ್ಲಿದೆ. ಈ ದೇವಾಲಯದ ವಾತಾವರಣ ಮತ್ತು ಶಿಲ್ಪ ಕಲೆ ಬಹಳ ಚೆಂದವಾಗಿದೆ. ಇಲ್ಲಿಯ ಎತ್ತರವಾದ ದ್ವಾರಪಾಲಕ ವಿಗ್ರಹಗಳು ಬಹಳ ಸುಂದರವಾಗಿದೆ. ಇಲ್ಲಿಯ ದೇವಿ "ಮನೋನ್ಮಣಿ".

ಶ್ರೀ ಪಾತಾಳೇಶ್ವರ - ಹೆಸರಿಗೆ ತಕ್ಕಂತೆ, ಈ ದೇವಾಲಯ, ಸ್ವಲ್ಪ ಕೆಳಭಾಗದಲ್ಲಿದೆ. ಶ್ರೀ ವೈದ್ಯನಾಥನ ದೇವಾಲಯದ ದಕ್ಷಿಣ ದಿಕ್ಕಿನಲ್ಲಿದೆ. ಸ್ವಲ್ಪ ಮರಳಿನಿಂದ ಆವೃತವಾಗಿದೆ.

ಶ್ರೀಮರಳೇಶ್ವರ - ಈ ದೇವಾಲಯಕ್ಕೆ, ಮರಳಿನಲ್ಲಿಯೇ ನಡೆದು ಹೋಗಬೇಕು. ಇದು ವೈದ್ಯನಾಥನ ಪಶ್ಚಿಮಕ್ಕಿದೆ.

ಶ್ರೀಅರ್ಕೇಶ್ವರ - ಈ ದೇವಾಲಯ ತಲಕಾಡಿನ ಶ್ರೀ ವೈದ್ಯನಾಥೇಶ್ವರನ ಪೂರ್ವ ಭಾಗದಲ್ಲಿದೆ. ತಲಕಾಡಿಗೆ ಸ್ವಲ್ಪ ದೂರದಲ್ಲಿದೆ. ಈ ಈಶ್ವರನನ್ನು, ಸೂರ್ಯದೇವನು ಅರ್ಚಿಸಿದ್ದರಿಂದ ಈತನಿಗೆ "ಅರ್ಕೇಶ್ವರ" ನೆಂದು ಪ್ರಸಿದ್ಧಿಯಾಗಿದೆ. ರಥಸಪ್ತಮಿಯ ದಿನ ಲಿಂಗದ ಮೇಲೆ ಸೂರ್ಯನ ಕಿರಣಗಳು ನೇರವಾಗಿ ಬೀಳುತ್ತದೆ ಎಂದು ಹೇಳುತ್ತಾರೆ.

ಶ್ರೀ ಮಲ್ಲಿಕಾರ್ಜುನೇಶ್ವರ - ಈ ದೇವಾಲಯವು ಸ್ವಲ್ಪ ಎತ್ತರದಲ್ಲಿದೆ ಮತ್ತು ಶ್ರೀ ವೈದ್ಯನಾಥನ ಉತ್ತರ ದಿಕ್ಕಿನಲ್ಲಿದೆ. ಮೆಟ್ಟಲನ್ನು ಏರಿ ಹೋಗಬೇಕು. ಬೆಟ್ಟದ ಬುಡದವರೆಗೂ, ವಾಹನದಲ್ಲಿ ಹೋಗಬಹುದು. ಮೆಟ್ಟಲನ್ನು ಏರುವಾಗ ದೇವಾಲಯದ ಮುಂಭಾಗದ ಎರಡು ಬದಿಯಲ್ಲಿ ಎತ್ತರವಾದ "ಬಸವ"ಗಳನ್ನು ಕಾಣಬಹುದು. ದೇವಾಲಯದ ಗೋಪುರ ಬಹಳ ಚೆನ್ನಾಗಿದೆ.

ಶ್ರೀ ವೈದ್ಯನಾಥನ ಸಮೀಪದಲ್ಲಿಯೇ 'ಗೋಕರ್ಣ" ಸರೋವರವಿದೆ. ಹತ್ತಿರವೆ, "ಗೋಕರ್ಣೇಶ್ವರ" ಮತ್ತು ಶ್ರೀ ಚೌಡೇಶ್ವರಿ ಅಮ್ಮನವರ ದೇವಾಲಯವಿದೆ. ಪಂಚಲಿಂಗಗಳ ದರ್ಶನಕ್ಕೆ ಒಂದು ಕ್ರಮವನ್ನು ಅನುಸರಿಸಲಾಗುತ್ತದೆ. ಒಂದೊಂದು ಲಿಂಗದ ದರ್ಶನದ ನಂತರ, ಶ್ರೀ ವೈದ್ಯನಾಥನಿಗೆ ವರದಿ ಸಲ್ಲಿಸಬೇಕು. ಈ ಪಂಚಲಿಂಗಗಳು, ಪರಮೇಶ್ವರನ ಪಂಚಮುಖಗಳ ಸ್ವರೂಪ, ಈ ಐದು ಲಿಂಗಗಳನ್ನು ಒಂದೇ ದಿನದಲ್ಲಿ ದರ್ಶನ ಮಾಡಬೇಕು ಎಂಬುದಾಗಿ ಹೇಳುತ್ತಾರೆ. ಇದು ಬಹಳ ಫಲಕಾರಿ.

ಪಂಚಲಿಂಗ ದರ್ಶನವು ಎಲ್ಲ ಕಾಲಗಳಲ್ಲಿ ನಡೆಯುವುದಿಲ್ಲ. ಯಾವ ಸಂವತ್ಸರದಲ್ಲಿ - ಕಾರ್ತಿಕ (ವೃಶ್ಚಿಕ) ಮಾಸದಲ್ಲಿ, ಐದು ಸೋಮವಾರಗಳು, ವಿಶಾಖ ನಕ್ಷತ್ರ, ಕುಹಯೋಗ, ಕಾರ್ತಿಕಮಾಸದ ಕೊನೆಯ ಸೋಮವಾರದಂದು ಅಮಾವಾಸ್ಯೆ. ಇವೆಲ್ಲವು ಸೇರುವ ದಿನ "ಪಂಚಲಿಂಗ" ಗಳ ದರ್ಶನ ಮತ್ತು ಪೂಜೆಗೆ "ಶ್ರೇಷ್ಠ"ವೆಂದು ನಿರ್ಧರಿಸಲಾಗಿದೆ. ಈ ಮುಹೂರ್ತವನ್ನು ನಾವು ಸುಲಭವಾಗಿ ಪಂಚಾಂಗದಲ್ಲಿ ನೋಡಬಹುದು. ಈ ಪಂಚಲಿಂಗ ದರ್ಶನದ ಭಾಗ್ಯ ಏಳು ಅಥವಾ ಹದಿಮೂರು ವರ್ಷಗಳಿಗೊಮ್ಮೆ ನಡೆದಿರುವುದನ್ನು ನಾವು ಸ್ಥಳಪುರಾಣದಿಂದ ತಿಳಿದುಕೊಳ್ಳಬಹುದು. ಈ ಉತ್ಸವಕ್ಕೆ, ನಮ್ಮ ಸರ್ಕಾರವು ದರ್ಶನಾರ್ಥಿಗಳಿಗೆ ಎಲ್ಲ ರೀತಿಯ ಅನು ಕೂಲಗಳನ್ನು ಕಲ್ಪಿಸಿಕೊಡುತ್ತದೆ. ಎಲ್ಲರೂ ಅವರವರ ಶಕ್ತ್ಯಾನುಸಾರ, ಈಪವಿತ್ರ ದರ್ಶನವನ್ನು ಮಾಡಬಹುದು. ಈ ಕ್ಷೇತ್ರದಲ್ಲಿ ಶ್ರೀ ಕೀರ್ತಿ ನಾರಾಯಣ ಸ್ವಾಮಿಯ ದೇವಸ್ಥಾನ ಬಹಳ ಚೆನ್ನಾಗಿದೆ. ಈತನ ದರ್ಶನವನ್ನು ಪಡೆಯಬಹುದು.

ತಲಕಾಡಿನಲ್ಲಿ, ಅದ್ವೈತ ತತ್ವದ "ಶ್ರೀ ಬಾಲಕೃಷ್ಣಾನಂದ" ಮಠವಿದೆ. ಇಲ್ಲಿ ಗುರುಗಳಿದ್ದಾರೆ. ಇಲ್ಲಿಯ ಆರಾಧ್ಯ ದೈವ "ಅಂಬೆ ಗಾಲಿನ ಬಾಲಕೃಷ್ಣ". ಕರಿಯ ಶಿಲೆಯ ಕೃಷ್ಣ ಬಹಳ ಮುದ್ದಾಗಿದೆ, ನೋಡಲು ಆನಂದವಾಗುತ್ತದೆ. "ಪಂಚಲಿಂಗ" ದರ್ಶನ ಕಾಲದಲ್ಲಿ ಇಲ್ಲಿ ಬರುವ ಯಾತ್ರಾರ್ಥಿಗಳಿಗೆ ಅನ್ನದಾನ ನಡೆಯುತ್ತದೆ ಎಂದು ತಿಳಿದುಬರುತ್ತದೆ. ತಲಕಾಡಿನ ಹತ್ತಿರವಿರುವ "ತಿರುಮು ಕೂಡಲು", "ಸೋಮನಾಥಪುರ" ಮತ್ತು "ಬಿಳಿಗಿರಿ" ರಂಗನನ್ನು ದರ್ಶಿಸಬಹುದು. ತಲಕಾಡು ಕಾವೇರಿ ತೀರದಲ್ಲಿದೆ. ಐತಿಹಾಸಿಕ ಹಿನ್ನಲೆಯ ಪವಿತ್ರಕ್ಷೇತ್ರ. ಇದು ಗಂಗರ ರಾಜಧಾನಿಯಾಗಿತ್ತು ಎಂದು ತಿಳಿದು ಬರುತ್ತದೆ. ಮೈಸೂರಿನಿಂದ ಸುಮಾರು ೫೦ ಕಿ.ಮೀ. ದೂರದಲ್ಲಿದೆ. ಬೆಂಗಳೂರಿಗೆ ಸುಮಾರು ೧೩೫ ಕಿ.ಮೀ. ಪಂಚಲಿಂಗಗಳ ದರ್ಶನದ ಭಾಗ್ಯ ಎಲ್ಲರಿಗೂ ಲಭಿಸಲಿ ಎಂದು ಪ್ರಾರ್ಥನೆ.

# ಭಗವದ್ಗೀತೆ ಹಾಗೂ ಅದರ ಪ್ರಸ್ತುತತೆ

- ಪ್ರಕಾಶ ಪರ್ವತೀಕರ
9894057557



ಗೀತಾ ಸುಗೀತಾ ಕರ್ತವ್ಯಾ ಕಿಮನ್ಯೈ ಶಾಸ್ತ್ರವಿಸ್ತರೈಃ।
ಯಾ ಸ್ವಯಂ ಪದ್ಮನಾಭಸ್ಯ ಮುಖಪದ್ಮಾದ್ವಿನಿಃ ಸೃತಾ ॥
ವೇದವ್ಯಾಸ (ಕೃಷ್ಣದ್ವೈಪಾಯನ )

ಬ್ರಹ್ಮಸೂತ್ರ ಉಪನಿಷತ್ತುಗಳು ಹಾಗೂ ಭಗವದ್ಗೀತೆ ಇವು ಮೂರು ಪ್ರಮಾಣಗ್ರಂಥಗಳು. ಮಹಾಭಾರತದ ಭೀಷ್ಮ ಪರ್ವತದಲ್ಲಿ ಒಳಗೊಂಡ ಭಗವದ್ಗೀತೆ, ಇದು ಜಗನ್ಮಾನ್ಯ ವಾದ ಅಲೌಕಿಕ ಗ್ರಂಥವಾಗಿದೆ. ಅದರ ಮಹತ್ವ ಹಾಗೂ ಅವಶ್ಯಕತೆ ಸರ್ವಕಾಲದಲ್ಲಿ ಅಬಾಧಿತವಾಗಿದೆ. ಇದು ಮಾನವ ಕುಲಕ್ಕೆ ಈಶ್ವರನು ಅಮೌಲ್ಯವಾದ ಕೊಟ್ಟ ಸಂಪತ್ತು ಆಗಿದೆ. ಅದಕ್ಕಾಗಿಯೇ ಭಗವದ್ಗೀತೆಯಲ್ಲಿ ಇದ್ದುದು ವಿಶ್ವದಲ್ಲಿ ಇದೆ ಹಾಗೂ ವಿಶ್ವದಲ್ಲಿ ಇರಲಾರದ್ದು ಇದರಲ್ಲಿ ಇಲ್ಲ ಎಂದು ಹೇಳಲಾಗುತ್ತಿದೆ. ಪ್ರಪಂಚದ ಪ್ರತಿಯೊಂದು ಸಿದ್ಧಾಂತಗಳು. ಚಿಂತನೆಗಳು ಈ ಗ್ರಂಥದಲ್ಲಿ ಒಳಗೊಂಡಿದೆ. ಹೀಗಾಗಿ ಇದು ಪರಿಪೂರ್ಣವಾದ ಮತ್ತು ಸ್ವಯಂ ಪೂರ್ಣವಾದ ಕಲಾಕೃತಿ ಆಗಿದೆ. ಇದಕ್ಕಾಗಿಯೇ ಈ ಕೃತಿಯನ್ನು "ವ್ಯಾಸೋಷ್ಟಿತ ಜಗ ತ್ರಯ ಎಂದು ವರ್ಣಿಸಲಾಗಿದೆ. ಇದರ ನಂತರ ಬರೆಯಲ್ಪಟ್ಟ ಗ್ರಂಥಗಳು ಕೇವಲ ಅನುಕರಣ ಹಾಗೂ ಅನುಸರಣೆ ಕೃತಿ ಯಾಗಿವೆ. ಅದಕ್ಕಾಗಿ ಯುಗಗಳು ಕಳೆದರೂ ಗೀತೆಯ ಆಕ ರ್ಷಣೆ ಜನರಲ್ಲಿ ಇನಿತೂ ಕಡಿಮೆ ಆಗಿಲ್ಲ.

ಮಹಾಭಾರತದ ಒಂದು ವಿಲಕ್ಷಣ ಪ್ರಸಂಗದಲ್ಲಿ, ಅದೂ ಕುರುಕ್ಷೇತ್ರದ ರಣಾಂಗಣದಲ್ಲಿ, ಮಹಾಯುದ್ಧ ಪ್ರಾರಂ ಭವಾಗುವ ಮುನ್ನ ಗೀತೆಯ ಆವಿರ್ಭಾವವಾಗುತ್ತದೆ. ಅದು ಕೇವಲ ಅರ್ಜುನನಿಗಾಗಿ ಅದರ ಹುಟ್ಟು ಆಗಿಲ್ಲ. ದಿಗ್ಭ್ರಮೆ ಗೊಂಡ ಅರ್ಜುನ ಯಾವ ಇಕ್ಕಟ್ಟಿನ ಅವಸ್ಥೆಯಲ್ಲಿ ಸಿಲುಕಿ ದ್ದನೋ, ಅದು ಸಾಮಾನ್ಯವಾಗಿ ವರ್ತಮಾನ ಕಾಲದ ಎಲ್ಲ ಮಾನವರ ಅವಸ್ಥೆಯೂ ಆಗಿದೆ. ಭಗವದ್ಗೀತೆ ತನ್ನ ಬೆರಳನ್ನು ಹಿಡಿದು ತನಗೆ ಮಾರ್ಗದರ್ಶನ ಮಾಡಲಿ ಎಂದು ದಿಗ್ಭ್ರಮೆ ಗೊಂಡ ಅರ್ಜುನನಿಗೆ ಆ ಕಾಲದಲ್ಲಿ ಅನಿಸಿತ್ತು. ಅದರಂತೆ ಧಾವಂತದಲ್ಲಿರುವ ಈಗಿನ ಮನುಷ್ಯನಿಗೂ ಹಾಗೆ ಅನಿಸುತ್ತಿದ್ದರೆ ಏನೇನೂ ಆಶ್ಚರ್ಯವಿಲ್ಲ. ಅರ್ಜುನ ಅನುಭವಿಸಿದ ತವಕ ತಲ್ಲಣ ಮತ್ತು ಸಂಕಟಗಳು ಅವುಗಳು ಅವನಿಗೆ ಮಾತ್ರ ಸೀಮಿತ ವಾಗಿಲ್ಲ. ಅವು ಈಗಲೂ ನಮ್ಮ ಮೇಲೂ ಎರಗುವ ಸಂಭವ ವಿದೆ. ಆಗ ಇದ್ದ ಕುರುಕ್ಷೇತ್ರದ ಮಾನಸಿಕತೆ ಪ್ರತಿ ವ್ಯಕ್ತಿಯಲ್ಲಿ ಈಗಲೂ ಜೀವಂತವಾಗಿದೆ. ವ್ಯಕ್ತಿಯ ಕರ್ಮೇಂದ್ರಿಯ ಮತ್ತು ಜ್ಞಾನೇಂದ್ರಿಯಗಳ ಜೊತೆಗೆ ಮನಸ್ಸು ವಿವೇಕ ಹಾಗೂ ಅಹಂ ಕಾರಗಳು ಎಲ್ಲಿಯವರೆಗೆ ಮೇಳೈಯಿಸುತ್ತಿವೆಯೋ ಅಲ್ಲಿಯ ವರೆಗೆ ಮನದಲ್ಲಿಯ ಕುರುಕ್ಷೇತ್ರ ಧಗಧಗಿಸುತ್ತಲೇ ಇರುತ್ತದೆ. ಅದರ ಕೂಡ ಗೀತೆಯ ತತ್ವಜ್ಞಾನವೂ ಕೂಡ !

ತತ್ವಜ್ಞಾನದ ಅಸದೃಶ ವಿಚಾರಗಳಿಂದ ತುಂಬಿದ ಗೀತೆಯ ಹುಟ್ಟು ಯುದ್ಧ ಭೂಮಿಯಲ್ಲಿ! ಕರ್ಮದ ಮಾಧ್ಯಮದಿಂದ ಯುದ್ಧ ಮತ್ತು ಶಾಂತಿಯ ನೀತಿನಿಯಮಗಳನ್ನು ಅದು ಉಪ ದೇಶಿಸುತ್ತದೆ. ಎದುರು ಇದ್ದ ತನ್ನ ಆಪ್ತೇಷ್ಟರನ್ನು ಕಂಡು ಕಿಂ ಕರ್ತವ್ಯ ಮೂಢನಾಗಿ ಅರ್ಜುನ ವಿಚಲಿತನಾಗಿರುತ್ತಾನೆ. ಅವನ ಧೈರ್ಯಕುಂದುತ್ತದೆ. ಅವಿಶ್ವಾಸದ ಮಡುವಿನಲ್ಲಿ ಪರಿಭ್ರಮಿಸು ತ್ತಿರುತ್ತಾನೆ. ಅರ್ಥಹೀನವಾದ ಜ್ಞಾನ ಮತ್ತು ಅಧಿಕಾರದ ಬಗ್ಗೆ

ಮಾತನಾಡಲು ಆರಂಭಿಸುತ್ತಾನೆ. ಆಗ ಸಾರಥಿಯ ಪಾತ್ರ ಮಾಡುತ್ತಿದ್ದ ನಿಯಾಮಕ,ಜಾಗ್ರತನಾದವನಂತೆ ಮೇಲೆ ಏಳುತ್ತಾನೆ. ಗಂಭೀರನಾಗಿ ವಿಚಾರ ಮಾಡುತ್ತಾನೆ.ಶೀಘ್ರವಾಗಿ ಇದರ ಮೇಲೆ ಉಪಾಯವನ್ನು ಶೋಧಿಸಲೇಬೇಕೆಂದು ತೀರ್ಮಾನಿಸುತ್ತಾನೆ.ಯಾಕೆಂದರೆ ಅರ್ಜುನನ ಮನದಲ್ಲಿ ಉಂಟಾದ ವಿಷಾದ, ಇಂದು ಕೇವಲ ಅವನ ಮಾತ್ರ ಸಮಸ್ಯೆ ಆಗಿರಬಹುದು, ಆದರೆ ಇದು ಇತರರ ಸಮಸ್ಯೆಯೂ ಆಗ ಬಹುದು ಎಂಬುದು ಶ್ರೀ ಕೃಷ್ಣನ ಗಮನಕ್ಕೆ ಬರುತ್ತದೆ. ಮನಸ್ಸಿನಲ್ಲಿ ವಿಷಾದ ತುಂಬಿಕೊಂಡು ಕರ್ಮದಿಂದ ವಿಮುಖನಾದ ವ್ಯಕ್ತಿ ಏನು ಮಾಡಬಲ್ಲ ಹಾಗೂ ಎಲ್ಲಿಗೆ ಹೋಗಬಲ್ಲ? ಈ ಕ್ಷಣವೇ ಅರ್ಜುನನನ್ನು ಎಚ್ಚರಿಸಿ ಕಾರ್ಯ ಪ್ರವೃತ್ತಿ ಮಾಡಲೇ ಬೇಕೆಂದು ನಿಶ್ಚಯಿಸುತ್ತಾನೆ. ಆಗ ಮಾಡಿದ್ದೇ ಗೀತೋಪದೇಶ ಆದರೆ ಇದು ಅವನಿಗೆ ಹೊಸದೇನಲ್ಲ. ಇದನ್ನು ಅನೇಕ ಜನ್ಮಗಳ ಹಿಂದೆ ಆತ ವಿವಸ್ವನನಿಗೆ ಅಂದರೆ ಸೂರ್ಯನಿಗೆ ಈಗಾಗಲೇ ಉಪದೇಶ ಮಾಡಿರುತ್ತಾನೆ. ಕಾಲನ ಪ್ರವಾಹದಲ್ಲಿ ನಡುವೆ ಅದು ಎಲ್ಲಿಯೂ ಸ್ವಲ್ಪ ನಷ್ಟವಾದಂತೆ ಅವನಿಗೆ ಅನಿಸುತ್ತದೆ. ಅದು ಅರ್ಜುನನು ಮುಟ್ಟುವವರಿಗೆ ಪರಿಸ್ಥಿತಿ ಸಂಪೂರ್ಣವಾಗಿ ಬದಲಾಗಿರುತ್ತದೆ. ಅದಕ್ಕಾಗಿ ತನ್ನ ಉಪದೇಶ ಕೇವಲ ಅರ್ಜುನನಿಗೆ ಸೀಮಿತವಾಗಿರಿಸದೆ ಮುಂಬರುವ ಪೀಳಿಗೆಯವರಿಗೂ ಅದರ ಲಾಭ ತಟ್ಟಲಿ ಎಂದು, ಅನೇಕ ಪ್ರಕಾರಗಳಿಂದ ತನ್ನದೇ ಆದ ತರ್ಕಗಳಿಂದ ಅನೇಕ ರಹಸ್ಯ ಗಳನ್ನು ಮತ್ತು ಗುಹ್ಯಗಳನ್ನು ಹೇಳಿ ಅವನಿಗೆ ಮನವರಿಕೆ ಮಾಡಿ ಕೊಡಲು ಯತ್ನಿಸುತ್ತಾನೆ. ಕೊನೆಗೆ ತಾನು ಹೇಳಿದ್ದು ಒಪ್ಪಿಗೆ ಆಯಿತೇ, ಅದು ಅರ್ಥವಾಯಿತೇ ಎಂದು ಅರ್ಜುನನ್ನು ಕೇಳುತ್ತಾನೆ. ಕೃಷ್ಣ ಹಾಗೂ ಅರ್ಜುನ ನಿಜ ಅರ್ಥದಲ್ಲಿ ಮನುಷ್ಯರು? ತಾನೆ ಮಾನವನ ಬೌದ್ಧಿಕ ಸ್ತರದಲ್ಲಿಯೇ ಅವರಿಬ್ಬರಲ್ಲಿ ಸಂವಾದ ನಡೆಯುತ್ತದೆ. ಶ್ರೀಕೃಷ್ಣನಿಗೆ ತಾನು ಹೇಳಿದ್ದೇ ಸರಿಯೆಂಬ ಹಟವಿಲ್ಲ. ಹಾಗೂ ತಾನು ದರ್ಶಿಸಿದ ಪಥದಲ್ಲಿಯೇ ಅರ್ಜುನ ನಡೆಯಬೇಕೆಂಬ ಆಗ್ರಹವಿಲ್ಲ.

ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ ।
ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು ॥
(ಅ - ೧೮, ಶ್ಲೋಕ - ೬೩)

ನಿನಗೆ ಒಪ್ಪಿಗೆ ಆಗಿದ್ದರೆ ತಡ ಮಾಡಬೇಡ, ವೇಳೆ ಕಳೆಯದೇ ನನ್ನ ಮೇಲೆ ವಿಶ್ವಾಸವಿಟ್ಟು ನಾನು ಹೇಳಿದ ಹಾಗೆ ಮಾಡು ಕೇವಲ ಮಾಡುವದಿದೆ ಎಂದು ಮಾಡಬೇಡ. ನಿನ್ನ ಅಂತಃಸಾಕ್ಷಿಗೆ ಒಪ್ಪಿದರೆ ಮಾತ್ರ ವಿವೇಕತನದಿಂದ ನಿನ್ನ ಕರ್ತವ್ಯವನ್ನು ನಿಭಾಯಿಸು ಎಂದು ಹೇಳುತ್ತಾನೆ.

ಕೊನೆಯ ಹಂತದವರೆಗೂ ಕೃಷ್ಣ ತನ್ನದೇ ಆದ ವಿಶಿಷ್ಟ ಪದ್ಧತಿಯಿಂದ ವಿವರಣೆ ನೀಡಿದ್ದಾನೆ. ಅರ್ಜುನನಿಗೆ ಮನದಟ್ಟು ಮಾಡಲು ಯತ್ನಿಸಿದ್ದಾನೆ. ನಿಸ್ಸಂಕೋಚದಿಂದ ಯಾವುದೇ ಮುಲಾಜು ಇಲ್ಲದೆ ತನ್ನ ಉಪದೇಶವನ್ನು ಸ್ಪಷ್ಟವಾಗಿ ಮಂಡಿಸುವುದರಲ್ಲಿ ತೊಡಗಿದ್ದಾನೆ. ತರ್ಕದಿಂದ ಹಾಗೂ ವಿವೇಕದಿಂದ ಅದನ್ನು ಋಜುವಾತು ಮಾಡುತ್ತಾನೆ. ವಂಶ ನಿರ್ನಾಮವಾದೀತು.ಅನ್ಯೈಕತೆ ರೌದ್ರ ನರ್ತನ ಮಾಡಬಹುದು. ಅದು ವಿಜೃಂಭಿಸಬಹುದು. ಕುಲೀನ ಸ್ತ್ರೀ ಸ್ವೇಚ್ಛಾಚಾರದಲ್ಲಿ ತೊಡಗಬಹುದು ಎಂದು ಭಯ ನಿರ್ಮಾಣ ಮಾಡುತ್ತಾನೆ. ಆದರೆ ಮೊದಮೊದಲು ಅರ್ಜುನನ ಅವಿವೇಕತನದ ಮಾತುಗಳನ್ನು ಕೇಳಿ ಕೃಷ್ಣ ಕ್ಷಣಕಾಲ ಆಶ್ಚರ್ಯಗೊಳ್ಳುತ್ತಾನೆ.ಆದರೆ ಕೂಡಲೇ ತನ್ನನ್ನು ತಾನು ಸಂಭಾಳಿಸುತ್ತ, ಅರ್ಜುನನ್ನೂ ಈಗಾಲೇ ಹತೋಟಿಯಲ್ಲಿ ತರಬೇಕು ಎಂಬ ತೀರ್ಮಾನಕ್ಕೆ ಬರುತ್ತಾನೆ. ಇಲ್ಲದಿದ್ದರೆ ಇಂತಹ ವಿಚಾರ ಸರಣಿಯಿಂದ ವ್ಯಕ್ತಿಯಲ್ಲಿಯ ಏಳಿಗೆ ಕುಂಠಿತವಾಗಿ, ಕರ್ಮಯೋಗದ ಸಿದ್ಧಾಂತವೇ ನಾಶವಾಗುವ ಸಾಧ್ಯತೆ ಇದೆ. ಆ ಮೇಲೆ ಸ್ವಧರ್ಮದ ಬಗ್ಗೆ ಅನಾಸ್ಥೆ ಹೆಚ್ಚಾಗಿ ಭೀತಿಯ ವಾತಾವರಣ ನಿರ್ಮಾಣವಾಗಬಹುದು. ಹಾಗೆ ನೋಡಿದರೆ ಶ್ರೀಕೃಷ್ಣನಿಗೆ ಗೀತೋಪದೇಶವನ್ನು ಸಮಸ್ತ ಮಾನವ ಜನಾಂಗಕ್ಕೆ ಹೇಳುವದಿತ್ತು, ಅರ್ಜುನ ಕೇವಲ ನಿಮಿತ್ತನಾದನಷ್ಟೇ! ಅದಕ್ಕಾಗಿಯೇ ಅರ್ಜುನನು ಎಷ್ಟೇ ಪ್ರಶ್ನೆಗಳನ್ನು ಕೇಳಿದರೂ, ವಾದ ಮಾಡಿದರೂ ಆತ ಸಂಯಮವನ್ನು ಕಳೆದು ಕೊ,ವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಅರ್ಜುನ ತನ್ನ ಮನದಲ್ಲಿರುವ ಶಂಕೆಗಳನ್ನು ಮುಕ್ತ ಮನಸ್ಸಿನಿಂದ ಹೊರಗೆ ಹಾಕಲಿ ಎಂದು ಅವನನ್ನು ಪ್ರೇರಿಸುತ್ತಾನೆ. ಸಮಾಧಾನಕಾರಕವಾಗಿ ಉತ್ತರವನ್ನೂ ಕೊಡುತ್ತಾನೆ. ಈ ಸಂದರ್ಭದಲ್ಲಿ ಆತ ಕೇವಲ ನಿನ್ನ ಆನಂದಕ್ಕಾಗಿ ಮಾತ್ರ ಇದನ್ನು ಹೇಳುತ್ತಿಲ್ಲ. ನನ್ನ ಆನಂದಕ್ಕಾಗಿಯೂ ಹೇಳುತ್ತಿದ್ದೇನೆ. ಹೀಗಾಗಿ ನಿನ್ನ ಮೇಲೆ ಕೋಪಗೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಅನೇಕ ಸಲ ಅರ್ಜುನನಿಗೆ ಹೇಳುತ್ತಾನೆ. ಈ ಪ್ರಸಂಗಗಳಲ್ಲಿ ಅರ್ಜುನನ ಬಗ್ಗೆಯೂ ನಮಗೆ ಆದರ ಉಂಟಾಗುತ್ತದೆ. ಶ್ರೀಕೃಷ್ಣನ ಮೋಹಕತೆಗೆ, ಅವನ ದಿವ್ಯ ವ್ಯಕ್ತಿತ್ವಕ್ಕೆ ಆತ ಮರಳುಗೊಂಡಿದ್ದ. ಆಕರ್ಷಿತನಾಗಿದ್ದನೇನೋ ನಿಜ! ಆದರೆ ಆತ ಹೇಳಿದ್ದನ್ನು ಕಣ್ಣು ಮುಚ್ಚಿ ನಂಬಲಿಲ್ಲ.ತನ್ನ ಮನಸಾಕ್ಷಿಗೆ ಮನಗಾಣುವ ತನಕ ಅವು

ಗಳನ್ನು ಒಪ್ಪಲು ಆತ ಸಿದ್ಧನಿಲ್ಲ. ಅರ್ಜುನ, ಶ್ರೀ ಕೃಷ್ಣನ ಸಂವಾದದಲ್ಲಿ, ಸ್ಥಿತ ಪ್ರಜ್ಞೆ, ನಿಗೂಢವಾದ ಮನಸ್ಸಿನ ಚಂಚಲತೆ. ಅಸ್ಥಿರತೆ, ಇಂದ್ರಿಯ ನಿಗ್ರಹ ವಿಷಯಗಳು ಚರ್ಚೆಗೆ ಬರುತ್ತವೆ. ಆದರೆ ಅರ್ಜುನನಿಗೆ ಇವುಗಳ ಬಗ್ಗೆ ತಾತ್ಸಾರವೇ ತುಂಬಿರುತ್ತದೆ.ಆತ ಮೊದಲು ವ್ಯವಸ್ಥಿತವಾದ ತನ್ನ ತರ್ಕವನ್ನು ಮಂಡಿಸುತ್ತಾನೆ. ನಾನು ಓರ್ವ ಸಾಮಾನ್ಯ ಮಾನವನಿದ್ದೇನೆ. ನನಗೆ ಅರ್ಥವಾಗುವ ಹಾಗೆ ಈ ಕ್ಲಿಷ್ಟತೆಗಳನ್ನು ವಿವರಿಸಿ ಹೇಳು ಎಂದು ವಿನಂತಿಸುತ್ತಾನೆ. ಆಗ ಮನುಷ್ಯಾತೀತ ಸಾಮರ್ಥ್ಯವುಳ್ಳ ಶ್ರೀ ಕೃಷ್ಣ ಅತ್ಯಂತ ವಿನೀತನಾಗಿ ತಾನು ಅರ್ಜುನನೇ ಎಂದು ಹೇಳುತ್ತಾನೆ. ಆದರೆ ಅರ್ಜುನ ಇದನ್ನು ಮರೆತು ಇಂತಹ ಪ್ರಸಂಗದಲ್ಲಿ ಜನಸಾಮಾನ್ಯನನ್ನು ಪ್ರತಿನಿಧಿಸುತ್ತಾನೆ.ಇದರ ಅರಿವು ಕೃಷ್ಣನಿಗೂ ಇದೆ.ಭಗವದ್ಗೀತೆಯ ಹಿರಿಮೆ ಮತ್ತು ಗರಿಮೆ ಇದರಲ್ಲಿಯೇ ಇದೆ.

ಕೃಷ್ಣನ ನೆಲೆಯನ್ನು ಕಂಡು ಹಿಡಿಯುವುದು ಕಷ್ಟ. ಬೇರೊಬ್ಬರ ಹಿಡಿತದಲ್ಲಿ ಸಿಗುವ ವ್ಯಕ್ತಿ ಆತನಲ್ಲ. ಆದಕ್ಕೆ ಕಾರಣ ಆತ ನಾನಾ ಪಾತ್ರಗಳಲ್ಲಿ ಸೃಷ್ಟಿಯಾಗುವ ವ್ಯಕ್ತಿ. ಅದಕ್ಕಾಗಿಯೇ ಅವನನ್ನು ಪೂರ್ಣಾವತಾರಿ ಎನ್ನುತ್ತಾರೆ. ಅವ ನದು ಅಲೌಕಿಕವಾದ ಸಂಕೀರ್ಣ ಜೀವನ, ಶಿಸು, ಮಿತ್ರ, ಸಹೋದರ, ಜಿಜ್ಞಾಸು, ಶಿಕ್ಷಕ , ನಲ್ಲ, ಯೋಗಿ ಹಾಗೂ ದೇವ, ಹೀಗೆ ಎಲ್ಲ ಪಾತ್ರಗಳನ್ನು ಧಾರಣೆ ಮಾಡಿ ಅಭಯಪ್ರದಾನ ಮಾಡುವುದರಲ್ಲಿ ತೊಡಗುತ್ತಾನೆ. ಅರ್ಜುನನನ್ನು ಮಾಧ್ಯಮ ಮಾಡಿಕೊಂಡು, ಜನಸಾಮಾನ್ಯನಿಗೆ ತಾನು ಗೀತೋಪದೇಶವನ್ನು ಹೇಳಬೇಕೆಂಬ ಅರಿವು ಶ್ರೀಕೃಷ್ಣನಿಗೆ ಇದೆ. ಹೀಗಾಗಿ ಪ್ರಾರಂಭದಿಂದಲೇ ಅವನ ಮನದಲ್ಲಿ ಗೊಂದಲಗಳಿಲ್ಲ. ತನ್ನ ನಿಲುವಿನ ಬಗ್ಗೆ ಅವನಲ್ಲಿ ದೃಢ ನಿಶ್ಚಿತತೆ ಇದೆ. ಅದಕ್ಕಾಗಿಯೇ ಅವುಗಳಿಗೆ ಆತ ಅತ್ಯಂತ ಗಹನವಾದ ಮತ್ತು ಗೂಢವಾದ ತತ್ವಗಳು ಎನ್ನುತ್ತಾನೆ. ಇದನ್ನು ತನ್ನ ಒಲವಿನ ಪತ್ನಿಯಾದ ಲಕ್ಷ್ಮಿಗೂ ಈವರೆಗೆ ಹೇಳಿಲ್ಲ ಎಂದು ಸ್ಪಷ್ಟವಾಗಿ ಪ್ರತಿಪಾದಿಸುತ್ತಾನೆ. ಆ ರಹಸ್ಯವೇ ನಿಷ್ಕಾಮ ಕರ್ಮಯೋಗ! ಈ ಸೃಷ್ಟಿಯ ನಿರ್ಮಾಣ, ಮಾನವ ಕುಲದ ಜನನ ಮತ್ತು ಲಯ ಇವೆಲ್ಲವು ಪ್ರತಿಯೊಂದು ಯುಗದಲ್ಲಿ ಇರುತ್ತವೆ. ಮನುಷ್ಯನಿಗೆ ಕರ್ಮ, ಅವನ ಹುಟ್ಟಿನಿಂದಲೇ ಅಂಟಿಕೊಂಡಿದೆ.ಅದು ಅವನ ಅಂತ್ಯದವರೆಗೆ ಅವನ ಜೊತೆಗೆ ಇರುತ್ತದೆ. ಇದರಿಂದ ಆತನಿಗೆ ಮುಕ್ತಿಯಾಗಲೀ, ಬಿಡುಗಡೆಯಾಗಲೀ ಇಲ್ಲ! ಆತ ಇದರಿಂದ ಅಲಿಪ್ತನಾಗಿ ಇರಲಾರ! ತಾನು ಯಾವುದೇ ರೂಪ ಇಲ್ಲವೆ ಅವತಾರಧರಿಸಿದರೂ ತಾನು ಕರ್ಮದಿಂದ ಅಲಿಪ್ತನಾಗಿ ಇರಲಾರೆ, ಇನ್ನು ಸಾಮಾನ್ಯರಪಾಡೇನು ಎಂದು ಸ್ವತಃಕೃಷ್ಣ ಕೇಳುತ್ತಾನೆ. ಕರ್ಮಕ್ಕೆಸಂಬಂಧದ ಕ್ರಿಯೆ. ಪ್ರಾರಬ್ಧ ಕರ್ಮ,ತ್ಯಾಜ್ಯ ಕರ್ಮ, ಕರ್ಮ, ಸನ್ಯಾಸ, ಸ್ವಕರ್ಮ, ಸ್ವಧರ್ಮ ಈ ವಿಷಯಗಳ ಬಗ್ಗೆ ಕೂಲಂಕುಷವಾಗಿ ವಿವೇಚನೆ ಮಾಡುತ್ತಾನೆ. ಅರ್ಜುನನ ಮನದಲ್ಲಿದ್ದ ಅನುಮಾನಗಳನ್ನು ದೂರ ಮಾಡುತ್ತಾನೆ. ಅಲ್ಲದೆ ಮಾಡಿದ ಪುಣ್ಯ ಪಾಪ ಕರ್ಮಗಳ, ಹಾಗೂ ಸ್ವಧರ್ಮಗಳ ಔನ್ನತ್ಯಗಳ ಕುರಿತು ಒತ್ತಿ ಹೇಳುತ್ತಾನೆ. ಕರ್ಮದ ಬೆಂಬಲಿಸುತ್ತಲೇ ನಿಷ್ಕಾಮ ಕರ್ಮವನ್ನೂ ಗೌರವಿಸುತ್ತಾನೆ. ಇಚ್ಛೆ ಇರಲಿ, ಬಿಡಲಿ, ಅದನ್ನು ಮಾಡಲೇ ಬೇಕಾಗುತ್ತದೆ. ಎಲ್ಲಿ ಕರ್ಮ ಇದೆಯೋ ಅದರ ಕೂಡ ಕರ್ಮದ ಫಲವೂ ಉಂಟು, ಹಾಗೂ ಫಲಾಸಕ್ತಿಯೂ ಇದೆ. ಅಂದರೆ ತಂತಾನೆ ವಿಷಯವಾಸನೆಯಲ್ಲಿ ಮತ್ತೆ ಮತ್ತೆ ತೊಡಕಿಕೊಳ್ಳುವುದು ಹಾಗೂ ಅದರಲ್ಲಿ ತನ್ನನ್ನು ತಾನೇ ಕಟ್ಟಿ ಹಾಕಿಕೊಳ್ಳುವದು.ಆದರೆ ಕೃಷ್ಣನಿಗೆ ಇದು ಇಷ್ಟವಿಲ್ಲ. ಯಾಕೆಂದರೆ ಮನುಷ್ಯ ಬಂಧನ ಬಲೆಯಲ್ಲಿ ಸಿಕ್ಕು ಬಿದ್ದು ತೊಳಲಾಡುತ್ತಾನೆಯೋ ಅದೇ ವೇಳೆಯಲ್ಲಿ ಆತ ಪರಸ್ವಾಧೀನವಾಗುತ್ತ ಹೋಗುತ್ತಾನೆ. ಎಂಬುದು ಕೃಷ್ಣನಿಗೆ ಗೊತ್ತು. ಅದಕ್ಕಾಗಿಯೇ ಅರ್ಜುನನನ್ನು ಸಾಧನೋಪಾಯ ಮಾಡಿಕೊಂಡು ಮಾನವ ಜನಾಂಗಕ್ಕೆ ನಿಷ್ಕಾಮ ಕರ್ಮದ ಬಗ್ಗೆ ಉಪದೇಶವನ್ನು ಬೋಧಿಸುತ್ತಾನೆ.

ಈ ನಿಷ್ಕಾಮ ಕರ್ಮ ಪ್ರಕ್ರಿಯೆಗೆ ಕರ್ಮಯೋಗ ಎನ್ನುತ್ತ ಹಾಗೂ ಅದರ ಸ್ಪಷ್ಟೀಕರಣ ಮಾಡುತ್ತ ಕೃಷ್ಣ, ಕೌಶಲ್ಯದಿಂದ ಹಾಗೂ ದಕ್ಷತೆಯಿಂದ, ಕರ್ತವ್ಯವನ್ನು ಮಾಡುವುದೇ ಕರ್ಮಯೋಗ ಎಂದು ಪ್ರತಿಪಾದಿಸುತ್ತಾನೆ. ಅದನ್ನು ಆತ ಸ್ಪಷ್ಟಪಡಿಸುತ್ತಾನೆ. ಮಾನವ ಕೊನೆಯವರೆಗೂ ಕರ್ಮಯೋಗಿ ಆದರೂ ಆತ ನಿಯತವಾದಿಯಿದ್ದಾನೆ. ಪ್ರಯತ್ನವಾದಿಯೂ ಇದ್ದಾನೆ. ಕರ್ಮ ಅವನು ಮಾಡುತ್ತಿದ್ದರೂ ಅದರ ಫಲಶ್ರುತಿ ಏನಿರಬಹುದು. ಅದರ ಯಶಸ್ಸಿನ ಪ್ರಮಾಣವೆಷ್ಟಿರಬಹುದು. ಇದು ಕೊನೆತನಕ ಅಜ್ಞಾತವಾಗಿಯೇ ಉಳಿಯಬಹುದು. ಇದಕ್ಕಾಗಿಯೇ ಆತನಿಗೆ ಕರ್ಮವನ್ನು ತೊರೆಯಲು ಆಗುವುದಿಲ್ಲ.ಈ ಸಮಯದಲ್ಲಿ ನಿಷ್ಕಾಮ ಕರ್ಮಯೋಗ ಅವನ ಪ್ರಯೋಜನಕ್ಕೆ ಬರಲಿದೆ. ಯಾಕೆಂದರೆ ಈ ಅನಾಸಕ್ತಿಯೋಗವೇ ಅವನನ್ನು ನಿರಾಶೆಯ ಛಾಯೆಯಿಂದ ಹೊರಗೆ ತರುವದು ಎಂದು ಆತನಿಗೆ ವಿಶ್ವಾಸ

ವಿದೆ. ಈ ನಿಷ್ಕಾಮಕರ್ಮದಲ್ಲಿ ಕೂಡ ಆತನಿಗೆ ಮಾನವ ನಿಂದ ಪರಿಪೂರ್ಣತೆಯ ಚಿಂತನೆ ಇದೆ. ಇದರಿಂದಲೇ ವಿಶ್ವದಲ್ಲಿ ಆತನ ಗುರುತು ಹಾಗೂ ಪ್ರತಿಷ್ಠೆ ಚಿರಂತನವಾಗಿ ಉಳಿಯುವದಿದೆ. ಅದಕ್ಕಾಗಿಯೇ ಆತ ನಿಷಿದ್ಧ ಕಾರ್ಯ ತ್ಯಜಿಸಲು ಆಗ್ರಹಿಸಿ, ಸಕಾಮ ಕರ್ಮ ಮಾಡಲು ಪ್ರೇರೇಪಿಸು ತ್ತಾನೆ. ಕೊನೆಗೆ ಕೃಷ್ಣ ತನ್ನ ಉಪದೇಶವನ್ನು ಅರ್ಜುನನಿಗೆ ಮನದಟ್ಟು ಮಾಡಿ ಕೊಡುತ್ತಾನೆ. ಅರ್ಜುನನಿಗೆ ತಾನು ಮಾಡಿದ ತಪ್ಪಿನ ಅರಿವಾಗುತ್ತದೆ. ಆತನಿಗೆ ಹೆಚ್ಚಿನ ವಿಚಾರ ಮಾಡದೇ ಕೃಷ್ಣನಿಗೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿ ಶರಣಾಗತನಾಗುತ್ತಾನೆ.

ಅರ್ಜುನ ಪೂರ್ಣವಾಗಿ ಕೃಷ್ಣಮಯನಾಗಿದ್ದರೂ ಅರ್ಜುನ ಕೃಷ್ಣನ ಲಕ್ಷ್ಯವಲ್ಲ. ಒಂದು ವೇಳೆ ಅವನೇ ಆತನ ಗುರಿ ಆಗಿದ್ದರೆ, ಗೀತೆಯಲ್ಲಿ ಅಡಗಿದ ತತ್ವಜ್ಞಾನವನ್ನು ಇಷ್ಟೊಂದು ವಿವರವಾಗಿ ಹೇಳುವ ಅವಶ್ಯಕತೆ ಇರಲಿಲ್ಲ. ಅರ್ಜುನನ ಗ್ರಹಣಶಕ್ತಿಯ ಸಾಮರ್ಥ್ಯ ಕೃಷ್ಣನಿಗೆ ಗೊತ್ತಿತ್ತು, ಅದಕ್ಕಾಗಿ ಒಂದು ಚಿಕ್ಕ ಸಂಕೇತವೂ ಸಾಕಷ್ಟಾಗುತ್ತಿತ್ತು. ಆದರೆ ಕೃಷ್ಣ ಪಕಳೆ ಪಕಳೆಯಾಗಿ ವಿವರಣೆ ನೀಡುತ್ತಿದ್ದ. ಅವನನ್ನು ಪ್ರಚೋದಿಸುತ್ತಿದ್ದ. ಈ ತತ್ವಜ್ಞಾನ ಆಲಿಸದ ಮೇಲೆ ಮನುಷ್ಯನಿಗೆ ಯಾವುದೇ ಅನುಮಾನ,ಶಂಕೆ ಮನದಲ್ಲಿ ಉಳಿಯ ಬಾರದೆಂದು ಆತ ಯತ್ನಿಸುತ್ತಿದ್ದ. ವೇದಗಳು ಹಾಗೂ ಉಪ ನಿಷತ್‌ಗಳು ಸಾಮಾನ್ಯ ಮಾನವನ ತನಕ ತಲುಪದಂತೆ ಆಗಿರುವ ತಪ್ಪನ್ನು ಆತ ಸುಧಾರಿಸಲು ಯತ್ನಿಸುತ್ತಿದ್ದ, ಸಾಮಾನ್ಯನ ಕರ್ಮಮಾರ್ಗ ಪ್ರಚುರ ಪಡಿಸುತ್ತಿದ್ದ. ಅವರಿಗೆ ದೊರೆತ ಸಂಧಿಯ ದಾರಿಯಲ್ಲಿ ಯಾವುದೇ ಅಡೆತಡೆಗಳು ಬರದಂತೆ ನೋಡಿಕೊಳ್ಳುತ್ತಿದ್ದ. ಇನಿತಾದರೂ ತಪ್ಪು ಉಳಿದು ಹೋಗ ಬಾರದೆಂದು ದಕ್ಷತೆವಹಿಸುತಿದ್ದ, ಅಲ್ಲದೆ ಅವನ ಉಪದೇಶ ಆ ಕಾಲಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಆ ಅತ್ಯಂತ ಮೌಲಿಕ ವಾದ ತ್ರಿಕಾಲ ಬಾಧಿತ ತತ್ವಜ್ಞಾನದ ಕೂಡ ಮನುಷ್ಯನ ಸಂಬಂಧ ಜೋಡಿಸುವ ಪ್ರಯಾಸದಲ್ಲಿದ್ದ. ಯಾಕೆಂದರೆ ಎಷ್ಟೇ ಕಾಲಗಳಲ್ಲಿ ಬದಲಾವಣೆಯಾದರೂ, ಯುಗಗಳು ಎಷ್ಟೇ ಪರಿ ವರ್ತನೆಗೊಂಡರೂ,ಮನುಷ್ಯನ ಕರ್ಮಯೋಗ ಹಾಗೂ ನಿಯತವಾದ ಇವು ಶಾಶ್ವತವಾಗಿವೆ. ಅದೇ ಸ್ವರೂಪದಲ್ಲಿ ಉಳಿಯುತ್ತದೆ. ಮಾನವ ವಿಜ್ಞಾನವನ್ನು ಎಷ್ಟೇ ನೆಚ್ಚಿಕೊಳ್ಳಲಿ, ಅದರ ಮಹತಿಯನ್ನು ಎಷ್ಟೇ ಕೊಂಡಾಡಲಿ ಅವನಿಗೆ ಕರ್ಮ ಯೋಗದಿಂದ ವಿಮುಖನಾಗುವದು ಅಶಕ್ಯ ಎಂದು ಅವನಿಗಿಂತ ಹೆಚ್ಚಾಗಿ ಶ್ರೀಕೃಷ್ಣನಿಗೆ ಗೊತ್ತು. ಅದಕ್ಕಾಗಿಯೇ ಇಂದೂ ಅವನ ಉಪದೇಶ ನಿತ್ಯನೂತನ ಹಾಗೂ ಪ್ರಾಸಂಗಿಕ ಎನಿಸುತ್ತದೆ. ಅದರ ಪ್ರಸ್ತುತತೆ ಹಾಗೆಯೇ ಇದೆ. ಅನೇಕ ಯುಗಗಳು ಕಳೆದರೂ ಗೀತೆಯಲ್ಲಿಯ ಅಧ್ಯಾಯ ಮತ್ತು ಶ್ಲೋಕದ ಸಂಖ್ಯೆ, ಅವುಗಳ ಅನುಕ್ರಮಣಿಕೆ, ಅವುಗಳ ಅರ್ಥ. ಪ್ರತಿಪಾದನೆ ಹಾಗೂ ಶಬ್ದ ಗಳಲ್ಲಿ ವ್ಯತ್ಯಾಸಗಳಾಗಿಲ್ಲ. ಪ್ರಾರಂಭದಿಂದ ಹೇಗೆ ಇತ್ತೋ ಅದೇ ರೀತಿಯಲ್ಲಿದೆ. ಭವಿಷ್ಯದಲ್ಲಿರುವ ಉಳಿಯುವದಿದೆ. ಅದು ಅಪೌರಷೇಯವಾಗಿದೆ. ಹೀಗಾಗಿ ಅದು ಪರಿಪಕ್ವ ಆಗಿದೆ. ಇಲ್ಲಿ ಮಾನವನ ತರ್ಕಕ್ಕೆ ಯಾವುದೇ ಬೆಲೆಯಿಲ್ಲ ವೈಚಾರಿಕ ಪ್ರಶ್ನೆಗಳ ಮೂಲ ಆಧಾರವೆಲ್ಲ ಗೀತೆಯೇ ಆಗಿದೆ. ನಿಜವಾಗಿಯೂ ಮನುಷ್ಯ ಭಗವದ್ಗೀತೆಯ ಋಣದಿಂದ ಎಂದಿಗೂ ಮುಕ್ತನಾಗುವುದಿಲ್ಲ. ಅದಕ್ಕಾಗಿಯೇ ಡಿ.ವಿ.ಜಿಯವರು ಭಗವದ್ಗೀತೆಯನ್ನು ಜೀವನ ಧರ್ಮಯೋಗ ಎಂದು ಕರೆದಿದ್ದರೆ, ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳು ಭಗವದ್ಗೀತೆಯನ್ನು ಶ್ರೀಕೃಷ್ಣ ಗೀತೆಯೆಂದು ಹಾಡಿ ಹೊಗಳಿದ್ದಾರೆ.

೨೧ ನೇ ಶತಮಾನದಲ್ಲಿ ನಾವು ಕಾಲಿಡುತ್ತಿದ್ದೇವೆ. ಕಳೆದ ಐವತ್ತು ವರ್ಷಗಳಲ್ಲಿ ಮಾನವ ವಿಜ್ಞಾನದಲ್ಲಿ ಅಭೂತಪೂರ್ವ ಪ್ರಗತಿ ಸಾಧಿಸಿದ್ದಾನೆ. ಇವೆಲ್ಲವೂ ಸ್ವಪ್ನಗಳೇ ಎಂಬಂತೆ ನಡೆಯುತ್ತವೆ. ಅವು ಮುಂದೆ ಕೂಡ ನಡೆಯಬಹುದು. ಪ್ರಪಂಚ ಇನ್ನೂ ಹತ್ತಿರವಾಗಿದೆ. ಅವಶ್ಯಕತೆ ಆವಿಷ್ಕಾರದ ಜನನಿ ಅನ್ನುತ್ತಾರೆ. ಮಾನವನ ಬೇಡಿಕೆಗಳು ಅವಶ್ಯಕತೆಯ ಅನುಪಾತಕ್ಕೆ ಅನುಗುಣವಾಗಿ ಹೆಚ್ಚುತ್ತ ಹೋಗಲೂ ಬಹುದು. ಆಗ ಹೊಸ ಹೊಸ ಮಾರ್ಗಗಳನ್ನು ಶೋಧಿಸಲಾಗುತ್ತಿದೆ. ಆದರೆ ಇದಕ್ಕೆ ಹೇಗೆ ಅಗತ್ಯವಿರುವುದಿಲ್ಲವೋ ಹಾಗೆಯೇ ಮನುಷ್ಯನ ಲಾಲಸೆಗೂ ಕೊನೆಯೇ ಇರುವುದಿಲ್ಲ. ಅವನ ಆಶೆಗಳು, ಆಕಾಂಕ್ಷೆಗಳು ಎಣೆಯಿಲ್ಲದಷ್ಟು ಇವೆ. ತನ್ನ ಮನೋಭಿಲಾಶೆಗಳನ್ನು ಪೂರ್ತಿ ಮಾಡಿಕೊಳ್ಳಲು ಶತಪ್ರಯತ್ನ ಮಾಡುತ್ತಾನೆ. ಆದರೆ ಅವನ ಸಾಮರ್ಥ್ಯಕ್ಕೆ ಒಂದು ಮರ್ಯಾದೆ ಇದೆ ಹಾಗೂ ಅತ್ಯಲ್ಪವಾಗಿದೆ. ಸಂದರ್ಭೋಚಿತವಾದ ಪ್ರಸಂಗಗಳಲ್ಲಿ ದೈವ ಅವನಿಗೆ ಮೇಲಿಂದ ಮೇಲೆ ನೆನಪು ಮಾಡಿ ಕೊಡುತ್ತದೆ. ಹೀಗೆ ಮಾಡುತ್ತಿರುವಾಗ ನಿಷ್ಕಾಮ ಕರ್ಮದ ಅವಶ್ಯಕತೆಯ ಸ್ವರೂಪವನ್ನು ಅವನ ಎದುರು ಚಿತ್ರಿಸುತ್ತ ಹೋಗುತ್ತದೆ. ಮನುಷ್ಯ ಪರಿಪೂರ್ಣತೆಯ ಸಾಧಿಸುವ ನಿಟ್ಟಿನಲ್ಲಿ ಈಗ ಸರ್ವ ಕ್ಷೇತ್ರದಲ್ಲಿ ಮಾತು ಕೇಳಿಬರು

ತ್ತಿದೆ. ವರ್ಕ್‌ಸ್ಕಿಲ್ ಹಾಗೂ ವರ್ಕ್‌ಕಲ್ಚರದ ಬಗ್ಗೆ ಸೆಮಿನಾರುಗಳು ನಡೆಯುತ್ತವೆ. ಮಾತನ್ನು ಬೇರೊಬ್ಬರ ಮುಂದೆ ಹೇಗೆ ನಾವು ಪ್ರಭಾವಶಾಲಿಯಾಗಿ ಮಾತನಾಡಬೇಕು. ಆಕರ್ಷಕವಾಗಿ ಹೇಗೆ ಅದರ ಅಭಿವ್ಯಕ್ತಿ ಆಗಬೇಕೆಂಬ ಹಲವಾರು ಗುಟ್ಟುಗಳನ್ನು ಇಂದು ಮ್ಯಾನೇಜ್‌ಮೆಂಟ ಕೋರ್ಸ್‌ದಲ್ಲಿಯೂ ಮತ್ತು ಪರ್ಸ ನ್ಯಾಲಿಟಿ ಡೆವೆಲೆಪ್‌ಮೆಂಟ್ ವರ್ಕ್‌ಶಾಪ್‌ದಲ್ಲಿ ಹೇಳಿಕೊಡ ಲಾಗುತ್ತಿದೆ. ಗೀತೆಯೂ ಅದನ್ನು ಹೇಳುತ್ತದೆ.

ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್ ।
ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೆ ॥
(ಅ - ೧೭-ಶ್ಲೋ - ೧೫)

ಉದ್ವೇಗ ಇಲ್ಲದ, ಸತ್ಯವೂ ಪ್ರಿಯವೂ ಹಿತವೂ ಆದ ವಾಕ್ಯವನ್ನು ಸ್ವಾಧ್ಯಾಯವನ್ನು ಮಾತಿನ ಮೂಲಕ ಮಾಡುವ ತಪಸ್ಸು (ವಾಚಿಕೆ-ತಪಸ್ಸು) ಎಂದು ಕರೆಯಲಾಗಿದೆ. ಗೀತೆ ಯಲ್ಲಿ ಕರ್ಮಯೋಗ ಬೇರೆಯೇನು ಹೇಳುತ್ತದೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಸಾವಿರ ವರ್ಷಗಳ ಹಿಂದೆ, ಒಂದು ದುರ್ಧರ ಪ್ರಸಂಗದಲ್ಲಿ ತಾನು ಶ್ರೀಸಾಮಾನ್ಯನ ಪ್ರತಿನಿಧಿಯಂದು ತನ್ನ ಪರಮ ಸಖನೂ, ಸಾರಥಿಯೂ ಆದ ಶ್ರೀ ಕೃಷ್ಣನ ಕೈಯಲ್ಲಿ ಅರ್ಜುನ ವಿಶ್ವಾಸದಿಂದ ತನ್ನ ಕೈಯನ್ನು, ಕೊಟ್ಟಿದ್ದ, ಇಂದು ಅದೇ ವೈಜ್ಞಾನಿಕ ಮನೋಭಾವವಿದ್ದು ಮನುಷ್ಯ ತನ್ನ ಕೈಯನ್ನು ಶ್ರೀಕೃಷ್ಣನಿಗೆ ಮ್ಯಾನೇಜಮೆಂಟ್ ಗುರು ಎಂದು ಸಂಬೋಧಿ ಸುತ್ತ, ಅವನ ಕೈಯಲ್ಲಿ ತನ್ನ ಕೈಯನ್ನು ಕೊಡುತ್ತಿದ್ದಾನೆ. ಈ ಎರಡೂ ಪ್ರಸಂಗದಲ್ಲಿ ಕೃಷ್ಣ ತನ್ನ ನಿಲುವಿಗೆ ಭದ್ರವಾಗಿ ಅಂಟಿ ಕೊಂಡಿದ್ದಾನೆ ಮತ್ತು ಯುಗಗಳ ಹಿಂದೆ ವಿವಸ್ವನನಿಗೆ ಹಾಗೂ ಅರ್ಜುನನನ್ನು ನಿಮಿತ್ತ ಮಾತ್ರ ಮಾಡಿ, ಸಕಲ ಮಾನವ ಕುಲಕ್ಕೆ, ಆತ ಹಿಂದೆ ಹೇಳಿದ್ದನ್ನೇ ಹೇಳಿದ್ದಾನೆ. ಅದರಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲ. ಹಾಗೂ ಆಗುವದೂ ಇಲ್ಲ, ಯಾಕೆಂದರೆ ಅದು ತ್ರಿಕಾಲ ಸತ್ಯವಾಗಿದೆ.

ಪ್ರಪಂಚ ಈಗ ಅತ್ಯಾಧುನಿಕವಾಗುತ್ತಿದೆ. ದಿನ ನಿತ್ಯವೂ ಹೊಸ ಹೊಸ ಶೋಧಗಳೂ ಆವಿಷ್ಕಾರಗಳೂ ಆಗುತ್ತಿವೆ ಮನುಷ್ಯ ತನ್ನ ಮೂಲಭೂತ ಬೇರುಗಳನ್ನು ಹಾಗೂ ಜೀವಿಸುವ ಹೊಸ ಮಾರ್ಗಗಳನ್ನು ಹುಡುಕಾಡುತ್ತಿದ್ದಾನೆ. ಅದರಲ್ಲಿ ಆನಂದವನ್ನು, ಸಮಾಧಾನವನ್ನು ಹಾಗೂ ಸಂತೃಪ್ತಿಯನ್ನು ಶೋಧಿಸುತ್ತಿದ್ದಾನೆ. ಈ ನಿಟ್ಟಿನಲ್ಲಿ ಭಗವದ್ಗೀತೆ, ಅವನಿಗೆ ದೀಪ ಸ್ತಂಭದಂತೆ ಮಾರ್ಗದರ್ಶನ ಮಾಡುತ್ತದೆ. ಅಂದರೆ ಪ್ರವಾಹದ ಉಗಮದ ಕಡೆಗೆ ಅಂದರೆ ಮೂಲದ ಕಡೆಗೆ ಸಾಗುವ ಈ ಪ್ರಕ್ರಿಯೆ ಈಗಲೂ ಅಬಾಧಿತವಾಗಿ ನಡೆದಿದೆ. ಐದು ಸಾವಿರ ವರ್ಷಗಳ ಹಿಂದಿನ, 'ವ್ಯಾಸೋ ತಿಷ್ಟ ಜಗತ್ರಯ' ಎಂಬ ಈ ಅಲೌಕಿಕ ಕೃತಿ, ಈಗಿನ ಆಧುನಿಕ ಕಾಲಕ್ಕೂ ಕನಸುಗಳನ್ನು ಪೂರೈಸುತ್ತಿರುವುದು, ಇದು ನಿಜಕ್ಕೂ ಅದ್ಭುತವಾಗಿದೆ. ಈ ಉದ್ದೇಶವನ್ನು ಇಟ್ಟುಕೊಂಡು ಈ ಪ್ರಪಂಚ ಗೀತೆಯ ಬೆನ್ನ ಹಿಂದೆ ಎಲ್ಲಿಯವರೆಗೆ ಹೋಗುವುದೋ ಅಲ್ಲಿಯವರೆಗೆ ಗೀತೆ ಅದರ ಹಿಂದೆ ಆಧಾರಸ್ತಂಭವಾಗಿ ಇದ್ದೇ ಇರುತ್ತದೆ. ಹಾಗೆಯೇ ಕತ್ತಲೆಯಿಂದ ಬೆಳಕಿನ ಕಡೆಗೆ ಈ ಸನಾತನ ಪ್ರವಾಸ ಎಲ್ಲಿಯವರೆಗೆ ನಡೆಯುತ್ತಲೆ ಇರುತ್ತದೆಯೋ, ಅಲ್ಲಿವರೆಗೆ ಶ್ರೀ ಶಂಕರಾಚಾರ್ಯರು ಹೇಳಿದಂತೆ ಭಗವದ್ಗೀತೆ ನಿತ್ಯ ನೂತನ ವಾಗಿಯೇ ಇರುತ್ತದೆ. ಗೀತೆ ಮನುಷ್ಯನಲ್ಲಿರುವ ಒಳ್ಳೆಯದು ಹಾಗೂ ಕೆಟ್ಟದ್ದನು ಹುಡುಕುತ್ತದೆ. ನಿಮಗೆ ವಿಚಾರ ಮಾಡಲು ಹೆಚ್ಚುತ್ತದೆ. ಯಾಕೆಂದರೆ ಕೇವಲ ಥಿಂಕ ಟ್ಯಾಂಕಿನಿಂದ ಯಾವುದೇ ಪ್ರಯೋಜನವಾಗಲಾರದು. ಅದರ ಕೂಡ ರಾಶನಲ್ ಥಿಂಕಿಂಗದ ಅವಶ್ಯಕತೆಯೂ ಇದೆ. ಈಗ ಅದರದೇ ಜೋರು ಹೆಚ್ಚು! ಅಂದರೆ ವರ್ತಮಾನದ ವಾಸ್ತವಿಕತೆಯನ್ನು ಯಾರಿಂದಲೂ ಬಚ್ಚಿಡಲು ಅಸಾಧ್ಯ.

ಆಧುನಿಕತೆಯ ಕಡೆಗೆ ಭರದಿಂದ ಸಾಗುತ್ತಿರುವ ಶತ ಮಾನವನ್ನು ಹಾಗೂ ಗೀತೆಯಲ್ಲಿ ಚಿರಂತನ ತತ್ವಜ್ಞಾನವನ್ನು ಮೇಳೈಸುವ ಕ್ರಿಯೆಯಲ್ಲಿ ಈಗಿನ ವೈಜ್ಞಾನಿಕರು ಯತ್ನಿಸುತ್ತಿ ದ್ದಾರೆ. ಅದು ಅವರಿಗೆ ಉಪಯುಕ್ತವಾಗುತ್ತಿದೆ ಎಂದು ಅನಿಸು ತ್ತದೆ. ಈ ವೈಜ್ಞಾನಿಕರಲ್ಲಿ ಕೇವಲ ಭಾರತೀಯರು ಮಾತ್ರವಲ್ಲ ಪರದೇಶದ ತಂತ್ರಜ್ಞರೂ ಒಳಗೊಂಡಿದ್ದಾರೆ. ಪ್ರತ್ಯೇಕ ವ್ಯಕ್ತಿ ನಿರಾಶೆಯಿಂದ ತೊಳಲಾಡುತ್ತಿದ್ದಾನೆ. ಈಗ ಮನಸ್ಸಿಗೆ ಶಾಂತಿ ಹಾಗೂ ಸಮಾಧಾನದ ಅವಶ್ಯಕತೆ ಇದೆ. ಇದಕ್ಕೆ ಸಂಬಂಧ ಪಟ್ಟ ಅನೇಕ ಸಿದ್ಧಾಂತಗಳು, ಪರಿಹಾರ ರೂಪದಲ್ಲಿ ಗೀತೆ ಯಲ್ಲಿವೆ. ಆ ಸಿದ್ಧಾಂತಗಳನ್ನು ಹೊಸಕಾಲಕ್ಕೆ ಅನುಗುಣವಾಗಿ ಮಾರ್ಪಾಡು ಮಾಡಬೇಕೆಂದು ಎಲ್ಲರಿಗೂ ಅನಿಸುತ್ತಿದೆ.

ವೇದ ಹಾಗೂ ಉಪನಿಷತ್‌ಗಳ ತತ್ವಗಳನ್ನು ಮಥನ ಮಾಡಿ ಅದರಿಂದ ಬಂದ ನವನೀತವೇ ಭಗವದ್ಗೀತೆ.! ಇಪ್ಪ ತ್ತೊಂದನೇ ಶತಮಾನದಲ್ಲಿಯೂ ಅದರ ಪ್ರಸ್ತುತತೆ ನಿತ್ಯನೂತನ ವಾಗಿದೆ. ಅರ್ಜುನನಿಗೆ ಬಂದ ಸಂಕಷ್ಟಗಳು, ಈಗಿನ ಮಾನವ ನಿಗೆ ಎದುರಾಗಿ, ಆತ ದಿಗ್ಭ್ರಮೆಗೊಂಡು ಕಿಂಕರ್ತವ್ಯಮೂಢ

ನಾದರೆ, ಆ ಸಮಯದಲ್ಲಿ ಗೀತೆ ಅವನ ಬೆನ್ನ ಹಿಂದೆ ನಿಂತು ರಕ್ಷಿಸುವುದು ಎಂದು ಶ್ರೀ ಕೃಷ್ಣನು ಅರ್ಜುನನನ್ನು ಮುಂದೆ ಮಾಡಿ ಪ್ರಪಂಚಕ್ಕೆ ಉಪದೇಶಿಸಿದ್ದಾನೆ. ವ್ಯಕ್ತಿ ನಮ್ಮ ದೇಶದವ ನಾಗಿರಬೇಕೆಂಬ ಕಟ್ಟುಪಾಡುಗಳಿಲ್ಲ. ಅಲ್ಬರ್ಟ ಐನ್‌ಸ್ಟೈನ್, ಅಲ್ಡಸ್ ಹಕ್ಲಿ, ಕಾರ್ಲಜಂಗ, ಹೆನಿಡೆವಿಡ ಥೋರೂ, ಹೆರ್ಮನ್ ಹೆಸ್, ರಾಲ್ಫವಾಲ್ಡೊ ಎಮರ್ಸನ್. ಈ ವಿದೇಶದ ಗಣ್ಯವ್ಯಕ್ತಿಗಳೆಲ್ಲ ಗೀತೆಯ ಆರಾಧಕರೇ ಆಗಿದ್ದಾರೆ. ಗೀತೆ ಅವರಿಗೆ ಮಾರ್ಗದರ್ಶಿಆಗಿದೆ.

ಗೀತೆಗೆ ಕೇವಲ ನಿಮ್ಮಿಂದ ಆರ್ತಧ್ವನಿಯ ಪ್ರತೀಕ್ಷೆ ಇದೆ. ಹಾಗೆ ನೀವು ಕೂಡ ಗೀತೆಯ ತತ್ವಗಳನ್ನು ಅರ್ಥಮಾಡಿ ಕೊಳ್ಳುವ ತಯಾರಿಯಲ್ಲಿ ಇರಬೇಕು. ಇಂದಿನ ವೈಚಾರಿಕ ಮನೋವೃತ್ತಿಯ ವ್ಯಕ್ತಿಯಿಂದ ಗೀತೆ ಇದನ್ನೇ ಅಪೇಕ್ಷಿಸುತ್ತದೆ. ಯಾಕೆಂದರೆ ಮನುಷ್ಯಾನಾಂ ಸಹಸ್ರೇಷು ಸಿದ್ಧಯೇ ಯತ ತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೆತ್ತಿ ತತ್ವತಃ, ಎಂದು ಸುಭಾಷಿತ ಹೇಳುತ್ತದೆ. ಸಾವಿರ ವ್ಯಕ್ತಿಗಳಲ್ಲಿ ಕೇವಲ ಓರ್ವ ವ್ಯಕ್ತಿಗೆ ಮಾತ್ರ ಗೀತೆಯ ತತ್ವಗಳನ್ನು ತಿಳಿಯುವ ಹಂಬಲ ವಿರುತ್ತದೆ. ಅಂತಹ ತಿಳಿದವರಲ್ಲಿ ಎಲ್ಲೋ ಓರ್ವವ್ಯಕ್ತಿ ಮಾತ್ರ ಅವುಗಳನ್ನು ಅರ್ಥಮಾಡಿಕೊಳ್ಳಲು ಶಕ್ಯನಾಗಿರುತ್ತಾನೆ. ಶಾಶ್ವತವಾದ ಆನಂದದಿಂದ ದೂರ ಮಾಡುತ್ತಿರುವ ಸಾಧನಗಳು ನಮಗೆ ಬೇಕು ಬೇಕು ಎನ್ನಿಸುವುದೇ ಪ್ರವಾಹದ ವಿರುದ್ಧ ಈಜುವುದೇ ಆಗಿದೆ. ಇದನ್ನು ಇಂದಿನ ಭೌತಿಕ ಪ್ರಪಂಚದಲ್ಲಿರುವ ವ್ಯಕ್ತಿ ತಿಳಿದುಕೊಳ್ಳುವ ಅನಿವಾರ್ಯತೆ ಇದೆ. ಇದನ್ನು ತಿಳಿಸಿ ಹೇಳುವದೇ ಗೀತೆಯ ತತ್ವಜ್ಞಾನವಾಗಿದೆ. ಇಂದಿಗೂ ಅದರ ಪ್ರಯೋಜನಗಳಿಂದ ಲಾಭವಾಗುವುದು ಕಂಡು ಬರುತ್ತಿದೆ. ನದಿಯ ದಂಡೆಯಿಂದ ನೀರಿನ ಕಡೆಗೆ ಹೋಗುವಾಗ ಮರಳು ಮುಗಿದು ನೀರು ಸುರು ಆಗುತ್ತದೆ. ಅಂದರೆ ಅಗೋಚರವಾದ ರೇಷ್ಮೆಯ ಒಂದು ಪಕ್ಕ ಮರಳು ಇದ್ದರೆ ಮತ್ತೊಂದು ಪಕ್ಕಕ್ಕೆ ನೀರು ಇರುತ್ತದೆ. ಇದೇ ತುಲಿಯಾವಸ್ಥೆ ಆಗಿರುತ್ತದೆ. ಸದ್ಯದ ವಿಶ್ವ ಇದೇ ಲೀತಿಯ ಗೊಂದಲದ ಸ್ಥಿತಿಯಲ್ಲಿದೆ. ಒಂದು ಕಡೆಗೆ ಅತಿ ಭೌತಿಕತೆ, ಇನ್ನೊಂದು ಕಡೆಗೆ ಹೆಚ್ಚಾಗುತ್ತಿರುವ ಅಸಮಾಧಾನ ಪ್ರವತ್ತಿ, ಹಾಗೂ ಸಂಶಯ ವೃತ್ತಿ ಇವುಗಳನ್ನು ಕಟ್ಟಿ ಹಾಕುವ ಅವಶ್ಯ ಕತೆ ಇದೆ. ಆಗ ಗೀತೆಯಲ್ಲಿಯ ತತ್ವಜ್ಞಾನ ತನ್ನ ಸಾಮರ್ಥ್ಯದಿಂದ ಮನೋಬಲವನ್ನು ಹೆಚ್ಚಿಸುತ್ತದೆ.

## ಶ್ರೀ ಲಕ್ಷ್ಮೀ

ಬಾಳನ್ನು ಬೆಳಗಿಸುವ
ಅಭಿವೃದ್ಧಿ ಪಡಿಸುವ
ಕಷ್ಟ ಜೀವಿಗಳಿಗೆ ಒಲಿದು ಬರುವ
ಸಂಪ್ರದಾಯವನ್ನು ಸದಾ ನಮ್ಮಿಂದ ಉಳಿಸುವ
ಮಾನವನ ಏಳಿಗೆಗಾಗಿ ಹಾರೈಸುವ
ಬದುಕನ್ನು ಸಾರ್ಥಕಗೊಳಿಸುವ
ಐಶ್ವರ್ಯವಾಗಿ ಒಲಿದು ಬರುವ
ಸಂಸ್ಕೃತಿಯನ್ನು ಸದಾ ನಮ್ಮಿಂದ ಬೆಳೆಸುವ
ಧನ, ಕನಕ ಕೊಟ್ಟು
ಕರುಣಿಸುವಳು
ಸಿರಿ, ಐಸಿರಿ ನೀಡಿ
ಮೆರೆಸುವಳು
ಬೆಳಕಿನ ರೂಪ
ಧಾನ್ಯಗಳ ರೂಪ
ಅಗ್ನಿಯ ರೂಪ
ಪ್ರಕೃತಿಯ ರೂಪ ತಾಯೇ... ಲಕ್ಷ್ಮೀ
ಸೌಭಾಗ್ಯದ ರೂಪವು
ಸಂತಾನದ ರೂಪವು
ಜ್ಞಾನದ ರೂಪವು
ಕೀರ್ತಿಯ ರೂಪವು ತಾಯೇ... ಲಕ್ಷ್ಮೀ
ಆರೋಗ್ಯದ ರೂಪವು
ವಿದ್ಯೆಯ ರೂಪವು
ಭೂದೇವಿಯ ರೂಪವು
ಅದೃಷ್ಟದ ರೂಪವು ತಾಯೇ... ಲಕ್ಷ್ಮೀ
ಭಾಗ್ಯದ ರೂಪವು
ಪ್ರತಿಷ್ಠೆಯ ರೂಪವು
ವಿಜಯದ ರೂಪವು ತಾಯೇ... ಲಕ್ಷ್ಮೀ
ಎಷ್ಟೇ ರೂಪಗಳ ವರಗಳ ಅವತಾರವಾಗಿ
ಮಾನವನ ಜನ್ಮವನ್ನು ಉದ್ಧಾರಗೊಳಿಸುವ
'ಮಹಾಮಾತೆ/ ತಾಯೇ...ಶ್ರೀ ವರ ಮಹಾಲಕ್ಷ್ಮೀ

ಕು.ಬಿ.ಎಸ್. ಮಮತಾ,

# ಕರ್ನಾಟಕದ ವೈಷ್ಣವ ದೇವಾಲಯಗಳು

2



# ಹೊಯ್ಸಳರ ಐಸಿರಿ ಬೆಳ್ಳೂರಿನ ಆದಿಮಾಧವ ದೇವಾಲಯ

ಕೆಂಗೇರಿ ಚಕ್ರಪಾಣಿ

9448386886

ಬೆಳ್ಳೂರು, ಮಂಡ್ಯಜಿಲ್ಲೆ, ನಾಗಮಂಗಲ ತಾಲ್ಲೂಕಿನ ನಾಗಮಂಗಲದ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿರುವ ಗ್ರಾಮ ಇದು ಬೆಂಗಳೂರು - ಮಂಗಳೂರು ರಸ್ತೆಯಲ್ಲಿ ಬೆಂಗಳೂರಿನಿಂದ 104 ಕಿ.ಮೀ. ದೂರದಲ್ಲಿದೆ.

**ಶ್ರೀ ಆದಿಮಾಧವ ದೇವಾಲಯ**

ಬೆಳ್ಳೂರಿನಲ್ಲಿರುವ ದೇವಾಲಯಗಳಲ್ಲಿ ಪ್ರಮುಖವಾದವು ಆದಿಮಾಧವ ಹಾಗೂ ಗೌರೀಶ್ವರ, ಮೂಲೆಸಿಂದೇಶ್ವರ, ವೀರಭದ್ರ ಹಾಗೂ ವಿಮಲನಾಥ ಬಸದಿಗಳು, ಬೆಳ್ಳೂರಿನ ಶಾಸನಗಳಲ್ಲಿ ಪ್ರಸನ್ನ ಮಾಧವರಾಯ ದೇವಾಲಯ ಎಂದು ಕರೆದಿರುವ ಮಾಧವ ದೇವಾಲಯವು ಹೊಯ್ಸಳರ ಕಾಲದ ಸುಂದರ ತ್ರಿಕೂಟಾಚಲವಾಗಿರುವುದು ಪೂರ್ವಾಭಿಮುಖವಾಗಿರುವ ಈ ದೇವಾಲಯವು ಮೂರು ಗರ್ಭಗೃಹ, ಒಂದು ಅಂತರಾಳ, ನವರಂಗ, ಮುಖಮಂಟಪ, ಪಾತಾಳಾಂಕಣ ಹಾಗೂ ಪ್ರವೇಶದ್ವಾರವನ್ನು ಹೊಂದಿರುವ ಬೃಹತ್ ರಚನೆಯಾಗಿದೆ. ಈ ದೇವಾಲಯದ ಪ್ರಧಾನ ಗರ್ಭಗೃಹದಲ್ಲಿ ಪೂರ್ವಾಭಿಮುಖವಾಗಿ ಮಹಾವಿಷ್ಣುವು ಮಾಧವನ ರೂಪದಲ್ಲಿರುವನು. ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲೊಂದಾದ ಮಾಧವನು ಚಕ್ರ, ಶಂಖ, ಪದ್ಮ, ಗದೆಯನ್ನು ಧರಿಸಿರುವನು. ಗರುಡಪೀಠದ ಮೇಲೆ ಸುಮಾರು ಐದು ಅಡಿ ಎತ್ತರದ ಸ್ವಾಮಿಯು ಸೌಮ್ಯವದನನಾಗಿದ್ದು ಪ್ರಭಾವಳಿಯಲ್ಲಿ ದಶಾವತಾರದ ಶಿಲ್ಪಗಳಿವೆ. ಅಲಂಕೃತ ಕಿರೀಟಧಾರಿಯಾದ ದೇವನು ಸೂಕ್ಷ್ಮಕೆತ್ತನೆಗಳಿಂದ ಆಕರ್ಷಕವಾಗಿರುವನು. ಮಾಧವನ ಗರ್ಭಗೃಹಕ್ಕೆ ಅಂತರಾಳವಿದ್ದು ಉಳಿದೆರಡು ಗರ್ಭಗೃಹಗಳು ನವರಂಗಕ್ಕೆ ನೇರವಾಗಿ ತೆರೆದುಕೊಳ್ಳುತ್ತವೆ. ದಕ್ಷಿಣ ಗರ್ಭಗುಡಿಯಲ್ಲಿ ಅಂದವಾದ ವೇಣುಗೋಪಾಲಸ್ವಾಮಿ ಹಾಗೂ ಉತ್ತರದ ಗರ್ಭಗೃಹದಲ್ಲಿ ವರದರಾಜಸ್ವಾಮಿಯ ಮೂರ್ತಿಗಳಿವೆ. ತಮಾಲ ವೃಕ್ಷದಡಿಯಲ್ಲಿ ಕೊಳಲು ನುಡಿಸುತ್ತಿರುವ ವೇಣುಗೋಪಾಲನು ನೋಡಲು ಬಹಳ ಆಕರ್ಷಕ ವಾಗಿರುವನು. ದೇವನ ಎರಡೂ ಬದಿಗಳಲ್ಲಿ ಗೋವುಗಳು. ಗೋಪಾಲಕರು. ಗೋಪಿಕೆಯರು ಮುರಳಿಯ ನಾದಕ್ಕೆ ಮನಸೋತಂತೆ ಚಿತ್ರಿಸಲಾಗಿದೆ. ಗೋಪಾಲಕೃಷ್ಣನ ಎಡಬಲಗಳಲ್ಲಿ ಚಕ್ರ, ಶಂಖಗಳಿವೆ.

ಉತ್ತರ ಗರ್ಭಗುಡಿಯಲ್ಲಿರುವ ವರದರಾಜಸ್ವಾಮಿಯನ್ನು ಅಲ್ಲಾಳವರದ ರಾಜನೆಂತಲೂ ಶಾಸನಗಳಲ್ಲಿ ಕರೆಯಲಾಗಿದೆ. ವರದರಾಜಸ್ವಾಮಿಯು ಚತುರ್ಭುಜನಾಗಿದ್ದು, ಬಲಮೇಲಿನ ಕೈಯಲ್ಲಿ ಚಕ್ರವನ್ನು ಎಡಮೇಲಿನ ಕೈಯಲ್ಲಿ ಶಂಖವನ್ನು ಹಾಗೂ ಕೆಳಎಡಗೈಯಲ್ಲಿ ಗದೆಯನ್ನು ಧರಿಸಿದ್ದು, ಕೆಳಬಲಗೈ ವರದ ಹಸ್ತದಲ್ಲಿರುತ್ತದೆ. ದೇವನ ಸುತ್ತಲೂ ಪ್ರಭಾವಳಿಯಲ್ಲಿ ದಶಾವತಾರದ ಸೂಕ್ಷ್ಮ ಕೆತ್ತನೆಗಳಿವೆ.

ನವರಂಗವು ಒಂಭತ್ತು ಅಂಕಣಗಳನ್ನು ಹೊಂದಿದ್ದು, ಮಧ್ಯಭಾಗದಲ್ಲಿ ಆಕರ್ಷಕವಾದ ನಾಲ್ಕು ಕಂಬಗಳಿವೆ. ನವ



ರಂಗದ ಮೇಲ್ಛಾವಣಿಯು 9 ಭುವನೇಶ್ವರಿಗಳನ್ನು ಹೊಂದಿರುತ್ತದೆ, ಹಾಗೂ ಮಧ್ಯದ ಭುವನೇಶ್ವರಿಯು ಆಳವಾಗಿದ್ದು ಸೊಗಸಾಗಿರುತ್ತದೆ. ಈ ದೇವಾಲಯದ ಮುಖಮಂಟಪವು ಆರು ಅಂಕಣಗಳನ್ನು ಹೊಂದಿದ್ದು, ಹೊಯ್ಸಳರ ಕಾಲದ್ದೇ ಆಗಿರುವುದು ವಿಶೇಷ. ಇಲ್ಲಿ ವೇಣುಗೋಪಾಲ ಹಾಗೂ ಲಕ್ಷ್ಮೀ ನಾರಾಯಣರ ಸುಂದರ ಮೂರ್ತಿಗಳಿವೆ. ಬೆಳ್ಳೂರಿನ ಶಿಥಿಲ ದೇವಾಲಯದಿಂದ ಈ ಮೂರ್ತಿಗಳನ್ನು ತಂದಿರಬಹುದೆಂದು ಭಾವಿಸಲಾಗಿದೆ. ವೇಣುಗೋಪಾಲನು ಸುಮಾರು 5 ಅಡಿ ಎತ್ತರದ ವಿಗ್ರಹವಾಗಿದ್ದು, ನವಿರಾದ ಸೂಕ್ಷ್ಮ ಕೆತ್ತನೆಗಳಿಂದ ಮನಸೂರೆಗೊಳ್ಳುವನು. ದೇವನು ಧರಿಸಿರುವ ಆಭರಣಗಳು ಕೈಕಡಗ, ಜೋಲಾಡುತ್ತಿರುವ ಇಳೆವಸ್ತ್ರ, ಸೊಂಟಪಟ್ಟಿ, ಕಾಲ್ಕಡಗಗಳು ಬಹಳ ಸೊಗಸಾಗಿವೆ. ತ್ರಿಭಂಗಿಯಲ್ಲಿ ಕತ್ತರಿ ಕಾಲನ್ನು ಹಾಕಿ ನಿಂತಿರುವ ವೇಣುಗೋಪಾಲನ ಸುತ್ತಲೂ ಗೋಪಾಲಕರು, ಗೋಪಿಕಾಸ್ತ್ರೀಯರು ಗೋವುಗಳ ಶಿಲ್ಪಗಳಿವೆ.

ನವರಂಗದ ಪ್ರವೇಶದ್ವಾರದ ಬಲಬದಿಯಲ್ಲಿರುವ ಲಕ್ಷ್ಮೀ ನಾರಾಯಣ ಶಿಲ್ಪವು ಬಹಳ ಮನೋಹರವಾಗಿರುತ್ತದೆ. ಪದ್ಮ ಪೀಠದ ಮೇಲೆ ಲಕ್ಷ್ಮೀದೇವಿಯನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡಿರುವ ನಾರಾಯಣನು ಚತುರ್ಭುಜನಾಗಿದ್ದು, ಪದ್ಮ,ಗದಾ,ಚಕ್ರ,ಶಂಖುವನ್ನು ಧರಿಸಿರುವನು. ಬೆಳ್ಳೂರಿನ ಮಾಧವರಾಯ ದೇವಾಲಯದ ಕಲ್ಯಾಣ ಮಂಟಪ ಮತ್ತು ದೊಡ್ಡ ಪ್ರವೇಶದ್ವಾರವು ವಿಜಯನಗರೋತ್ತರ ಕಾಲದ ಸೇರ್ಪಡೆಯಾಗಿರುವುದು.

ಶ್ರೀ ಪ್ರಸನ್ನ ಮಾಧವ ದೇವಾಲಯವು 5 ಹಂತಗಳ ಜಗಲಿಯ ಮೇಲೆ ತೆರೆದ ಪ್ರದಕ್ಷಿಣಾ ಪಥವನ್ನು ಹೊಂದಿದೆ. ದೇವಾಲಯದ ಹೊರಭಿತ್ತಿಯು ಶಿಲ್ಪಗಳನ್ನು ಹೊಂದಿರದೆ ಸರಳವಾಗಿದೆ. ದೇವಾಲಯದ ಪ್ರಧಾನ ಗರ್ಭಗುಡಿಯು ಶಿಖರವನ್ನು ಹೊಂದಿದ್ದು, ತುದಿಯಲ್ಲಿ ಕಳಶವಿದೆ.

ಬೆಳ್ಳೂರಿನ ಮಾಧವರಾಯ ದೇವಾಲಯವನ್ನು ಹೊಯ್ಸಳದೊರೆ ಮೂರನೆಯ ನರಸಿಂಹನ ಮಹಾಪ್ರಧಾನಿ ಪೆರುಮಾಳೆ ದಂಡನಾಯಕ ಕ್ರಿ.ಶ. ಸುಮಾರು 1271 ರಲ್ಲಿ ನಿರ್ಮಿಸಿರುವನು. ಈತನು ತನ್ನ ದೊರೆ ಮೂರನೆಯ ನರಸಿಂಹನಿಂದ ಉದ್ಭವ ನರಸಿಂಹಪುರವಾದ ಬೆಳ್ಳೂರನ್ನು ಪಡೆದು ಪ್ರಸನ್ನ ಮಾಧವ



ಸ್ವಾಮಿಯ ಸೇವಾ ಕೈಂಕರ್ಯಕ್ಕಾಗಿ ಸಮೀಪದ ಗ್ರಾಮಗಳಾದ ಬೆಟ್ಟದ ಕೋಟೆ. ಬಿಲ್ಲಿಬೆಳಗುಂಬ ಹಾಗೂ ತಿಪ್ಪೂರನ್ನು ಸಹಾ ಪಡೆದಿರುವುದು ಮಾಧವರಾಯ ದೇವಾಲಯದಲ್ಲಿ ದೊರೆತಿರುವ ಶಾಸನಗಳಲ್ಲಿ ತಿಳಿದು ಬರುತ್ತದೆ.

ವಿಷ್ಣುದೇವ ಹಾಗೂ ಮಂಚಲೆಯರ ಪುತ್ರನಾದ ಪೆರುಮಾಳೆ ದಂಡನಾಯಕನ ಗುರುಗಳು ರಾಮಕೃಷ್ಣರು. ಈತನ ಸಹೋದರಿಯ ಹೆಸರು ಬಸವಿಯಕ್ಕ ಹಾಗೂ ದಂಡನಾಯಕನಿಗೆ ಚಕ್ರವರ್ತಿ ದಂಡನಾಯಕನೆಂಬ ಮಗನಿರುವನು.

ಪೆರುಮಾಳೆಯು ತಾನು ಪಡೆದ ಗ್ರಾಮಗಳಿಂದ ಪಡೆದ ಆದಾಯವನ್ನು ಏಳು ಭಾಗವಾಗಿ ಮಾಡಿ ತೊಂಭತ್ತಾರು ಮಹಾಜನರಿಗೆ ಹಂಚಿ ದೇವರ ಅಂಗಭೋಗ, ರಂಗಭೋಗ, ಅಮೃತಪಡಿ, ಚೈತ್ರ - ಪವಿತ್ರ ಸೇವೆ, ತಿರುನಾಳ ದೀಪೋತ್ಸವ ಹಾಗೂ ದೇವಾಲಯದ ಪರಿಚಾರಕರ ಸಂಬಳಕ್ಕಾಗಿ ಕೆಲವು ತೆರಿಗೆಗಳನ್ನು ಮಾನ್ಯಮಾಡಿದವನು.



ಈತನು ನೀಡಿದ ಏಳು ಭಾಗಗಳಲ್ಲಿ ಒಂದು ಭಾಗವನ್ನು ಮಹಾಜನರುಗಳು ಪೆರುಮಾಳೆ ದಂಡನಾಯಕನಿಗೆ ಹಿಂತಿರುಗಿಸಿರುವರು ಹಾಗೂ ಇದನ್ನು ಶಾಸನದಲ್ಲಿ "ಪ್ರೀತಿಕೊಡುಗೆ" ಯೆಂದು ಹೆಸರಿಸಿರುವುದು ಕುತೂಹಲಕರವಾಗಿರುತ್ತದೆ.

ಪೆರುಮಾಳೆ ದಂಡನಾಯಕನ ದೇವರ ಅಮೃತ ಪಡಿ, ನಿತ್ಯಪಡಿ, ಅಕ್ಕಿ, ಎಳ್ಳೆಣ್ಣೆ, ಹೆಸರುಬೇಳೆ , ತೊಗರಿಬೇಳೆ, ಶ್ರೀಗಂಧ, ಧೂಪಕ್ಕೆ ಅರಳೆ, ಉಪ್ಪು, ಮೆಣಸು, ಅರಿಶಿನ, ಸೀಗೆಕಾಯಿ, ಏಲಕ್ಕಿ, ಚಕ್ಕೆ, ಎಲೆ - ಅಡಿಕೆ, ವಿಶೇಷ ದಿನಗಳಲ್ಲಿ ಕಳಶ ಸ್ಥಾಪನೆಗೆ ವಸ್ತ್ರ, ಪಂಚಾಮೃತ, ದ್ರವ್ಯಕ್ಕೆ ಹಣ, ಜಯಂತಿಗಳಲ್ಲಿ ಬಾಗಿನ ದ್ರವ್ಯಕ್ಕೆ ದೇವರ ಅಂಗವಸ್ತ್ರ, ತೆರೆಸೀರೆ, ಅಗ್ರಣಿಯ ಬಿಂದಿಗೆ, ಛತ್ರ-ಚಾಮರ, ಮುಂತಾದ ವಸ್ತುಗಳಿಗೆ ಇಂತಿಷ್ಟೇ ಗದ್ಯಾಣವನ್ನು ನಿಗದಿಪಡಿಸಿ ಪ್ರಸನ್ನ ಮಾಧವಸ್ವಾಮಿಯ ಸೇವಾ ಕೈಂಕರ್ಯವು ನಿರ್ವಿಘ್ನವಾಗಿ ನಡೆಯುವಂತೆ ಮಾಡಿರುವುದು ಅಭಿನಂದನೀಯವಾಗಿರುತ್ತದೆ.

ಶ್ರೀ ಪ್ರಸನ್ನ ಮಾಧವರಾಯಸ್ವಾಮಿಯ ದೇವಾಲಯವು ವಿದ್ಯಾಕೇಂದ್ರವೂ ಆಗಿತ್ತು, ಇಲ್ಲಿ ಋಗ್ವೇದ ಹಾಗೂ ಯಜುರ್ವೇದವನ್ನು ಕಲಿಯುವ ವಿದ್ಯಾರ್ಥಿಗಳಿದ್ದರು. ಅವರಿಗೂ ಇಲ್ಲಿ ಊಟ ವಸತಿಯ ವ್ಯವಸ್ಥೆಯನ್ನು ದಂಡನಾಯಕನು ತನ್ನ ಸ್ವಂತ ಮನೆಯಲ್ಲಿಯೇ ಮಾಡಿರುವುದು ಆತನ ದಾನಶೀಲತೆಗೆ ಸಾಕ್ಷಿಯಾಗಿದೆ.

ಕ್ರಿ.ಶ. 1858 ರಲ್ಲಿ ಶೃಂಗೇರಿ ಮಠದ ಅಧಿಕಾರಿ ಶ್ರೀ ರಾಮಾಶಾಸ್ತ್ರಿ ಎಂಬುವರು ಮಾಧವರಾಯನಿಗೆ ಹಿತ್ತಾಳೆ ಪ್ರಭಾವಳಿಯನ್ನು ಮಾಡಿಸಿಕೊಟ್ಟಿರುವುದಕ್ಕೆ ಶಾಸನಾಧಾರವಿರುತ್ತದೆ.

ಪ್ರಸನ್ನ ಆದಿಮಾಧವರಾಯಸ್ವಾಮಿಯ ಬ್ರಹ್ಮರಥೋತ್ಸವವು ಮಾರ್ಚ್ ತಿಂಗಳಲ್ಲಿ ಬಹು ಅದ್ದೂರಿಯಾಗಿ ಜರುಗುವುದು. ಉತ್ಸವದಲ್ಲಿ ದೇವಾಲಯದಲ್ಲಿರುವ ಎಲ್ಲಾ ಮೂರ್ತಿಗಳಿಗೆ ಸುಂದರವಾದ ಆಭರಣಗಳು ಹಾಗೂ ಪುಷ್ಪಗಳಿಂದ ಅಲಂಕರಿಸಲಾಗುತ್ತದೆ.

ಹೀಗೆ ಬನ್ನಿ: ಬೆಂಗಳೂರು - ಹಾಸನ ರಸ್ತೆಯಲ್ಲಿ ಬೆಂಗಳೂರಿನಿಂದ ಸುಮಾರು 104 ಕಿ.ಮೀ. ದೂರದಲ್ಲಿ ಬೆಳ್ಳೂರು ತಿರುವು ಸಿಗುತ್ತದೆ. ಅಲ್ಲಿ ಬಲಕ್ಕೆ ತಿರುಗಿ ಒಂದು ಕಿ.ಮೀ.ನಷ್ಟು ದೂರ ಬಂದರೆ ಬೆಳ್ಳೂರು ಗ್ರಾಮ ಸಿಗುವುದು. ನಾಗಮಂಗಲದಿಂದ 16 ಕಿ.ಮಿ. ದೂರದಲ್ಲಿರುವ ಬೆಳ್ಳೂರಿಗೆ ಬೆಂಗಳೂರು, ಹಾಸನ, ನಾಗಮಂಗಲ, ತುಮಕೂರಿನಿಂದ ಸಾಕಷ್ಟು ವಾಹನಗಳ ವ್ಯವಸ್ಥೆಯಿರುತ್ತದೆ.

# ಶ್ರೀ ಮಹಿಪತಿರಾಯರು - ಒಂದು ಅವಲೋಕನ

- ಡಾ॥ ಲಕ್ಷ್ಮೀಕಾಂತ ವಿ. ಮೊಹರೀರ
9060931359

ದಾಸಸಾಹಿತ್ಯವು ವಿಶ್ವಸಾಹಿತ್ಯ ಕಂಡ ವಿನೂತನ ಬಗೆಯ ಸಾಹಿತ್ಯ ಪ್ರಕಾರ ಸಾಹಿತ್ಯದ ಶೈಲಿಯಲ್ಲಿ ಸಂಗೀತ ಮಾಧ್ಯಮದ ಮೂಲಕ ತತ್ವ ಪ್ರಸಾರಕ್ಕೆ ತೊಡಗಿದ್ದು ಇದರ ವೈಶಿಷ್ಟ್ಯ.ಇಂತಹ ವಿಶಿಷ್ಟ ಸಾಹಿತ್ಯ ಪ್ರಕಾರವನ್ನು ಜನರ ಮನಗಳಿಗೆ ತರುವ ಮಹೋದ್ದೇಶ ಕಾರ್ಯಮಾಡುವುದರ ಜೊತೆಗೆ ಜಗನ್ನಾಥನ ಚಿಂತನೆಯೂ, ಜೀವನದ ಅತ್ಯಂತ ಪ್ರಮುಖ ಅಂಗವೆಂಬುದಾಗಿ ಜಗದ ಜನರಿಗೆ ತಿಳಿಸಿ, ಮಹದುಪಕಾರ ಮಾಡಿದ ಸರ್ವಶ್ರೇಯಸ್ಸು ಹರಿದಾಸರಿಗೆ ಸಲ್ಲುತ್ತದೆ.

ಈ ನಿಟ್ಟಿನಲ್ಲಿ ಕಾಖಂಡಕಿ ಮಹಿಮತಿರಾಯರ ಜೀವನದತ್ತ ಹೊರಳಿ ನೋಡಿದಾಗ ದಾಸ ಸಾಹಿತ್ಯದ ಮಕರಂದ ಕಾಣಿಸದೇ ಇರದು.

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ 'ಐಗಳಿ' ಗ್ರಾಮಕ್ಕೆ ನಿವಾಸಿಯಾದ ಮೌನಭಾರ್ಗವ ಗೊತ್ರದ ಕೋನೇರಾಯನೆಂಬ ವಿಪ್ರರಿಗೆ ಹಿರಿಯ ಪುತ್ರರಾಗಿ ವೆಂಕಟೇಶ ಹಾಗೂ ಕಿರಿಯರಾಗಿ ಗುರುರಾಯರು ಜನಿಸಿದ್ದರು. ಜೀವನ ನಿರ್ವಹಣೆಗಾಗಿ ತಮ್ಮ ಸ್ವಗ್ರಾಮ ಬಿಟ್ಟು, ಅದಲಶಾಹಿ ಅರಸರ ರಾಜಧಾನಿಯಾಗಿರುವ ಬಿಜಾಪೂರ (ಇಂದಿನ ವಿಜಯಪುರ) ಕ್ಕೆ ಬಂದು ನೆಲೆಸಿದ್ದರು.

ಇವರ ಹಿರಿಯ ಮಗ ವೆಂಕಟೇಶನು ವಿದ್ಯಾಭ್ಯಾಸ ಪಡೆದು ಕುಲದ ಕರ್ಣಿಕ ವೃತ್ತಿ ಮಾಡಲು"ಐಗಳಿಗೆ" ಗ್ರಾಮಕ್ಕೆ ಮರುಳಿದನು.ಇವರ ಕಿರಿಯ ಮಗನಾದ ಗುರುರಾಯನು ತಂದೆ-ತಾಯಿಂದರ ಜೊತೆಗೆ ಬಿಜಾಪೂರದಲ್ಲೇ ಉಳಿದು, ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಗ್ರಂಥಗಳ ಅಭ್ಯಾಸ ಮಾಡುತ್ತ, ಸಾಹಿತ್ಯದಲ್ಲೂ ನಿಷ್ಣಾವಂತರಾಗಿದ್ದಲ್ಲದೇ, ಹರಿಕಥೆ ಮಾಡುವುದರಲ್ಲಿ ಆಸಕ್ತಿ ಬೆಳಸಿಕೊಂಡಿದ್ದರಿಂದಾಗಿ, ಜನಪ್ರಿಯರಾದರು. ಮುಂದೆ ಖವಾಸಖಾನ ಎಂಬ ಹಬಶೀ ಸರದಾರನ ಮುಖಾಂತರ,ಇವರ ವಿದ್ವತ್ತು ಬಿಜಾಪೂರ ಆದಿಲಶಹನಿಗೆ ಮೆಚ್ಚುಗೆಯಾಗಿ,ಅವರ ರಾಜಧಾನಿಯಲ್ಲಿ ಒಳ್ಳೆಯ ಹುದ್ದೆ ಪ್ರಾಪ್ತವಾಯಿತು. ದೈವಕೃಪೆ ಬಲವತ್ತರದಿಂದಾಗಿ, ನಂಗಶಾಹರ ಪರಿ ಚಯ, ಅವರ ಸೂಚನೆ ಮೇರೆಗೆ,ಭಾಸ್ಕರ ಸ್ವಾಮಿಗಳನ್ನು ಕಾಣಲು ತಮ್ಮ ಮಡದಿ ತಿಮ್ಮಪ್ಪನೊಂದಿಗೆ 'ಸಾರವಾಡಕ್ಕೆ' ಹೋದ ಪ್ರಸಂಗ ಅವರ ಚರಿತ್ರೆಯಲ್ಲಿ ಕಾಣಸಿಗುತ್ತದೆ. ಭಾಸ್ಕರ ಸ್ವಾಮಿಜಿಯಿಂದ ಕೃಪಾಶೀರ್ವಾದ ಪಡೆದು ಅವರ ಕುರಿತು "ಭಾಸ್ಕರ ಸ್ವಾಮಿಯು ಕರುಣಾಳು ಮೂರ್ತಿಯು ಮೂಢ ಮಹಿಪತಿಯ ಕೃಪಾಂಬುಧಿಯು" ಕೃತಿಯನ್ನು ರಚಿಸಿದರು. ಬಹುಶಃ ಇದುವೇ ಮಹಿಪತಿರಾಯರ ಮೊದಲ ಕೃತಿಯಾಗಿರಬೇಕು. ಅಂದಿನಿಂದ 'ಮಹಿಪತಿ' ಎಂಬ ಅಂಕಿತದಿಂದ ತಮ್ಮ ಅನುಭವಗಳನ್ನು ಕೀರ್ತನೆ ರೂಪದಲ್ಲಿ ಪ್ರಾರಂಭಿಸಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಮುಂದೆ ಶ್ರೀಧರ ಸ್ವಾಮಿಗಳ ಕೃಪಾ ಶೀರ್ವಾದ ದೊರೆತು ಬಿಜಾಪೂರಕ್ಕೆ ಬಂದು ನೆಲೆಸಿದರು. ಬಿಜಾ ಪೂರಕ್ಕೆ ಹತ್ತಿರವಿರುವ ಕಾಖಂಡಕಿಗ್ರಾಮದ ಜನರ ಒತ್ತಾಸೆಯ ಮೇರೆಗೆ ಅಲ್ಲಿಯೇ ನೆಲೆಸಿ ಸುಮಾರು 65 ವರ್ಷಗಳ ಕಾಲ ಬದುಕಿ, ದಾಸಸಾಹಿತ್ಯ. ಕ್ಷೇತ್ರಕ್ಕೆ ಹಾಗೂ ಅನುಭಾವ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಿ, ಕೊಲ್ಹಾರದ ಕೃಷ್ಣೆಯ ದಡದಲ್ಲಿ ಕಾರ್ತಿಕ ಮಾಸದ ಅಮಾವಾಸ್ಯೆಯಂದು ಶ್ರೀಹರಿಯ ಪಾದವನ್ನು ಸೇರಿದರು. ಅವರ ಇಚ್ಛೆಯಂತೆ ಕಾಖಂಡಕಿಯಲ್ಲಿ ಅವರ ಸ್ಮರಣಾ ರ್ಥವಾಗಿ ವೃಂದಾವನವನ್ನು ಕಟ್ಟಲಾಯಿತು. ಅವರ ದೇಹವಿಟ್ಟ ಕೊಲ್ಹಾರದ ಕೃಷ್ಣೆಯ ದಡದಲ್ಲೂ ಒಂದು ವೃಂದಾವನವಿದೆ.

ಮಹಿಪತಿರಾಯರು ಕನ್ನಡ, ಮರಾಠಿ, ದಖಣೆ ಉರ್ದು ಭಾಷೆಗಳಲ್ಲದೇ ಮಿಶ್ರ ಭಾಷೆಗಳಲ್ಲಿಯೂ ಕೃತಿಗಳನ್ನು ರಚಿಸಿದ್ದಾರೆ ಅವುಗಳ ಒಟ್ಟು ಸಂಖ್ಯೆಯನ್ನು 754 ಎಂದು ಈವರೆಗೆ ಗುರುತಿಸಲಾಗಿದೆ ಎಂಬುವುದಾಗಿ ಡಾ॥ಕೃಷ್ಣಕೊಲ್ಹಾರ ಕುಲಕರ್ಣಿ ಅವರು "ಕಾಖಂಡಕಿ ಮಹಿಪತಿರಾಯರು" ವೆಂಬ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಕರ್ನಾಟಕ ಹರಿದಾಸರ ಕೃತಿಗಳಲ್ಲಿ ಈವರೆಗೆ ದೊರೆತ ವೈಯುಕ್ತಿಕ ಸಂಖ್ಯೆಯಲ್ಲಿ ಇದು ಅಧಿಕವಾಗಿದೆ.

ಮಹಿಪತಿರಾಯರು ಏಳು ನುಡಿಗಳ ತಮ್ಮ ಒಂದು ನಿಡಿದಾದ ಕೃತಿಯಲ್ಲಿ ಶ್ರೀ ಮಧ್ವಾಚಾರ್ಯರು ದ್ವಾದಶಸ್ತೋತ್ರದಲ್ಲಿ ಪಡಿಮೂಡಿಸಿದ ವಿಚಾರಗಳನ್ನು ಕನ್ನಡ ಭಾಷೆಯಲ್ಲಿ ಸುಂದರ-ಬಂಧುರವಾಗಿ ನಿರೂಪಿಸಿದ್ದಾರೆ.

'ಹರಿ ಹರಿ ಹರಿ ಹರಿ ಹರಿಯೆನಬೇಕು

ಹರಿಸ್ಮರಣೆಯೊಳನುದಿನವಿರಬೇಕು॥ ಎಂದು ಕೀರ್ತನೆ ರಚಿಸಿದ್ದಾರೆ.

ಇವರ 300 ಕ್ಕಿಂತಲೂ ಅಧಿಕ ಕೃತಿಗಳು ಹರಿಗುರುಗಳ ಮಹಿಮೆಗೆ ಮೀಸಲಾಗಿವೆ, ಎಂಬುವುದಾಗಿ ವಿದ್ವಾಂಸರ ಅಭಿಪ್ರಾಯ.

ದಾಸಸಾಹಿತ್ಯ ಕ್ಷೇತ್ರಕ್ಕೆ ಮಹಿಪತಿರಾಯರು ಅದ್ಭುತ ಕೊಡುಗೆ ನೀಡಿದ್ದಾರೆ. ಇಂತಹ ಸಾಧನಾ ಪುರುಷರ ನಾಮ ಸಂಕೀರ್ತನೆಯೇ ಭವಸಾಗರವನ್ನು ದಾಟಲು ಸಹಾಯಕವಾಗುವುದೆಂಬ ಜನವಾಣಿ ಎಲ್ಲೆಡೆ ಕೇಳಿ ಬರುತ್ತದೆ.



# ಶ್ರೀ ನರಸಿಂಹಾವತಾರ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಬದ್ರಿನಾಥ್

ಹಿರಣ್ಯಕಶಿಪು ಕಾಲಿಂದ ತುಳಿಯಲ್ಪಟ್ಟ ಸರ್ಪದಂತೆ ಬುಸುಗುಡುತ್ತಾ ವಿನಮ್ರನೂ, ಎಳೆವಯಸ್ಕನೂ, ಸ್ವಭಾವದಿಂದ ಯಾವುದೇ ರೀತಿ ದೂಷಿಸಲ್ಪಡದವನಾದ ಪ್ರಹ್ಲಾದನನ್ನು ಕೊಳಕು ಮಾತುಗಳಿಂದ ನಿಂದಿಸಿದ್ದಾನೆ. ನಂತರ "ನಿನ್ನ ಆರಾಧ್ಯ ದೈವ ನಿನ್ನನ್ನೇಗೆ ರಕ್ಷಿಸುವುದೋ ನೋಡುತ್ತೇನೆ" ಎಂದು ಖಡ್ಗವನ್ನು ಎಳೆದು ಸಿಂಹಾಸನದಿಂದ ಇಳಿದು ಹಿಮ್ಮಡಿಯಿಂದ ಕಂಭವನ್ನು ಒದ್ದವನಾಗಿದ್ದಾನೆ.ಅಷ್ಟೇ! ಬ್ರಹ್ಮಾಂಡವನ್ನೇ ನಡುಗಿಸಬಲ್ಲ ಶಬ್ದವು ಆ ಸ್ತಂಭದಿಂದ ಇಳಿದು ಹಿಮ್ಮಡಿಯಿಂದ ಕಂಭವನ್ನು ಒದ್ದವನಾಗಿದ್ದಾನೆ. ಅಷ್ಟೇ! ಬ್ರಹ್ಮಾಂಡವನ್ನೇ ನಡುಗಿಸಬಲ್ಲ ಶಬ್ದವು ಆ ಸ್ತಂಭದಿಂದ ಕೇಳಿಸಿದೆ. ಆ ಮಹಾ ಶಬ್ದವು ಬ್ರಹ್ಮಾದಿ ಲೋಕಗಳವರೆಗೆ ಕೇಳಿಸಿದೆ. ಆ ಶಬ್ದವನ್ನು ಕೇಳುತ್ತಲೇ "ಅಯ್ಯೋ! ಲೋಕಗಳೆಲ್ಲವೂ ನಾಶವಾಗುತ್ತಿವೆ"ಯೆಂದು ಎಲ್ಲರೂ ಆಕ್ರೋಶಿಸಿದ್ದಾರೆ. ಹಿರಣ್ಯಕಶಿಪು, ಮತ್ತು ಆತನ ಅಸುರ ಅನುಚರರು ಎಲ್ಲರೂ ಈ ಶಬ್ದವನ್ನು ಕೇಳಿಸಿಕೊಂಡಿದ್ದಾರೆ.ಅದು ಎಲ್ಲಿಂದ ಬಂದಿದೆಯೋ ತಿಳಿಯಲಿಚ್ಛಿಸಿದ್ದಾರೆ. ಶಬ್ದ ಹೊರಹೊಮ್ಮಿದ ಪ್ರಾಂತ್ಯವನ್ನು ಗುರುತಿಸಲು ಹಿರಣ್ಯಕಶಿಪು ಅತ್ತಿತ್ತ ನೋಡುತ್ತಿರಲು ನರನೂ ಅಲ್ಲದೆ, ಸಿಂಹವೂ ಅಲ್ಲದ ಮಹೋದ್ಭುತವಾದ ಭಗವದ್ರೂಪವೊಂದು ಕಂಭದಿಂದ ಹೊರಗೆ ಬಂದಿದೆ. "ಸ್ವಲ್ಪ ಮನುಷ್ಯ, ಸ್ವಲ್ಪ ಸಿಂಹನಾಗಿದ್ದು ಈ ಪ್ರಾಣಿ ಏನಿದು? ಎಂದು ದಾನವರಾಜ ವಿಸ್ಮಯವನ್ನು ಪಡೆದಿದ್ದಾನೆ.

ಶ್ರೀ ನರಸಿಂಹನ ರೂಪವು ಅತಿ ಭಯಂಕರವಾಗಿದ್ದು, ತೇಜೋಮಯವಾದ ಕೇಸರಿಗಳು ಆತನ ಮುಖವನ್ನು ಇನ್ನಷ್ಟು ವಿಕಸಿಸುವಂತೆ ಮಾಡಿವೆ. ಆತನ ಕೋರೆ ಹಲ್ಲುಗಳು ಸಬಲವಾಗಿವೆ. ಕತ್ತಿಯ ತುದಿಯಂತೆ ಮೊನಚಾಗಿರುವ ನಾಲಿಗೆ ಯುದ್ಧದಲ್ಲಿ ಸೀಳುವ ಖಡ್ಗದಂತಿವೆ. ಆತನ ಕಿವಿಗಳು ಸ್ವಲ್ಪವೂ ಅಲುಗಾಡದಂತೆ ನಿಶ್ಚಲವಾಗಿ ನಿಂತಿವೆ. ಆತನ ಮೂಗಿನ ಹೊಳ್ಳೆ, ಬಾಯಿಗಳು ಬೆಟ್ಟದ ಗವಿಗಳಂತಿವೆ. ಆತನ ದವಡೆಗಳು ಭಯಂಕರವಾಗಿ ತೆರೆದುಕೊಂಡಿವೆ. ಆತನ ಶರೀರವು ಆಕಾಶವನ್ನು ತಪ್ಪಿದೆ. ದೃಢವಾಗಿಯೂ, ಸ್ಥೂಲವಾಗಿಯೂ ಇರುವ ತೋಳುಗಳು, ವಿಶಾಲವಾದ ವಕ್ಷಸ್ಥಳಗಳಿಂದ ಅತಿ ಚಿಕ್ಕದಾದ ಸೊಂಟದಿಂದ ಕಾಣುವ ಆ ನೃಸಿಂಹಾವತಾರದ ರೂಪವು ಚಂದ್ರಕಿರಣಗಳಂಥಹ ಬಿಳಿದಾದ ರೋಮಗಳಿಂದ ಕೂಡಿದೆ. ಸೈನಿಕ ದಳಗಳನ್ನು ಹೋಲುವಂಥ ಭುಜಗಳು ಎಲ್ಲಾ ದಿಕ್ಕುಗಳಲ್ಲಿಯೂ ವಿಸ್ತಾರಗೊಂಡು, ಶಂಖ, ಚಕ್ರ,ಗದೆ, ಪದ್ಮ, ಸಹಜಾಯುಧಗಳನ್ನು ಧರಿಸಿವೆ. ಹಿರಣ್ಯಕಶಿಪು ಅದ್ಭುತವಾದ ಈ ರೂಪವನ್ನು ಕಂಡು ತನ್ನನ್ನು ಕೊಲ್ಲಲ್ಲು ಮಾಯಾವಿಯಾದ ವಿಷ್ಣುವು ಈ ಹೊಸರೂಪವನ್ನು ಧರಿಸಿದ್ದಾನೆಂದು ತಿಳಿದುಕೊಂಡಿದ್ದಾನೆ. ಕೂಡಲೇ ಆ ಅಸುರನು ಮೆಟ್ಟಿನಿಂತು ತನ್ನ ಗದೆಯೊಂದಿಗೆ ನೃಸಿಂಹನ ಮೇಲೆ ಬಿದ್ದಿದ್ದಾನೆ. ಅಲ್ಪನಾದ ಮಿಡಿತೆಯೊಂದು ಅಗ್ನಿಯಲ್ಲಿ ಪ್ರವೇಶಿಸಿ ಅಗೋಚರವಾದಂತೆ, ಹಿರಣ್ಯಕಶಿಪು ದೇವದೇವನ ಮೇಲೆರಗಿ ಆತನ ದಿವ್ಯ - ತೇಜಸ್ಸಿನಲ್ಲಿ ಕಾಣಲಾರದೇ ಹೋಗಿದ್ದಾನೆ. ಆಗ ಶ್ರೀ ನರಹರಿಯು ಗರುಡನು ಮಹಾಸರ್ಪವನ್ನು ಹಿಡಿಯುವಂತೆ ಗದೆಯಿಂದ ಆ ದಾನವನನ್ನು ಬಿಗಿಮುಷ್ಠಿಯಲ್ಲಿ ಹಿಡಿದಿದ್ದಾನೆ.ಆಗ ಹರಿಯು ಲೀಲಾವಿನೋದಕ್ಕಾಗಿ ಸ್ವಲ್ಪ ಕಾಲ ತನ್ನ ಹಿಡಿತವನ್ನು ಸಡಲಿಸಿದ್ದಾನೆ. ತನ್ನ ಶೌರ್ಯಸಾಹಸಕ್ಕೆ ನೃಸಿಂಹನು ಹೆದರಿ ತನ್ನನ್ನು ಬಿಟ್ಟು ಬಿಟ್ಟಿದ್ದಾನೆಂದು ದಾನವನು ಭಾವಿಸಿದ್ದಾನೆ. ಆಗ ದೇವತೆಗಳು ಈ ರೀತಿಯ ಯುದ್ಧವು ಶ್ರೇಯಸ್ಕರವಾದುದಲ್ಲವೆಂದು ಎಷ್ಟೋ ಉಪದೇಶ ಮಾಡಿದ್ದಾರೆ. ಆಗ ಹಿರಣ್ಯಕಶಿಪು ಕತ್ತಿಡಾಲುಗಳಿಂದ ಶ್ರೀ ಹರಿಯ ಮೇಲೆರಗಿದ್ದಾನೆ. ಈ ಬಾರಿ ನೃಸಿಂಹನು ವಿಕಟ್ಟಟ್ಟಾಹಾಸದಿಂದ ಆ ದಾನವನ್ನು ಮುಷ್ಠಿಯಲ್ಲಿ ಬಂಧಿಸಿದ್ದಾನೆ. ಶ್ರೀ ನರಹರಿ ಮಾಡಿದ ಈ ಬಗೆಯ ಭೀಕರ ಗರ್ಜನೆಗೆ ಭಯಪಟ್ಟು ದಾನವನು ಕಣ್ಣನ್ನು ಮುಚ್ಚಿಕೊಂಡಿದ್ದಾನೆ. ಆಗ ಶ್ರೀ ನರಹರಿಯು ಆ ದಾನವನ ಶರೀರವನ್ನು ಸಭಾದ್ವಾರಕ್ಕೆ ಎಳೆದುಕೊಂಡು ಹೋಗಿ, ತನ್ನ ತೊಡೆಯ ಮೇಲೆ ಹಾಕಿಕೊಂಡು ಸಲೀಲವಾಗಿ ತನ್ನ ಉಗುರುಗಳಿಂದ ಸೀಳಿಬಿಟ್ಟಿದ್ದಾನೆ.

ಆಗ ನೃಸಿಂಹನ ಮುಖವು, ಚಿಮ್ಮಿದ ರಕ್ತದಿಂದ ಒದ್ದೆಯಾಗಿ ಜಿಟ್ಟಿದೆ ಕೋಪದಿಂದ ಆತನ ನೇತ್ರಗಳು ದುರ್ನಿರೀಕ್ಷಣಗೊಂಡಿವೆ. ನಂತರ ನರಹರಿ ಆ ದಾನವನ ಉದರದಿಂದ ಕರುಳನ್ನು ತೆಗೆದುಕೊಂಡು ತನ್ನ ಕೊರಳಿಗೆ ಹಾರವನ್ನಾಗಿ ಹಾಕಿಕೊಂಡಿದ್ದಾನೆ. ಬಳಿಕ ಆ ಅಸುರನ ಎದೆಯನ್ನು ಸೀಳಿ ದೇಹವನ್ನು ದೂರದಲ್ಲಿ ಬಿಸಾಡಿದ್ದಾನೆ.ಆ ಬಳಿಕ ಶ್ರೀ ಹರಿಯು ಹಿರಣ್ಯ ಕಶಿಪು ವಿನ ಅನುಯಾಯಿಗಳೆಡೆಗೆ ತಿರುಗಿದ್ದಾನೆ. ಅವರೆಲ್ಲರೂ ಆಯುಧಪಾಣಿ ಯರಾಗಿದ್ದಾರೆ. ಅವರೆಲ್ಲರನ್ನು ಆ ದೇವದೇವನು ತನ್ನ ನಖಾಗ್ರಗಳಿಂದ ಸೀಳಿ ಹಾಕಿದ್ದಾನೆ.ಸಮಸ್ತ ದಾನವ ಸಂಹಾರವು ಪೂರ್ತಿಯಾಗಲು ಉಗ್ರ ನರಸಿಂಹನು ಇನ್ನು ಜೋರಾಗಿ ಘರ್ಜಿಸುತ್ತಾ ರಾಜಸಭೆಯಲ್ಲಿ ರಾಜ ಸಿಂಹಾ ಸನದ ಮೇಲೆ ಕುಳಿತಿದ್ದಾನೆ. ಈ ಉಗ್ರರೂಪವನ್ನು ನೋಡಿ ಎಲ್ಲರೂ ಭೀತ ರಾಗಿ ಯಾರೂ ಆತನ ಮುಂದೆ ಬರಲಿಲ್ಲ. ಲೋಕ ಕಂಟಕನಾದ ಹಿರಣ್ಯ ಕಶಿಪುವನ್ನು ವಧಿಸುತ್ತಲೇ ದೇವತಾ ಪತ್ನಿಯರ ಮುಖಗಳು ಅರಳಿವೆ. ಆನಂದದಿಂದ ಅವರು ಆಕಾಶದಿಂದ ಮಾತಿಮಾತಿಗೆ ಪುಷ್ಪವೃಷ್ಟಿಯನ್ನು ಗೈದಿದ್ದಾರೆ. ಶ್ರೀ ನೃಸಿಂಹ ದಿವ್ಯರೂಪ ಸಂದರ್ಶನಕ್ಕೆಂದು ಬಂದ ದೇವತೆಗಳ ಪುಷ್ಪಕವಿ ಮಾನಗಳಿಂದ ಆಕಾಶವೇ ತುಂಬಿ ಹೋಗಿವೆ.ದೇವದುಂದುಭಿ ಗಳು ಮೊಳಗಿವೆ. ಅಪ್ಸರೆಯರು ನೃತ್ಯ ಮಾಡಿದ್ದಾರೆ.ಗಂಧರ್ವಪ್ರಮುಖ ರೆಲ್ಲರೂ ಗಾಯನ ಮಾಡಿದ್ದಾರೆ.

ನಂತರ ಬ್ರಹ್ಮ, ಶಿವ , ಇಂದ್ರ, ಋಷಿಗಳು ಪಿತೃದೇವತೆಗಳು ಸಿದ್ಧರು. ವಿದ್ಯಾಧರರು,ನಾಗರು, ಮನುಗಳು, ಪ್ರಜಾಪತಿಗಳು ಗಂಧರ್ವರು, ಚಾರಣರು, ಯಕ್ಷರು,ಕಿಂಪುರುಷರು,ವೈತಾಳಿಕರು,ಕಿನ್ನರರು,ವಿಷ್ಣುಪಾರ್ಷದರು ಸರತಿಯಲ್ಲಿ ತಂತಮ್ಮ ಯಥಾಶಕ್ತಿಯಂತೆ ದೇವದೇವನನ್ನು ಸ್ತುತಿಸಿದ್ದಾರೆ. ಇಷ್ಟಾದರೂ ಉಗ್ರನರಸಿಂಹನ ಕೋಪವು ಶಾಂತವಾಗಲಿಲ್ಲ.ಆ ಸಮಯದಲ್ಲಿ ನೃಸಿಂಹನ ಮುಂದೆ ಬರಲು ಅವರೆಲ್ಲರೂ ಹೆದರಿದ್ದಾರೆ. ಭಗವಂತನ ಸಮೀ ಪಕ್ಕೆ ಬಂದು ದೇವನನ್ನು ಪ್ರಸನ್ನನಾಗಿಸಬೇಕೆಂದು ಅವರೆಲ್ಲರೂ ಲಕ್ಷ್ಮೀ ದೇವಿಯನ್ನು ಬೇಡಿಕೊಂಡಿದ್ದಾರೆ.ಅಂತಹ ಅದ್ಭುತವಾದ, ಅಸಾಧಾರಣವಾದ ರೂಪವನ್ನು ತಾನಿಲ್ಲಿಯವರೆಗೆ ನೋಡಿಲ್ಲವೆಂದೂ, ಆದ್ದರಿಂದ ತನ್ನಿಂದ ಈ ಕಾರ್ಯ ದುಃಖಸಾಧ್ಯವೆಂದೂ ಆಕೆ ನುಡಿದಿದ್ದಾಳೆ. ಆಗ ಬ್ರಹ್ಮದೇವರು ಪ್ರಹ್ಲಾದ ನೊಂದಿಗೆ "ವತ್ಸ! ಶ್ರೀನೃಸಿಂಹನು ನಿನ್ನ ತಂದೆಯ ಮೇಲೆ ಕೋಪಗೊಂಡಿ ದ್ದಾನೆ. ಆದ್ದರಿಂದ ನೀನೇ ಹೋಗಿ ಆ ದೇವೇಶನನ್ನು ಶಾಂತಗೊಳಿಸು" ಎಂದು ಅಂತಃಕರಣದಿಂದ ನುಡಿದಿದ್ದಾನೆ.

ಉಗ್ರನೃಸಿಂಹ ರೂಪವು ಬ್ರಹ್ಮಾದಿ ದೇವತೆಗಳಿಗೇ ಭಯವನ್ನುಂಟು ಮಾಡಿದೆ. ಆದರೆ ಮಹಾಭಾಗವತಪರನಾದ ಪ್ರಹ್ಲಾದನು ಕೇವಲ ಐದು ವರ್ಷದವನಾದರೂ ಈ ರೂಪವನ್ನು ನೋಡಿ ಭಯಪಡಲಿಲ್ಲ. ಬ್ರಹ್ಮನು ಪ್ರಹ್ಲಾದನೊಂದಿಗೆ ಹೀಗೆ ನುಡಿಯುತ್ತಲೇ ಆ ಬಾಲಭಕ್ತನು ಸಮಾ ಧಾನದಿಂದ ಹೋಗಿ ಶ್ರೀನೃಸಿಂಹನ ಪಾದಗಳಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದ್ದಾನೆ.ತನ್ನ ಪಾದಗಳಿಗೆ ಚಿಕ್ಕ ಮಕ್ಕಳು ಭಕ್ತಿ ಪರವಶನಾಗಿ ಸಾಷ್ಟಾಂ ಗವೆರಗಿದ್ದನ್ನು ಕಂಡು ಶ್ರೀ ನೃಸಿಂಹನ ಹೃದಯದಲ್ಲಿ ವಾತ್ಸಲವುಕ್ಕಿ ಬಂದಿದೆ. ಕ್ರೋಧವು ಕ್ಷಣಮಾತ್ರದಲ್ಲಿ ಕರಗಿ ಹೋಗಿದೆ. ಕೂಡಲೇ ಆ ದೇವದೇವನು ಆ ಬಾಲಕನನ್ನು ಕೈಯಿಂದ ಮೇಲೆತ್ತಿ, ತನ್ನ ಭಕ್ತಾಭಯದಾಯಕವಾದ ಹಸ್ತಕಮಲವನ್ನು ಆತನ ಶಿರದ ಮೇಲೆ ನೇವರಿಸಿದ್ದಾನೆ. ದೇವ ದೇವನ ಕರಕಮಲ ದಿವ್ಯ ಸ್ಪರ್ಶದಿಂದ ಪ್ರಹ್ಲಾದನು ಭಕ್ತೋನ್ಮಾದದ ಸ್ಥಿತಿಗೆ ಸೇರಿದ್ದಾನೆ. ಹೃದಯ ಪ್ರೇಮಭರಿತವಾಗಿದೆ. ಕಣ್ಣುಗಳು ಕಣ್ಣೀರಿನಿಂದ ತುಂಬಿ ಕೊಂಡಿವೆ. ಆ ಸಮಯದಲ್ಲಿ ಕೇವಲ ದೇವ ದೇವನ ಪಾದಾರವಿಂದಗಳೇ ಹೃದಯವನ್ನೆಲ್ಲಾ ಆವರಿಸಿಕೊಂಡಿವೆ. ಶರೀರದ ಎರಡು ಕೈಗಳನ್ನು ಜೋಡಿಸಿ, ಮನಸ್ಸಿನಲ್ಲಿ ಶ್ರೀನರ ಹರಿಯ ಪಾದ ಪದ್ಮಗಳನ್ನು ಸ್ಮರಿಸುತ್ತಲೇ ಆತನ ಬಾಯಿಂದ ಶ್ರೀ ಹರಿಯ ಸ್ತುತಿಗಳು ಹೊರ ಹೊಮ್ಮಿವೆ. ಬಾಯಿ ಸಂಪೂರ್ಣ ದೇವ ದೇವನ ಸ್ತುತಿಯಲ್ಲಿ ಮುಳುಗಿ ಹೋಗಿವೆ.

"ದೇವಾ! ಅಸುರ ಕುಲದಲ್ಲಿ ಜನಿಸಿದ ನನಗೆ ನಿನ್ನನ್ನು ಪ್ರಸನ್ನನಾಗಿಸುವ ಸ್ತುತಿ ಮಾಡು ವುದು ಹೇಗೆ ಸಾಧ್ಯವಾಗುತ್ತದೆ? ಬ್ರಹ್ಮಾದಿ ದೇವ ತೆಗಳೇ ತಮ್ಮ ವಾಕ್ಪ್ರವಾಹದಿಂದ ನಿನ್ನನ್ನು ಶಾಂತ ಗೊಳಿಸುವಲ್ಲಿ ಸೋತು ಹೋಗಿದ್ದಾರೆ. ಅಂತವರ ದಲ್ಲಿ ನಾನು ಹೇಗೆ ತಾನೇ ಆ ಕಾರ್ಯಕ್ಕೆ ಯೋಗ್ಯ ನಾಗುತ್ತೀನಿ?". ಧನ, ಉತ್ತಮ ಜನ್ಮ, ಸೌಂ ದರ್ಯ,ತಪಸ್ಸು,ವಿದ್ಯೆ,ಇಂದ್ರಿಯ ಪತ್ಯವಂಥ ವುಗಳು ಇದ್ದರೂ ಅವಾವೂ ನಿನ್ನನ್ನು ಪ್ರಸನ್ನ ನಾಗಿಸಲಾರವು. ಕೇವಲ ಭಕ್ತಿ ಯೋಗದ ಮೂಲಕವೇ ನಿನ್ನನ್ನು ಪ್ರಸನ್ನಗೊಳಿಸಬಹುದು. ಗಜೇಂದ್ರನು ಅದನ್ನೇ ಮಾಡಿದುದರಿಂದಲೇ ಭಗವಂತನು ಆತ ನೆಡೆಗೆ ಪ್ರಸನ್ನನಾಗಿದ್ದಾನೆ. ದೇವಾ! ನರಕ ಸದೃಶವಾದ ಅಸುರ ಕುಲದಲ್ಲಿ ಜನಿಸಿದ ನಾನೆಲ್ಲಿ? ಬ್ರಹ್ಮರುದ್ರಾದಿಗಳು,ಲಕ್ಷ್ಮೀ ದೇವಿಯರಿಗೂ ದುರ್ಲಭವಾದ ನಿನ್ನ ನಿರಪೇಕ್ಷ ಕರುಣವೆಲ್ಲಿ? ಅಂತಹವರ ತಲೆಯ ಮೇಲೆಯೇ ಇಡದ ಕೈಯಿಂದ ಇಂದು ನನ್ನ ತಲೆಯನ್ನು ನೇವರಿಸಿರುವಿ. ದೇವಾ! ವಿಷಯವಾಂಛಲ ಸಾಂಗತ್ಯದಲ್ಲಿ ನಾನು ಕ್ರಮವಾಗಿ ಸಂಸಾರ ವೆಂಬ ಮಹೋಬಿಲದಲ್ಲಿ ಬೀಳುವ ಸಮಯಕ್ಕೆ ಸರಿಯಾಗಿ ನಿನ್ನ ನಿತ್ಯದಾಸನಾದ ನಾರದ ಮುನಿಯು ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಪರಮಪದವನ್ನು ಹೊಂದುವ ಮಾರ್ಗವನ್ನು ಉಪದೇಶಿದ್ದಾರೆ. ಆತನನ್ನು ಸೇವಿಸುವುದೇ ನನ್ನ ಆದ್ಯ ಕರ್ತವ್ಯ. ಅಂತಹ ಮಹಾನುಭಾವನ ಸೇವೆಯನ್ನು ನಾನು ತೊರೆಯುವುದಾದರೂ ಹೇಗೆ? ದೇವದೇವಾ! ನಿನಗೆ ಕೋಟಿ ನಮನಗಳು ನಿನ್ನನ್ನು ಸ್ತುತಿಸುವುದು, ಕರ್ಮಫಲಗಳನ್ನು ನಿನಗರ್ಪಿಸುವುದು, ನಿನ್ನನ್ನು ಅರ್ಚಿಸುವುದು, ನಿನ್ನ ಪಕ್ಷಕ್ಕಾಗಿ ಶ್ರಮಿಸುವುದು, ನಿನ್ನ ಪಾದಕಮಲ ಗಳನ್ನೇ ಸ್ಮರಿಸುವುದು, ನಿನ್ನ ಮಹಿಮೆಗಳನ್ನು ಕೇಳುವುದು,ಎಂಬ ಆರುವಿಧ ಭಕ್ತಿಯುತ ಕರ್ಮ ಗಳನ್ನು ಮಾಡದಲೆ ಯಾರು ಪರಮಹಂಸರಿಗೆ ಉದ್ದೇಶಿಸಲ್ಪಟ್ಟ ಲಾಭವನ್ನು ಹೊಂದಬಲ್ಲರು?"

"ಈ ವಿಧವಾಗಿ ಭಕ್ತಪ್ರಹ್ಲಾದನು ಭಗವ ದ್ಭಕ್ತವಾದ ಬುದ್ಧಿಯಿಂದ ಶ್ರೀನೃಸಿಂಹನನ್ನು ಪೂರ್ಣವಾಗಿ ಸ್ತುತಿಸಿದ್ದಾನೆ. ಅದರಿಂದ ಭಗ ವಂತನು ಮತ್ತಷ್ಟು ಪ್ರಸನ್ನಗೊಂಡಿದ್ದಾನೆ.







ಗೋದಾದೇವಿ ಅಲಂಕಾರದಲ್ಲಿ
ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರು

## 11-11-2020 ರಿಂದ 19-11-2020 ರ ವರೆಗೆ ನಡೆದ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಕಾರ್ತೀಕ ಬ್ರಹ್ಮೋತ್ಸವದ ದೃಶ್ಯಮಾಲಿಕೆ!

















**11-11-2020 ರಿಂದ**
**19-11-2020 ರ ವರೆಗೆ ನಡೆದ**
**ತಿರುಚಾನೂರು**
**ಶ್ರೀ ಪದ್ಮಾವತಿ ಅಮ್ಮನವರ**
**ಕಾರ್ತೀಕ ಬ್ರಹ್ಮೋತ್ಸವದ**
**ದೃಶ್ಯಮಾಲಿಕೆ!**

















ಇತ್ತೀಚೆಗೆ ತಿರುಮಲೆ ಸ್ವಾಮಿಯವರಿಗೆ, ತಿರುಚಾನೂರು ಶ್ರೀ ಪದ್ಮಾವತೀ ಅಮ್ಮನವರಿಗೆ ನಡೆದ ಪುಷ್ಪಯಾಗ ಮಹೋತ್ಸವದ ದೃಶ್ಯಗಳು



ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ವಾರ್ಷಿಕ ಕಾರ್ತೀಕ ಬ್ರಹ್ಮೋತ್ಸವಗಳಲ್ಲಿ ಆಂಧ್ರಪ್ರದೇಶ್ ರಾಜ್ಯದ ವತಿಯಿಂದ ರೇಷ್ಮೆವಸ್ತ್ರಗಳನ್ನು ಸಮರ್ಪಿಸುತ್ತಿರುವ ಗೌ॥ ಉಪಮುಖ್ಯಮಂತ್ರಿಯಾದ ಶ್ರೀ ನಾರಾಯಣಸ್ವಾಮಿಯವರು



ತಿರುಮಲೆ ಸ್ವಾಮಿಯವರ ಆಲಯದಲ್ಲಿ ಕಾರ್ತೀಕ ದೀಪೋತ್ಸವ



# ಭಗವದ್ಗೀತೆಯ ಮಹತ್ವ ಗೀತಾಜಯಂತಿ

- ಶ್ರೀಮತಿ. ಡಾ.ಸಿ. ಎಸ್. ಊರ್ಮಿಳಾ
9380426830

ಭಗವದ್ಗೀತೆ ಎಂದರೇನು? - ಮನುಕುಲದ ಉದ್ಧಾರಕ್ಕಾಗಿ ಸಾಕ್ಷಾತ್ ಭಗವಂತ - ಶ್ರೀಕೃಷ್ಣಪರಮಾತ್ಮ - ಉಪದೇಶಿಸಿದ ಏಕೈಕಗ್ರಂಥ. ಕುರುಕ್ಷೇತ್ರ ಯುದ್ಧದಲ್ಲಿ ಹೋರಾಡಬೇಕಾಗಿ ಬಂದ ಅರ್ಜುನನು ಕಷ್ಟದಲ್ಲಿದ್ದಂತೆ ಪ್ರತಿಯೊಬ್ಬನೂ ಹಲವಾರು ಬಗೆಯ ಕಷ್ಟದಲ್ಲಿ ತೊಳಲುತ್ತಿದ್ದಾರೆ. ಮಾನವ ಕುಲ ಐಹಿಕ ಅಸ್ತಿತ್ವವನ್ನೇ ನಿಜವಾದ ಅಸ್ತಿತ್ವವೆಂದು ಭಾವಿಸಿ ತೊಳಲುತ್ತಿದೆ. ಅರ್ಜುನನು ಕೃಷ್ಣನಿಗೆ ಶರಣಾಗತನಾದನು. ಅಂತೆಯೇ ನಾವೆಲ್ಲಾ ಭಗವಂತನಲ್ಲಿ ಶರಣಾಗಬೇಕು ಎಂದು ಮಾರ್ಗಸೂಚಿಯನ್ನು ತಿಳಿಸುವುದೇ ಭಗವದ್ಗೀತೆ

ಸರ್ವೋಪನಿಷದೋ ಗಾವಃ ದೋಗ್ಧಾ ಗೋಪಾಲನಂದನಃ।
ಪಾರ್ಥೋವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ ॥

ಸಕಲ ಉಪನಿಷತ್‌ಗಳು ಗೋವುಗಳು. ಅವುಗಳ ಹಾಲನ್ನು ಕರೆಯುವ ಜಗತ್ ಪಾಲಕನಾದ ಶ್ರೀಕೃಷ್ಣ. ಅರ್ಜುನನೇ ಹಾಲನ್ನು ಪಾನಮಾಡುವ ಕರು. ಜ್ಞಾನಿಗಳೇ ಭೋಕ್ತರು. ಉತ್ತಮವಾದ ಗೀತಾಮೃತವೇ ಉತ್ಕೃಷ್ಟವಾದ ಮತ್ತು ಅಮೃತಮಯವಾದ ಹಾಲು ಎಂದು ಜ್ಞಾನಿಗಳು ಹೇಳಿದ್ದಾರೆ.

ಭಗವದ್ಗೀತೆಯು ಹಿಂದೂಗಳ ಪವಿತ್ರಗ್ರಂಥವಾಗಿದೆ. ಶ್ರೀಕೃಷ್ಣನು ಕುರುಕ್ಷೇತ್ರದ ಯುದ್ಧ ಭೂಮಿಯಲ್ಲಿ ತನ್ನ ಆತ್ಮಸಖನಾದ ಅರ್ಜುನನಿಗೆ ಬೋಧಿಸಿದ ತತ್ವಗಳ ಸಾರವೇ ಭಗವದ್ಗೀತೆ. ವ್ಯಾಸ ಮಹರ್ಷಿಗಳಿಂದ 'ಮಹಾಭಾರತ'ವು ನಿರೂಪಿತವಾಯಿತು. ಈ ಮಹಾಗ್ರಂಥವನ್ನು ಸ್ವತಃ ಗಣೇಶನೇ ಬರೆದನು. ಇದರಲ್ಲಿ 1 ಲಕ್ಷ ಶ್ಲೋಕಗಳಿವೆ ಭಾರತಂ ಪಂಚಮೋ ವೇದಃ ಎಂದು ಪ್ರಸಿದ್ಧವಾಗಿದೆ. ಇದರಲ್ಲಿ ಕೌರವ - ಪಾಂಡವರ ಕಥೆಯೇ ಮುಖ್ಯ ವಿಷಯವಾಗಿದೆ. ಅಷ್ಟೇ ಅಲ್ಲದೆ ಇದರಲ್ಲಿ ನೀತಿಕಥೆಗಳು, ಅನೇಕ ಉಪಕಥೆಗಳು ಇವೆ. ಮಹಾಭಾರತದಲ್ಲಿ ಮುಖ್ಯವಾದುವುಗಳೆಂದರೆ ಭಗವಂತನೇ ಉಪದೇಶಿಸಿದ ಭಗವದ್ಗೀತೆ - ಭೀಷ್ಮರ ಉಪದೇಶ (ವಿಷ್ಣು ಸಹಸ್ರನಾಮ) ಮತ್ತು ವಿಧುರನ ನೀತಿ.

ಮಹಾಭಾರತದ ವೈಶಿಷ್ಟ್ಯವನ್ನು ಒಂದೇ ಮಾತಿನಲ್ಲಿ ಹೇಳಬೇಕೆಂದರೆ "ಯದಿಹಾಸ್ತಿ ತದನ್ಯತ್ರಯನ್ನೇಹಾಸ್ತಿ ನತತ್ ಕ್ವಚಿತ್" - ಇದರ ಅರ್ಥವೇನೆಂದರೆ (ಯಾವುದು ಇಲ್ಲಿದೆಯೋ ಅದು ಎಲ್ಲೆಲ್ಲೂ ಇದೆ. ಇಲ್ಲಿ ಯಾವುದಿಲ್ಲವೋ ಅದು ಎಲ್ಲಿಯೂ ಇಲ್ಲ) ಇದರಲ್ಲಿ ಹೇಳಿರುವ ವಿಷಯವು ಎಲ್ಲ ಕಡೆಯಲ್ಲಿಯೂ ಇದೆ. ಇದರಲ್ಲಿ ಇಲ್ಲದಿರುವ ವಿಷಯವೇ ಇಲ್ಲ ಅಂದರೆ ಈ ಹಿಂದೆಯೂ ಇತ್ತು, ಇಂದಿಗೂ ಇದೆ ಮುಂದೆಯೂ ಇರುತ್ತದೆ ಎಂದು ದೃಢೀಕರಿಸಲಾಗಿದೆ.

ಭಗವದ್ಗೀತೆಯ ಉಪದೇಶಕ್ಕೆ ಕಾರಣವಾದರು ಏನು?

ಪಾಂಡವರು ಹನ್ನೆರಡು ವರ್ಷ ವನವಾಸ ಮತ್ತು ಒಂದು ವರ್ಷ ಅಜ್ಞಾತವಾಸವನ್ನು ಮುಗಿಸಿ ಮರಳಿ ತಮ್ಮ ರಾಜ್ಯವನ್ನು ಪಡೆಯಲು ಶ್ರೀ ಕೃಷ್ಣನನ್ನು ಸಂಧಾನಕ್ಕಾಗಿ ಕೌರವನೆಡೆಗೆ ಕಳುಹಿಸಿದರು. ಆದರೆ ಶ್ರೀ ಕೃಷ್ಣ ಸಂಧಾನ ವಿಫಲವಾಯಿತು. ಹೀಗಾಗಿ ಯುದ್ಧವು ಅನಿವಾರ್ಯವಾಯಿತು. ದುರ್ಯೋಧನನ ಆಸೆಯಂತೆ ಶ್ರೀಕೃಷ್ಣನು ತನ್ನೆಲ್ಲ ಅಕ್ಷೋಹಿಣಿ ಸೈನ್ಯವನ್ನು ಅವನಿಗೆ ಕೊಟ್ಟು ತನ್ನನ್ನೇ ನಂಬಿದ ಭಕ್ತ ಅರ್ಜುನನ ಅಪೇಕ್ಷೆಯಂತೆ ಅವನ ರಥದ ಸಾರಥಿಯಾದನು. ಪಾರ್ಥಸಾರಥಿಯಾದನು ಶ್ರೀ ಕೃಷ್ಣ ಪರಮಾತ್ಮ'.

ಕುರುಕ್ಷೇತ್ರದ ಯುದ್ಧ ಭೂಮಿಯಲ್ಲಿ ಎರಡೂ ಸೈನ್ಯದ ಮಧ್ಯೆ ರಥವನ್ನು ಶ್ರೀಕೃಷ್ಣನು ತಂದು ನಿಲ್ಲಿಸಿದಾಗ - ಅರ್ಜುನನ ಬುದ್ಧಿಗೆ ಏನೋ ಮಂಕು ಕವಿದಂತಾಯಿತು. ತನ್ನನ್ನು ಅತ್ಯಂತ ವಾತ್ಸಲ್ಯದಿಂದ ಬೆಳೆಸಿದ ಅಜ್ಜ ಭೀಷ್ಮರನ್ನು ಕಂಡನು. ಜ್ಞಾನದ ಬೆಳಕನ್ನು ತುಂಬಿದ ಮಹಾನ್ ಬಿಲ್ಲುಗಾರ, ಸಮರ್ಥ ಬಿಲ್ಲುಗಾರನನ್ನಾಗಿ ಮಾಡಿದ ಗುರು ದ್ರೋಣಾಚಾರ್ಯರನ್ನೂ ಕಂಡನು. ಅಷ್ಟೇ ಅಲ್ಲ ಕೃಪಾಚಾರ್ಯರು ಮತ್ತು ಅಲ್ಲಿ ನೆರೆದ ಅಪಾರ ಬಂಧು-ಬಾಂಧವರನ್ನು ಕಂಡನು ಆಗ ಅವನ ಹೃದಯವು ಕರಗಿ, ದೇಹದಲ್ಲಿ ಕಂಪನ ಉಂಟಾಗಿ ತಾನೊಬ್ಬ ಕ್ಷತ್ರಿಯನೆಂಬುವುದೇ ಮರೆತು ಹೋಯಿತು ಆಹೋ ಬತಮಹತ್ಪಾಪಂಕರ್ತುಂವ್ಯವಸಿತಾವಯಮ್, ಯದ್ರಾಜ್ಯ ಸುಖಲೋಭೇನಹಂತುಂ ಸ್ವಜನ ಮಧ್ಯತಾಃ (ಗೀತ-45)

ಶ್ರೀ ಕೃಷ್ಣ ನನಗೆ ಈ ಯುದ್ಧವೇ ಬೇಡ . ನನ್ನ ಗುರುಗಳನ್ನು ಸ್ವಂತದವರನ್ನೆಲ್ಲಾ ಕೊಂದು ನಾನು ಅರಸುತನ ಪಡೆಯಬೇಕೇ? ಖಂಡಿತಾ ಇದು ಸಾಧ್ಯವಿಲ್ಲ" ಎಂದನು. ಈ ಸಂದಿಗ್ಧ ಪರಿಸ್ಥಿತಿಯಿಂದ ತನ್ನನ್ನು ಕಾಪಾಡು ಎಂದು ದೈನ್ಯದಿಂದ ಬೇಡಿಕೊಂಡನು. ಈ ಸಂದರ್ಭದಲ್ಲಿ ಶ್ರೀ ಕೃಷ್ಣ ಪಾರ್ಥನಲ್ಲಿ ಧೈರ್ಯವನ್ನು ತುಂಬಿ ಅವನ ಕರ್ತವ್ಯ ಪ್ರಜ್ಞೆಯನ್ನು ಜಾಗೃತಗೊಳಿಸಿದನು. ಅಷ್ಟೇ ಅಲ್ಲ ವಿಶ್ವರೂಪ ದರ್ಶನವನ್ನು ಮಾಡಿಸಿ ಅರ್ಜುನನಿಗೆ ಬೋಧಿಸಿದನು. ಈ ನುಡಿಮುತ್ತುಗಳೇ ಭಗವದ್ಗೀತೆ.

ಭಗವದ್ಗೀತೆ ಎಂದರೇನು? ಅದನ್ನು ನಾವೆಲ್ಲಾ ಅರಿಯಲು ಸಾಧ್ಯವೇ? ಎಂಬ ಸಂದೇಹ ನಮ್ಮೆಲ್ಲರ ಮನದಲ್ಲಿ ಮಾಡುವುದು ಸಹಜ. ಈ ಪುಸ್ತಕವನ್ನು ಸುಮ್ಮನೆ ದೇವರ ಮನೆಯಲ್ಲಿಟ್ಟಿರುತ್ತಾರಷ್ಟೇ. ಭಕ್ತಿಯಿಂದ ಕಣ್ಣಿಗೆ ಒತ್ತಿಕೊಂಡು ಪೂಜಿಸುತ್ತಾರಷ್ಟೇ ಅದು ಖಂಡಿತಾ ತಪ್ಪಿಲ್ಲ. ಹಾಗೆಯೇ ಒಂದು ದಿನವಾದರೂ ಒಂದು ಪುಟವನ್ನಾದರೂ ಓದಿ ತಿಳಿಯೋಣ ಎಂಬ ಆಸೆ ನಮಗೆ ಬರಬೇಡವೇ? ಹೌದು ಆಸೆ. ಅಭಿಲಾಶೆಯನ್ನು ಉಂಟು ಮಾಡುವವನೂ ಆದೇವನೇ ಅಲ್ಲವೇ? ಈಗ ಅವನು ಅನುಗ್ರಹಿಸಿಲ್ಲ ಸದ್ಯಕ್ಕೆ ನಾವು ಸರ್ವ ಧರ್ಮಾನ್ ಪರಿತ್ಯಜ್ಯ'- ಎಂಬ ಗೀತಾಚಾರ್ಯನ ಮಾತನ್ನು ಮಾತ್ರ ತಪ್ಪದೇ ನಡೆಸಿಕೊಂಡು. "ಮಾಮೇಕಂ ಶರಣಂ ವ್ರಜ" ಎಂಬ ಅವನ ಮತ್ತೊಂದು ಮಾತನ್ನು ಅನುಸರಿಸದೆಯೇ ಸದಾ ಕಾಲವೂ ನನಗೆ ಟೈಂ ಇಲ್ಲ ಎಂದೂ ಕಾಲ ಕಳೆಯುತ್ತಿದ್ದೇವೆ ಇರಲಿ.

ಗೀತೆಯೆಂದರೆ ಕೇವಲ ಶ್ರೀಕೃಷ್ಣಾರ್ಜುನರ ಸಂವಾದ ವಷ್ಟೇ ಅಲ್ಲ.ಇಡೀ ಮಾನವ ಕುಲದ ಉದ್ಧಾರಕ್ಕಾಗಿ, ಕರುಣಾಳುವಾದ ಶ್ರೀಕೃಷ್ಣಪರಮಾತ್ಮ ಪಾರ್ಥನಿಗೆ ಉಪದೇಶಿಸಿದ ಮತ್ತು ಪ್ರತ್ಯಕ್ಷವಾಗಿ ಅವನೇ ನುಡಿದ ಸತ್ಯವಾಣಿಯಾಗಿದೆ. ಹಠ ಹಿಡಿದು ಅತ್ತು ಬಳಲಿದ ಕಂದನಿಗೆ ತಾಯಿಯು ಅದನ್ನು ಕೊಡುತ್ತೇನಿ, ಇದನ್ನು ಕೊಡ್ತೀನಿ. ಅಲ್ಲಿಗೆ ಕರೆದುಕೊಂಡು ಹೋಗ್ತೀನಿ.ಇಲ್ಲಿಗೆ ಬರ್‍ತೀಯಾ ಎಂದು ರಮಿಸಿ, ಅಮೃತಮಯವಾದ ಹಾಲು ಕುಡಿಸಿ ಸಂತೈಸುವಂತೆ ಪರಮಾತ್ಮನ ಗೀತೆಯು ಸಂಸಾರವೆಂಬ ಬಂಧನಕ್ಕೆ ಸಿಲುಕಿದ ಮನುಜಕುಲಕ್ಕೆ ಜ್ಞಾನದ ಬೆಳಕನ್ನು ನೀಡಿ, ಸಂತೈಸುವ ತಾಯಿಯಂತೆ ಇದೆ ಈ ಭಗವದ್ಗೀತೆ.

ಯುದ್ಧ ಭೂಮಿಯಲ್ಲಿ ಶ್ರೀಕೃಷ್ಣನಿಗೆ ಅರ್ಜುನ ಶರಣಾಗತನಾದನು. ಇದರಿಂದ ಗೀತೆಯ ಉಪದೇಶವಾಯಿತು. ಇದರಂತೆಯೇ ಅಜ್ಞಾನದ ಅಂಧಕಾರದಲ್ಲಿ ಮುಳುಗಿ ಹೋದ "ಜೀವಿಯು-ಭಗವಂತನಿಗೆ ಶರಣಾದರೆ," ಅಂದರೆ ಭಗವದ್ಗೀತೆಯೆಂಬ ಮೋಕ್ಷಸಾಧನೆಯು ಜ್ಞಾನದ ಖಣಿಯನ್ನು ತಿಳಿದು ಪಠಿಸಿದರೆ ಭಗವಂತ ಅವನ ಅಜ್ಞಾನವೆಂಬ ಕತ್ತಲೆಯನ್ನು

ಹೋಗಲಾಡಿಸುವನು ಜೀವಾತ್ಮನ ಕೈಹಿಡಿದು ಮುಕ್ತಿ ಪಥ ತೋರುವನು.

ಈ ಭಗವದ್ಗೀತೆಯಿಂದ ನಾವು ತಿಳಿದುಕೊಳ್ಳಬಹುದಾದ ವಿಷಯಗಳಾದರೂ ಏನು? ಎಂದು ನಮಗೆ ಸಂದೇಹ ಉಂಟಾಗುತ್ತದೆ.

ಗೀತೆಯಿಂದ ನಾವು ದೇವರು ಎಂದರೇನು? ಪರಮಾತ್ಮನೆಂಬುವನು ಇದ್ದಾನೆಯೇ? ಜೀವಾತ್ಮರು ಯಾರು? ಪ್ರಕೃತಿ ಎಂದರೇನು? ವಿಶ್ವಸೃಷ್ಟಿ ಎಂದರೇನು? ಅದನ್ನು ಕಾಲವು ಹೇಗೆ ನಿಯಂತ್ರಿಸುತ್ತದೆ? ಜೀವಿಗಳ ಕರ್ಮಗಳು ಯಾವುವು? ಕರ್ಮವನ್ನು ನಿರ್ವಹಿಸುವ ಬಗೆ ಹೇಗೆ? ಮುಂತಾದ ಅನೇಕ ವಿಷಯಗಳನ್ನು ಭಗವದ್ಗೀತೆಯು ತಿಳಿಸುತ್ತದೆ.

ಗೀತೆಯ ಪಠಣದಿಂದ ಜೀವ ಈಶ್ವರ ಜೊತೆಗಿನ ಅವಿನಾ ಸಂಬಂಧವು ಹೇಗೆ ಬೆಳೆದು ಬರುತ್ತದೆ ಎಂಬುದು ಗೊತ್ತಾಗುತ್ತದೆ.ಗೀತೆಯು ಶ್ರವಣ ಮಾತ್ರದಿಂದಾಗಲಿ, ಪಠನ ಮಾತ್ರದಿಂದಾಗಲಿ ಜೀವನದ ಸಾರ್ಥಕತೆಯನ್ನು ಪಡೆಯಲು ಸುಲಭ ಸಾಧನವಾಗಿದೆ.

ಗೀತೆಯು ಭಗವಂತನ ಸ್ಮರಣೆಗೆ ದಾರಿ ಮಾಡಿಕೊಡುತ್ತದೆ.

ಇದರಿಂದ ಜೀವನು ತನ್ನ ಅಂತ್ಯ ಕಾಲದಲ್ಲಿ ಭೌತಿಕ ಶರೀರವನ್ನು ತ್ಯಜಿಸಿದಾಗ ಮುಕ್ತಿಗೆ ಸಾಧನವಾಗುತ್ತದೆ. ಇತರ ಧರ್ಮಗ್ರಂಥಗಳಲ್ಲಿ ಇರುವ ವಿಷಯಗಳೆಲ್ಲವೂ ಸಾಧಕನಾದವನಿಗೆ ಈ ಗೀತೆಯಲ್ಲಿಯೇ ದೊರೆಯುತ್ತದೆ. ಇದು ಗೀತೆಯ ವಿಶಿಷ್ಟವಾದ ಸಾಧನೆಯಾಗಿದೆ. ಇದು ಎಲ್ಲಾ ಕಾಲಕ್ಕೂ ಎಲ್ಲರಿಗೂ ಮಾರ್ಗಸೂಚಿಯಂತಿದೆ. 'ಭಗವದ್ಗೀತೆ' ಯು ಪರಿಪೂರ್ಣವಾದ ಧರ್ಮಶಾಸ್ತ್ರ.

'ಭಗವದ್ಗೀತೆ' ಹದಿನೆಂಟು ಅಧ್ಯಾಯಗಳನ್ನು 700 ಶ್ಲೋಕಗಳನ್ನು ಒಳಗೊಂಡ ಅಪೂರ್ವವಾದ ಕೃತಿ. ಇದರಲ್ಲಿ ಮುಖ್ಯವಾಗಿ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಕರ್ಮಯೋಗ, ಜ್ಞಾನಯೋಗ, ಭಕ್ತಿ ಯೋಗಗಳ ಬಗ್ಗೆ ವಿಸ್ತಾರವಾಗಿ ಉಪದೇಶಿಸಿದ್ದಾನೆ. ಈ ಭಗವದ್ಗೀತೆಯು ಶ್ರೀ ವೇದವ್ಯಾಸರಿಂದ ರಚಿತವಾದ ಶ್ರೀಮನ್ಮಮಹಾಭಾರತದ ಭೀಷ್ಮಪರ್ವದಲ್ಲಿ ಬರುತ್ತದೆ. ಭಗವದ್ಗೀತೆಯಲ್ಲಿ ಬರುವ ಹದಿನೆಂಟು ಅಧ್ಯಾಯಗಳನ್ನು ಮೂರು ಷಟ್ಕಗಳನ್ನಾಗಿ ವಿಭಾಗಿಸಿದ್ದಾರೆ. ಮೊದಲನೆಯ ಷಟ್ಕದಲ್ಲಿ ಜ್ಞಾನಸಾಧನವಾದ ಕರ್ಮಯೋಗವನ್ನು, ಎರಡನೆಯ ಷಟ್ಕದಲ್ಲಿ ಮೋಕ್ಷಕ್ಕೆ ಸಾಧನವಾದ ಭಗವತ್ ಜ್ಞಾನ ಸ್ವರೂಪವನ್ನು ಮೂರನೆಯ ಷಟ್ಕದಲ್ಲಿ ಕರ್ಮಯೋಗ ಮೋಕ್ಷ ಸಾಧನವಾದ ಜ್ಞಾನ ಇವುಗಳ ವಿಸ್ತಾರವಾದ ನಿರೂಪಣೆ ಇದೆ.

ಹದಿನೆಂಟು ಅಧ್ಯಾಯಗಳ ಗೀತೆಯನ್ನು ಅರ್ಥೈಸುವುದು ಎಂದರೆ ನನ್ನ ಪಾಲಿಗೆ ಇದು ಆಕಾಶಕ್ಕೆ ಏಣಿ ಹಾಕುವ ಪ್ರಯತ್ನವೇ ಸರಿ.ಸವಿಸ್ತಾರವಾಗಿ ಅನೇಕ ವಿದ್ವಾಂಸರು ಗೀತಾರ್ಥವನ್ನು ಬರೆದಿದ್ದಾರೆ. ಆ ಗ್ರಂಥಗಳನ್ನೇ ಆಧಾರವಾಗಿ ತೆಗೆದುಕೊಂಡು ಅಜ್ಞಳಾದ ನಾನು ಅದರಲ್ಲಿಯೇ ಕೆಲವು ಶ್ಲೋಕಗಳನ್ನು ಆಯ್ದು ಭಗವಂತನಿಗೆ ಭಕ್ತಿ ಪುಷ್ಪವನ್ನು ಸಮರ್ಪಿಸಲು ಪ್ರಯತ್ನಿಸುತ್ತೇನೆ.

ಭಗವದ್ಗೀತೆಯು ಐದು ಮೂಲ ಸತ್ಯಗಳನ್ನು ಅರಿವನ್ನು ನಮಗೆ ನೀಡುತ್ತದೆ. ಇದು ಮೊದಲನೆಯದಾಗಿ ಭಗವದ್ ವಿಜ್ಞಾನವನ್ನು (ವಿಶೇಷ ಜ್ಞಾನ) ವಿವರಿಸುತ್ತದೆ. ನಂತರ ಜೀವಿಗಳ ಸ್ವರೂಪವನ್ನು ವಿವರಿಸುತ್ತದೆ.ಸರ್ವನಿಯಮಕನಾದ ಈಶ್ವರ ನಿದ್ದುನೆ ನಿಯಮಕ್ಕೊಳಗಾಗುವ ಜೀವಿಗಳಿದ್ದಾರೆ. ಪರಮಾತ್ಮ ಯಾವುದೇ ನಿಯಮಕ್ಕೆ ಒಳಪಟ್ಟಿಲ್ಲ. ಅವನು ಸರ್ವತಂತ್ರ ಸ್ವತಂತ್ರನು.ಬದ್ದ ಜೀವಿಯಾದ ಮಾನವ ಎಲ್ಲ ರೀತಿಗಳಲ್ಲೂ ಭಗವಂತನ ನಿಯಂತ್ರಣಕ್ಕೆ ಒಳಪಟ್ಟಿದ್ದಾನೆ. ಹೀಗೆ ಭಗವದ್ಗೀತೆಯ ವಸ್ತು - ಪರಮ ನಿಯಾಮಕನಾದ ಈಶ್ವರ, ಅವನ ನಿಯಮಕ್ಕೆ ಒಳಪಟ್ಟು ಜೀವಿಗಳು, ಪ್ರಕೃತಿ (ಐಹಿಕ ನಿಸರ್ಗ) ಮತ್ತು ಕಾಲ (ಇಡೀ ವಿಶ್ವದ ಅಸ್ತಿತ್ವದ ಅಥವಾ ನಿಸರ್ಗದ ಕಾಲಾವಧಿ) ಮತ್ತು ಕರ್ಮ ಇವುಗಳನ್ನು ಚರ್ಚಿಸಲಾಗಿದೆ.

ನ ಜಾಯತೇ ಮ್ರಿಯತೇ ವಾ ಕದಾಚಿತ್
ನಾಯಂ ಭೂತ್ವಾ ಭವಿತಾ ವಾ ನ ಭೂಯಃ
ಅಜೋನಿತ್ಯಃ ಶಾಶ್ವತೋಽಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ

(ಅಧ್ಯಾಯ 2 , ಶ್ಲೋಕ - 20)

ಆತ್ಮಕ್ಕೆ ಯಾವಾಗಲೂ ಹುಟ್ಟು ಎನ್ನುವುದಿಲ್ಲ. ಸಾವು ಎನ್ನುವುದಿಲ್ಲ.ಅದು ಹಿಂದೆ ಹುಟ್ಟಿಲ್ಲ ಈಗ ಹುಟ್ಟಿ ಬರುವುದಿಲ್ಲ ಮುಂದೆ ಹುಟ್ಟುವುದೂ ಇಲ್ಲ. ಅದು ಜನ್ಮ ರಹಿತವಾದದ್ದು, ನಿತ್ಯ ವಾದದ್ದು ಶಾಶ್ವತವಾದದ್ದು. ಪುರಾತನವಾದದ್ದು ದೇಹವನ್ನು ಕೊಂದಾಗಲೂ ಅದು ಸಾಯುವುದಿಲ್ಲ ಎಂದು ಕೃಷ್ಣ ಆತ್ಮದ ಸ್ವರೂಪವನ್ನು ಅರ್ಜುನನಿಗೆ ವಿವರಿಸುತ್ತಾನೆ.

ಶ್ರೀಕೃಷ್ಣಪರಮಾತ್ಮ ಒಂದು ಒಳ್ಳೆಯ ಉದಾಹರಣೆ ಕೊಡುತ್ತಾನೆ.

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಪರಾಣಿ
ತಥಾ ಶರೀರಾಣಿ ವಿಹಾಯ ಜೀರ್ಣಾನ್ಯ
ನ್ಯಾನಿ ಸಂಯಾತಿ ನವಾನಿ ದೇಹೀ॥

(ಅ. 2.ಶ್ಲೋಕ- 22 )

ಒಬ್ಬ ಮನುಷ್ಯನು ಹೇಗೆ ಹಳೆಯ ಬಟ್ಟೆಗಳನ್ನು ತ್ಯಜಿಸಿ ಹೊಸ ಬಟ್ಟೆಗಳನ್ನು ತೊಟ್ಟುಕೊಳ್ಳುತ್ತಾನೋ ಹಾಗೆಯೇ ಆತ್ಮವು ಜೀರ್ಣವಾದ ದೇಹವನ್ನು ಬಿಟ್ಟು ಹೊಸ ದೇಹವನ್ನು ಸ್ವೀಕರಿಸುತ್ತದೆ ಎಂದು ಹೇಳುತ್ತಾನೆ.

ಹೀಗೆ ಆತ್ಮನ ನಿತ್ಯತೆಯ ಬಗ್ಗೆ ತಿಳಿಸಿ, ದೇಹ ಅನಿತ್ಯವೆಂದು ಹೇಳುತ್ತಾ, ದೇಹ ಸಂಬಂಧದಿಂದ ಉಂಟಾಗುವ ಸುಖ ದುಃಖ ಆತ್ಮನ ಸಹಜ ಧರ್ಮಗಳಲ್ಲಿ, ಅಭಿಮಾನ ತ್ಯಾಗದ ಮೂಲಕ ಅವುಗಳನ್ನು ಮೆಟ್ಟಿ ನಿಲ್ಲಬೇಕು ಸಾಧಕನಾದವನು. ಸುಖ ದುಃಖಗಳ ದ್ವಂದ್ವಗಳನ್ನು ಮೀರಿನಿಲ್ಲಬೇಕು. ಆಗಲೇ ಮೋಕ್ಷದ ದಾರಿ ಸಹಜವಾಗಿಯೇ ಅವನಿಗೆ ದೊರಕುತ್ತದೆ.

ಆದರೆ ಅರ್ಜುನನಿಗೆ ಮತ್ತೊಂದು ಸಂಶಯ ಕಾಡುತ್ತಿರುತ್ತದೆ.ಯುದ್ಧವೆಂದರೆ ಹಿಂಸೆಯತಾಂಡವ. ಅನೇಕ ಪಾಪಗಳ ಉಗಮಸ್ಥಾನ ಇದರ ಪರಿಣಾಮವಾಗಿ ನರಕದ ದುಃಖ ಸುನಿಶ್ಚಿತ. ಆದ್ದರಿಂದ ಈ ಯುದ್ಧದ ತಂಟೆಯೇ ಬೇಡ ಎನ್ನುತ್ತಾನೆ. ಈ ಸಂದರ್ಭದಲ್ಲಿ ಪರಮಾತ್ಮ ಅದ್ಭುತವಾದ ಸಂದೇಶವನ್ನು ನೀಡುತ್ತಾನೆ.

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ।
ಉಭಯೋರಪಿ ದೃಷ್ಟೋಂತ ಸ್ತ್ವನಯೋಸ್ತತ್ತ್ವದರ್ಶಿಭಿ ॥

( ಅ. 2, ಶ್ಲೋಕ 16 )

ದುಷ್ಕೃತ್ಯಗಳಿಂದ ಎಂದೂ ಒಳ್ಳೆಯದಾಗದು. ಒಳ್ಳೆಯ ಕಾರ್ಯಗಳಿಂದ ಎಂದೂ ಕೇಡುಂಟಾಗದು - ಎನ್ನುತ್ತಾನೆ ಶ್ರೀ ಕೃಷ್ಣ. ಈ ಮಾತು ಬಹಳ ಅರ್ಥಗರ್ಭಿತವಾಗಿದೆ. ಅರ್ಜು ನನು ತಿಳಿದುಕೊಂಡಂತೆ ಈ ಯುದ್ಧ ಬರಿಯ ಹಿಂಸಾ ಕಾಂಡವಲ್ಲ. ದುಷ್ಟನಿಗ್ರಹರೂಪವಾದ ದೇವಪೂಜೆ ಇದು ಅಧರ್ಮದ ವಿರುದ್ಧ ನಡೆದ ಧರ್ಮದ ಹೋರಾಟವೇ ಹೊರತು ಕೌರವರ ವಿರುದ್ಧವಾಗಿ ಪಾಂಡವರು ನಡೆಸಿದ ದಾಯಾದಿ ಕಲಹವಲ್ಲ. ಏಕೆಂದರೆ ದುರ್ಯೋಧನ ಸ್ವಭಾವತ ಲೋಕಕಂಟಕ. ಹುಟ್ಟಿನಿಂದಲೂ ಕುಟಿಲತೆ ಮತ್ತು ಸ್ವಾರ್ಥಗಳೇ ಅವನ ರಾಜ ನೀತಿಗಳಾಗಿದ್ದವು. ಕಣಿಕ ಎಂಬ ವಕ್ರ ಬುದ್ಧಿಯ ವ್ಯಕ್ತಿ ದುರ್ಯೋಧನನಿಗೆ ಬಾಲ್ಯದಲ್ಲಿಯೇ ಗುರುವಾಗಿ ದೊರಕಿದ್ದನಂತೆ ಸ್ವಾರ್ಥ ಸಾಧನೆಗಾಗಿ ಮಾತ್ರ ಧರ್ಮದ ನಾಟಕವನ್ನು ಆಡಬೇಕೇ ಹೊರತು ಅವುಗಳ ಮೇಲೆ ಶ್ರದ್ಧೆಯನ್ನಿಡಬಾರದು ಎಂಬುದೇ ಅವನ ಗುರುವಿನ ಉಪದೇಶವಾಗಿತ್ತು.

ಇಂಥಹ ಪರಿಸ್ಥಿತಿಯಿಂದ ಲೋಕವನ್ನು ಸಂರಕ್ಷಿಸುವ ಗುರುತರವಾದ ಜವಾಬ್ದಾರಿ ಶ್ರೀ ಕೃಷ್ಣಪರಮಾತ್ಮನಿಗಿತ್ತು. ಆದ್ದರಿಂದ ಭಗವಂತ ಈ ಯುದ್ಧವನ್ನು ಧರ್ಮಯುದ್ಧವೆಂದನು. ಲೋಕಕಂಟಕ ಶಕ್ತಿಗಳನ್ನೆಲ್ಲಾ ಸವರಿ ಹಾಕುವ ಈ ಸಂಹಾರ ಕಾರ್ಯ ಪವಿತ್ರವಾದ ಪೂಜೆಯಾಗಿದೆ ಎಂದನು. ಇಂತಹ ಪವಿತ್ರವಾದ ಲೋಕ ಕಲ್ಯಾಣಕಾರಿಯಾದ ಕೆಲಸದಿಂದ ಉತ್ತಮವಾದ ಶ್ರೇಯಸ್ಸು ದೊರಕುವುದೇ ವಿನಹ ನರಕದ ದುಃಖವಲ್ಲ ಎಂದು ಅರ್ಜುನನಿಗೆ ತಿಳಿಹೇಳಿದ. ಸ್ವಾರ್ಥರಹಿತವಾದ ಸಮಾಜ ಕಲ್ಯಾಣಕಾರಿಯಾದ ಎಲ್ಲಾ ಕೃತ್ಯಗಳೂ ಭಗವತ್‌ಪೂಜೆಯೆನ್ನುವ ಅಮೂಲ್ಯ ಸಂದೇಶ ಇಲ್ಲಿ ದೊರಕಿದೆ.

ಯದಾಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್॥
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ

(ಅ.4, ಶ್ಲೋಕ 7-8)

ಎಲೈ ಭರತವಂಶಜನಾದ ಅರ್ಜುನನೇ ಯಾವಾಗ ಎಲ್ಲೆಲ್ಲಿ ಧರ್ಮಕ್ಕೆ ಅವನತಿ ಉಂಟಾಗುತ್ತದೋ ಅಧರ್ಮವು ಹೆಚ್ಚುತ್ತದೋ ಆಗ ನಾನೇ ಅವತಾರ ಮಾಡುತ್ತೇನೆ.

ಸಜ್ಜನರನ್ನು ರಕ್ಷಿಸುವುದಕ್ಕಾಗಿ ದುಷ್ಟರನ್ನು ನಾಶ ಮಾಡುವುದಕ್ಕಾಗಿ ಮತ್ತು ಧರ್ಮದ ತತ್ವಗಳನ್ನು ಮತ್ತೆ ಸ್ಥಾಪಿಸುವುದಕ್ಕಾಗಿ ನಾನು ಪ್ರತಿಯುಗದಲ್ಲಿಯೂ ಅವತರಿಸುತ್ತೇನೆ ಎಂದು ಕೃಷ್ಣ ಇಡೀ ಜಗತ್ತಿಗೇ ಅಭಯಪ್ರಧಾನ ಮಾಡಿದ.

ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ।
ಆಗಮಾಪಾಯಿನೋಽನಿತ್ಯಾಃ ತಾಂಸ್ತಿತಿಕ್ಷಸ್ವ ಭಾರತ ॥

( ಅ.2, ಶ್ಲೋಕ 14)

ಇದೂ ಸಹ ಅರ್ಜುನನಿಗೆ ಮಾತ್ರ ಹೇಳುವುದಲ್ಲದೆ ಇಡೀ ಮನುಕುಲಕ್ಕೇ ಹೇಳಿದ್ದಾನೆ. ಹೇ ಕುಂತೀ ಕುಮಾರನೇ ಸುಖ ದುಃಖ ಬಿಸಿಲು ನೆರಳಿನಂತೆ. ಸ್ವಲ್ಪ ಕಾಲ ಕಾಣಿಸಿಕೊಂಡು ಮಾಯವಾಗುತ್ತವೆ. ಋತುಗಳು ಹೇಗೆ ಬದಲಾವಣೆಯಾಗುತ್ತದೋ ಹಾಗೆಯೇ ಸುಖದುಃಖಗಳು ಎಲ್ಲವನ್ನೂ ಸಹಿಸುವ

ಗುಣವು ನಿನ್ನಲ್ಲಿರಬೇಕು ಎಂದು ಶ್ರೀಕೃಷ್ಣ ಅರ್ಜುನನಿಗೆ ಹೇಳು ತ್ತಾನೆ.

ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನ ।
ಮಾ ಕರ್ಮಫಲಹೇತು ರ್ಭೂಃ ಮಾತೇ ಸಂಗೋಸ್ತ್ವ ಕರ್ಮಣಿ ॥
(ಅ. 2, ಶ್ಲೋಕ. 47)

ಭಗವಂತನು ಪಾರ್ಥನಿಗೆ ಹೇಳುತ್ತಾನೆ. ನಿನಗೆ ನಿಯೋಜಿಸಿದ ಕರ್ತವ್ಯಗಳನ್ನು ಮಾಡುವುದಷ್ಟೇ ನಿನ್ನ ಪಾಲಿಗೆ ಅಧಿಕಾರವಿರುತ್ತದೆ. ಆದರೆ ಫಲದ ಅಪೇಕ್ಷೆಯನ್ನು ಮಾಡ ಬಾರದು. ನೀನು ಮಾಡುವ ಕಾರ್ಯಕ್ಕೆ ನೀನೇ ಕಾರಣ ನೆಂದು ಭಾವಿಸಬೇಡ. ಕೇವಲ ಕರ್ತವ್ಯ ದೃಷ್ಟಿಯಿಂದ ನೀನು ಕಾರ್ಯನಿರ್ವಹಿಸಬೇಕು. ಫಲವೂ ಭಗವಂತನಿಗೆ ಬಿಟ್ಟದ್ದು ಎಂದು ಮುಖ್ಯವಾಗಿ ತಿಳಿಯಬೇಕು.

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತ್ತಿ
ತದಹಂ ಭಕ್ತ್ಯುಪಹೃತಂಅಶ್ನಾಮಿ ಪ್ರಯತಾತ್ಮನ ಃ
(ಅ. 9, ಶ್ಲೋಕ 26)

ಯಾರಾದರೂ ನನಗೆ ಪ್ರೀತಿ ಮತ್ತು ಭಕ್ತಿಗಳಿಂದ ಒಂದು ಎಲೆ, ಒಂದು ಹೂವು, ಒಂದು ಹಣ್ಣು ಅಥವಾ ಒಂ ದಿಷ್ಟು ನೀರನ್ನು ಅರ್ಪಿಸಿದರೂ ಸಾಕು ನಾನು ಅದನ್ನು ಸ್ವೀಕ ರಿಸುತ್ತೇನೆ. ಭಕ್ತನಲ್ಲದವನಿಂದ ಅವನು ಏನನ್ನೂ ಬಯ ಸುವುದಿಲ್ಲ. ಆತನು ಸ್ವಯಂಪೂರ್ಣನು. ಆತನಿಗೆ ಯಾರಿಂ ದಲೂ ಏನೂ ಅಗತ್ಯವಿಲ್ಲ. ಆದರೂ ಅವನು ಪ್ರೀತಿ ವಿಶ್ವಾಸ ಗಳ ವಿನಿಮಯ ಎಂಬ ಉದ್ದೇಶದಿಂದಲೇ ತನ್ನ ಭಕ್ತನ ಕಾಣಿಕೆಯನ್ನು ಸ್ವೀಕರಿಸುತ್ತಾನೆ.

ಯತ್ಕರೋಷಿ ಯದಶ್ನಾಸಿ ಯಜ್ಜು ಹೋಷಿ ದದಾಸಿಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್॥
(ಅ. 9. ಶ್ಲೋಕ 27 )

ಎಲೈ ಕೌಂತೇಯ ! ನೀನು ಏನನ್ನೇಮಾಡು, ಏನನ್ನೇ ಭುಂಜಿಸು ಏನನ್ನೇ ಅರ್ಪಿಸು ಮತ್ತು ಯಾವುದೇ ತಪಸ್ಸನ್ನು ಮಾಡು ಅದನ್ನು ಕಾಣಿಕೆಯಾಗಿ ನನಗೆ ಅರ್ಪಿಸು ಎಂದಿದ್ದಾನೆ. ಹೀಗಾಗಿ ಯಾವುದೇ ಸನ್ನಿವೇಶದಲ್ಲೂ ಶ್ರೀಕೃಷ್ಣ ಪರಮಾತ್ಮನನ್ನು ಮರೆಯದಂತೆ ಬದುಕು ರೂಪಿಸಿಕೊಳ್ಳು ವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ
ಅಹಂ ತ್ವಾಂ ಸರ್ವಪಾಪೇ ಭ್ಯೋ ಮೋಕ್ಷ್ಯಯಿಷ್ಯಾಮಿ ಮಾಶುಚಃ

ಶ್ರೀಕೃಷ್ಣ ಪರಮಾತ್ಮ ಅರ್ಜುನನ್ನು ಕುರಿತು ಹೀಗೆ ಹೇಳು ತ್ತಾನೆ.

"ಎಲ್ಲ ಧರ್ಮಗಳನ್ನು ಪರಿತ್ಯಜಿಸಿ ನನಗೆ ಶರಣಾಗತ ನಾಗು ನಾನು ನಿನ್ನನ್ನು ಎಲ್ಲ ಪಾಪಗಳಿಂದಲೂ ಮುಕ್ತನನ್ನಾಗಿ ಮಾಡುತ್ತೇನೆ ನೀನು ಹೆದರಿಕೊಳ್ಳಬೇಡ"

ಗೀತೆಯಲ್ಲಿ ಪರಮಾತ್ಮನು ಇದುವರೆಗೂ ವಿವಿಧ ಬಗೆಗಳ ಜ್ಞಾನವನ್ನು ಧಾರ್ಮಿಕ ಪ್ರಕ್ರಿಯೆಗಳನ್ನು ವರ್ಣಿಸಿದ್ದಾನೆ. ಪರ ಬ್ರಹ್ಮನ ಜ್ಞಾನ, ಪರಮಾತ್ಮನ ಜ್ಞಾನ, ವಿವಿಧ ರೀತಿಯ ವರ್ಣಾ ಶ್ರಮಗಳ ಜ್ಞಾನ, ಸಂನ್ಯಾಸಾಶ್ರಮದ ಜ್ಞಾನ, ನಿರ್ಲಿಪ್ತತೆ. ಇಂದ್ರಿಯ ನಿಗ್ರಹ ಮನಸ್ಸುಗಳ ಹತೋಟಿ, ಧ್ಯಾನ ಮೊದ ಲಾದವುಗಳು. ಜ್ಞಾನ, ಇವೆಲ್ಲಗಳನ್ನು ಉಪದೇಶಿಸಿ ಕೊನೆಗೆ " ಈ ಎಲ್ಲ ಧರ್ಮಗಳನ್ನು ಧಾರ್ಮಿಕ ಪ್ರಕ್ರಿಯೆಗಳನ್ನು ಅನುಸರಿಸ ದಿದ್ದರೂ ಪರವಾಗಿಲ್ಲ ನನ್ನಲ್ಲಿ ನೀನು ಶರಣಾಗತನಾಗು. ನಾನು ನಿನ್ನನ್ನು ಸಕಲ ಪಾಪಗಳಿಂದ ರಕ್ಷಿಸುತ್ತೇನೆ. ಅದಕ್ಕಾಗಿ ನೀನು ಶೋಕಿಸಬೇಡ ಎಂದು ಅಭಯ ಪ್ರಧಾನ ಮಾಡುತ್ತಾನೆ. ಭಗ ವಂತನಲ್ಲಿ ಅನನ್ಯ ಶರಣಾಗತಿಯೇ ಅಂತಿಮ ಉಪಾಯ ಎಂದು ಶ್ರೀ ಕೃಷ್ಣ ಪರಮಾತ್ಮ ಹೇಳಿದ್ದಾನೆ.

ಬಹುಮುಖ್ಯವಾಗಿ ಪರಮಾತ್ಮ ತನ್ನನ್ನು ಎಲ್ಲ ಸನ್ನಿವೇಶ ಗಳಲ್ಲಿಯೂ, ಎಲ್ಲ ಕಷ್ಟಗಳಿಂದಲೂ ಪಾರು ಮಾಡುತ್ತಾನೆ ಎಂಬ ವಿಶ್ವಾಸ ಮನುಷ್ಯನಿಗೆ ಇರಬೇಕು. ತಾನು ಜೀವನೋಪಾಯಕ್ಕೆ ಏನು ಮಾಡಬೇಕು ಎಂದು ಯೋಚಿಸುವ ಅಗತ್ಯವಿಲ್ಲ. ಅದನ್ನು ಭಗವಂತನೇ ನೋಡಿಕೊಳ್ಳುತ್ತಾನೆ.(ಹಾಗೆಂದ ಮಾತ್ರಕ್ಕೆ ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುವುದಲ್ಲ.) ಕೆಲಸ ಮಾಡುವಾಗ ಅವನಲ್ಲಿ ಪರಿಪೂರ್ಣ ವಿಶ್ವಾಸವನ್ನು ಇಟ್ಟರೆ ಅವನೇ ನಮ್ಮ ಬಾಳನ್ನು ರೂಪಿಸಲು ಸಿದ್ಧನಾಗಿರುತ್ತಾನೆ. ಈ ದೃಢ ವಿಶ್ವಾಸ ವನ್ನು ಮಾತ್ರ ನಾವೆಲ್ಲಾ ಇಟ್ಟುಕೊಂಡು ಈ ಜೀವನ ವನ್ನು ಸಾಗಿಸೋಣ.

ಕೃಷ್ಣಂ ವಂದೇ ಜಗದ್ಗುರುಂ
ಸರ್ವಂ ಶ್ರೀ ಕೃಷ್ಣಾರ್ಪಣಮಸ್ತು





# ಕಾಗಿನೆಲೆಯ ಕಾಂತಿ ಕನಕದಾಸರು

– ಡಾ।। ರಾಮಚಂದ್ರ ದಾಸ್ ಸಿ.ಜೆ.
9483384584



ದಾಸಸಾಹಿತ್ಯಕ್ಕೆ ಸುಮಾರು 500 ವರ್ಷಗಳ ಇತಿಹಾಸವಿದ್ದು, ಇಂದಿಗೂ ಜನಮಾನಸದಲ್ಲಿ ಜಾತಿ, ಮತ,ಭೇದವಿಲ್ಲದೆ ನೆಲೆಯೂರಿ ನಿಂತಿರುವುದು ಅಭೂತ ಪೂರ್ವ ಸಂಗತಿ. ಆದರೆ ಇದು ಒಂದು ವರ್ಗಕ್ಕೆ ಮೀಸಲು ಎಂಬ ಅಪಸ್ವರ ನಿಜಕ್ಕೂ ದುರದೃಷ್ಟಕರ, ಜೀವನ ಎನ್ನುವುದು ಪ್ರತಿಯೊಬ್ಬ ಜೀವಿಯ ಆ ಜನ್ಮಸಿದ್ಧ ಹಕ್ಕು, ಇದನ್ನು ರೂಪಿಸಿಕೊಳ್ಳುವುದು ಮಾತ್ರ ವೈಯಕ್ತಿಕವೆಂಬ ತಪ್ಪು ಕಲ್ಪನೆಯೂ ಇದೆ. ಇದನ್ನು ನೀಗಿಸಲೆಂದೇ ಕನಕ, ಪುರಂದರರಂತಹ ನೂರಾರು ಹರಿದಾಸರು, ಸಾವಿರಾರು ಕೀರ್ತನೆಗಳ ಮೂಲಕ ಜನ ಸಾಮಾನ್ಯರಲ್ಲಿ ದೇವರು, ಗುರು, ಭಕ್ತಿ, ಧರ್ಮ-ಮುಕ್ತಿ, ಮೌಲಿಕ-ಸಾಮಾನ್ಯ ಬದುಕು ಇತ್ಯಾದಿಗಳ ಬಗ್ಗೆ ತಿಳುವಳಿಕೆ ನೀಡಿ ಕ್ಲೇಶರಹಿತವಾದ ನೆಮ್ಮದಿಯ ಬದುಕನ್ನು ನಡೆಸುವ ಬಗ್ಗೆ ಜನರ ಆಡು ಭಾಷೆಯಲ್ಲಿಯೇ, ಸುಲಭ ಮತ್ತು ಸುಂದರವಾಗಿ ನಿರೂಪಿಸಿ, ಸಂಗೀತದ ಮೆರುಗನ್ನೂ ನೀಡಿ, ಶಾಸ್ತ್ರ ಪುರಾಣಗಳಲ್ಲಿನ ತತ್ವವನ್ನು ಸಾಮಾನ್ಯರಿಗೂ ತಲುಪಿಸುವಲ್ಲಿ ದಾಸಸಾಹಿತ್ಯದ ಪಾತ್ರ ಹಿರಿದು. ಇಲ್ಲಿ ಮುಖ್ಯವಾದ ಭಕ್ತಿ ಪಂಥದ, ಮಾರ್ಗದ ರೂವಾರಿಗಳು ಹರಿದಾಸರುಗಳು.

ಇಂತಹ ಮಹನೀಯರಲ್ಲಿ ಕನಕದಾಸರು, ಪುರಂದರದಾಸರಂತೆಯೇ ಶ್ರೀಮಂತಿಕೆಯ ಜೀವನವನ್ನು ತೊರೆದು, ಭಕ್ತಿಮಾರ್ಗದ ಮೂಲಕ, ಶ್ರೀ ಹರಿಯನ್ನು ಮೆಚ್ಚಿಸಿ , ಆತನೊಡನೆ ನಲಿದು, "ಸುಲಭನೋ ಹರಿ" ಎಂದು ಪ್ರತಿಪಾದಿಸಿ, ಕವಿಗಳೂ ಆಗಿ, ಸಂತರೆನಿಸಿಕೊಂಡು ವಿಶಿಷ್ಟ ಸ್ಥಾನ ಪಡೆದವರು.

ಆದರೆ ಇವರ ವೈಯುಕ್ತಿಕ ಬದುಕಿನ ಬಗ್ಗೆ ಮಾತ್ರ ನಿಖರವಾದ ಮಾಹಿತಿ, ಪೂರ್ಣ ಪ್ರಮಾಣದಲ್ಲಿ ದೊರೆಯದೇ ಇರುವುದು ಕನ್ನಡಿಗರ ದೌರ್ಭಾಗ್ಯ, ಇವರನ್ನು ಕುರಿತ ಕೆಲ ಐತಿಹ್ಯಗಳು, ಪರಂಪರೆಯ ಹೇಳಿಕೆಗಳು, ರಚನೆಗಳು, ಹಾಗೂ ಸಮಕಾಲೀನರಾದ ಹರಿದಾಸರ ಉಕ್ತಿಗಳನ್ನಾಧರಿಸಿ ಇವರ ಜೀವನದ ಬಗ್ಗೆ, ಊಹೆ ಮತ್ತು ಕಲ್ಪನೆಯ ಆಧಾರದಲ್ಲಿ ಸಮತೋಲಿತವಾಗಿ ಅರಿಯ ಬೇಕಾಗಿದ್ದು, ಖಚಿತವಾದ ಮತ್ತು ಸ್ಪಷ್ಟವಾದ ಮಾಹಿತಿ ದೊರೆಯುತ್ತಿಲ್ಲ.

ಕನಕದಾಸರ ಕಾಲಮಾನವು ಸುಮಾರು, ಕ್ರಿ.ಶ. 1495 - 1594 ಇರಬಹುದೆಂದೂ ಊಹಿಸಲಾಗಿದೆ. ಜಾತಿ, ಮತ, ಇತ್ಯಾದಿಗಳೆಲ್ಲವನ್ನೂ ಮೀರಿದ "ಭಕ್ತಿ ಪಂಥದ" ಅನುಯಾಯಿಗಳು ಇವರಾದ್ದರಿಂದ ಇವರ ಜಾತಿಯ ಬಗ್ಗೆ ಚಿಂತಿಸುವುದು ಸಣ್ಣತನವಾಗಬಹುದು. ಕರ್ನಾಟಕ ಮತ್ತು ಗಡಿನಾಡುಗಳಲ್ಲಿ ಇವರ ಹೆಸರು ಜನ ಜನಿತವಾಗಿದೆ.

ಇವರು ಬೀರಪ್ಪ ಬಚ್ಚಮ್ಮನವರ ಸುಪುತ್ರನಾಗಿ,ಬಾಡ ಎಂಬ ಊರಿನಲ್ಲಿ ಜನಿಸಿ,ತಿಮ್ಮಪ್ಪ ಎಂಬ ನಾಮದಿಂದ ಪ್ರವೃದ್ಧಮಾನಕ್ಕೆ ಬಂದವರು. ಚಿಕ್ಕವಯಸ್ಸಿನಲ್ಲಿಯೇ ತಂದೆಯ ವಿಯೋಗವಾಗಿ ತನ್ನ ತಂದೆ ಮಾಡುತ್ತಿದ್ದ ಡಣಾಯಕ = ದಂಡನಾಯಕ ವೃತ್ತಿಯನ್ನು ಮುಂದುವರಿಸಿ, ವಿಜಯನಗರದ ಅರಸರ ವಿಶ್ವಾಸ ಪಾತ್ರನಾದನು. ಭೂಶೋಧನೆ ಮಾಡುವಾಗ ಭೂಗತವಾಗಿದ್ದ ಅಪಾರವಾದ ಕನಕ ರಾಶಿಯು ಇವರಿಗೆ ದೊರೆತದ್ದರಿಂದ ಇವರ ಹೆಸರು "ಕನಕ ನಾಯಕ" ನೆಂದೇ ಪ್ರಸಿದ್ಧವಾಯಿತು.

ತಾವು ಯಮದೇವರ ಅಂಶ ಸಂಭೂತರೆಂದು ತಮ್ಮ ಒಂದು ಉಗಾಭೋಗದಲ್ಲಿ "...ನಾ ಯಮನು, ಮುಂದೆ ಮಾಂಡವ್ಯ ಶಾಪದಿಂದ ಎರಡು ಜನ್ಮ ಶೂದ್ರ ಯೋನಿಯಲ್ಲಿ ಪೊಕ್ಕೆನು..." ಎಂಬುದಾಗಿ, ಯಮದೇವರಾದ ತಾವು ಭಗವಂತನ ಕಾರ್ಯದ ಸೇವಾರ್ಥವಾಗಿ ಈ ಭೂಮಿಯಲ್ಲಿ ಅವತರಿಸಿದ್ದೇನೆ ಎಂದು ಅವರೇ ಹೇಳಿರುವುದರಿಂದ ಇದು ನಿರ್ವಿವಾದ. ಈ ಕಾರಣದಿಂದಾಗಿಯೇ ಕೇಶವ ರೂಪಿ ಶ್ರೀಹರಿಯು ಕನಕನಿಗೆ ಎಚ್ಚರಿಸಲು ಸ್ವಪ್ನದಲ್ಲಿ ಬಂದು ತನ್ನ ದಾಸನಾಗುವಂತೆ ಹೇಳಿದಾಗ, ದೊರೆತನ ಮಾಡುವುದು ಬಿಟ್ಟು, ತಿರಿದು ತಿನ್ನಲು ದಾಸನಾಗಬೇಕೆ? ಎಂದು ತಿರಸ್ಕರಿಸಿದನು.

ಭಗವಂತ ಮತ್ತು ಭಕ್ತರ ಸಂಬಂಧವು ಹಾಲು ಜೇನಿನಂತಿರುತ್ತದೆ. ಇವರ ಮಧ್ಯೆ ಪ್ರೀತಿಯ (ಆ ಪ್ರೀತಿಯೇ ಭಕ್ತಿ ) ಕಲಹಗಳು ಸರ್ವೇ ಸಾಮಾನ್ಯವಾಗಿರುತ್ತವೆ. ಕಾಲ ಕ್ರಮದಲ್ಲಿ ಕನಕ ನಾಯಕನು, ಯುದ್ಧ ಪ್ರಸಂಗದಲ್ಲಿ ಗಾಯಗೊಂಡು ಬಿದ್ದಿರುವಾಗ, ಕೇಶವನು ತನ್ನ ದಾಸನಾಗುವಂತೆ ಪುನಃ ಹೇಳಿದಾಗ ಕನಕನು, ತಾನು ಕೇಳಿದಾಗ ದರ್ಶನ ಕೊಡುವುದಾದರೆ ಮಾತ್ರ ನಿನ್ನ ದಾಸನಾಗುತ್ತೇನೆ, ಎಂಬ ನಿಬಂಧನೆಯೊಂದಿಗೆ, ಕೇಶವನ ದಾಸರಾಗಿ ಅಂದಿನಿಂದ "ಕನಕದಾಸ" ರೆಂದೇ ಪ್ರಸಿದ್ಧರಾದರು. ಅಂದಿನಿಂದ ಅವರ ಚರ್ಯೆ ಸಂಪೂರ್ಣ ಬದಲಾಯಿತು. ಆ ದಿನ ಸ್ವಪ್ನದಲ್ಲಿ ವ್ಯಾಸರಾಯರ ಶಿಷ್ಯತ್ವ ವಹಿಸುವಂತೆ ಕೇಶವನಿಂದ ಸೂಚಿತವಾಯಿತು.

"ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ " ಎಂಬ ಪುರಂದರದಾಸರ ವಾಕ್ಯದನುಸಾರ, ಮದನಪಲ್ಲಿ ಪ್ರಾಂತ್ಯದಲ್ಲಿ ವ್ಯಾಸಸಮುದ್ರ ನಿರ್ಮಾಣದ ಸ್ಥಳದಲ್ಲಿದ್ದ ವ್ಯಾಸರಾಯರ ಬಳಿ ಸಾರಿ ಅವರ ಶಿಷ್ಯತ್ವವಹಿಸುವ ಸಮಯದಲ್ಲೂ, ತಾವು ಯಮಾಂಶರೆಂಬುದನ್ನು ಜಗತ್ತಿಗೆ ತೋರಿಸಿದರು."ಆದಿ ಕೇಶವ ಅಂಕಿತದಿಂದ ಕೃತಿಗಳ ರಚನೆಯಾಗುತ್ತಿತ್ತು,ಕೇಶವಾದಿ ಚತುರ್ವಿಂಶತಿ ಮೂರ್ತಿಗಳ ವರ್ಣನೆಯ ಕೃತಿ" ಈಶ ನಿನ್ನ ಚರಣ ಭಜನೆ... ಪ್ರಸಿದ್ಧವಾಗಿದೆ. ಇವರು ಆತ್ಮ ನಿಷ್ಠ ಕೀರ್ತನೆಗಳನ್ನಲ್ಲದೆ, ವಸ್ತು ನಿಷ್ಟ ಕಾವ್ಯಗಳಾದ 1. ಮೋಹನ ತರಂಗಿಣಿ 2. ನಳಚರಿತ್ರೆ 3. ರಾಮಧಾನ್ಯ ಚರಿತೆ 4. ಹರಿ ಭಕ್ತಿ ಸಾರ 5. ನೃಸಿಂಹಸ್ತವ ಇತ್ಯಾದಿ ಕಾವ್ಯಗಳನ್ನು ರಚಿಸಿ ಕವಿಗಳ ಸಾಲಿಗೂ ಸೇರಿದ್ದಾರೆ.

ಕನಕದಾಸರ ಕೃತಿಗಳು, ಅವರ ಜೀವನದ ಘಟನೆಗಳಲ್ಲಿ ಪರಮಾತ್ಮನ ಸರ್ವತ್ರವ್ಯಾಪ್ತಿತ್ವ, ಕರ್ತೃತ್ವ, ಮತ್ತು ನಿಯಾಮಕತ್ವವನ್ನು ಪ್ರತಿಪಾದಿಸುವ ಆಣಿ ಮುತ್ತುಗಳಾಗಿವೆ. ವ್ಯಾಸರಾಯರು ಒಂದು ಏಕಾದಶಿಯ ದಿವಸ ಬಾಳೆ ಹಣ್ಣನ್ನು ಕೊಟ್ಟು "ಯಾರು ಇಲ್ಲದ ಸ್ಥಳದಲ್ಲಿ" ಇದನ್ನು ತಿನ್ನಬೇಕೆಂದು ಮಠದ ಪರಿವಾರದವರೆಲ್ಲರಿಗೂ ಹೇಳಿದರು. ಎಲ್ಲರೂ ಅವರವರ ಜ್ಞಾನದ ಮಟ್ಟಕ್ಕನುಸಾರ ತಿಂದರು. ಆದರೆ ಕನಕದಾಸರು ಮಾತ್ರ ಹಣ್ಣನ್ನು ಹಿಂತಿರುಗಿಸುತ್ತಾ, ಭಗವಂತನು ಸರ್ವತ್ರವ್ಯಾಪ್ತನಾಗಿರುವುದರಿಂದ, ಯಾರು ಇಲ್ಲದ ಜಾಗ ಸಿಗಲಿಲ್ಲವೆಂದು ಹೇಳಿದಾಗ, ಅವರ ಜ್ಞಾನದ ಮಟ್ಟವೇನೆಂಬು ದನ್ನು ಶ್ರೀಗಳು ಶ್ಲಾಘಿಸಿದರು. ವಿಜಯನಗರದ ವಿದ್ವದ್ಗೋಷ್ಠಿಯಲ್ಲಿ" ಮೋಕ್ಷಕ್ಕೆ ಹೋಗುವವರು ಯಾರು? ಎಂಬ ಪ್ರಶ್ನೆಗೆ ದಾಸರು "ನಾನು ಹೋದರೆ ಹೋದೇನು" , ಎಂದಾಗ ಅಲ್ಲಿದ್ದ ಎಲ್ಲರೂ ಕೃದ್ಧರಾದರು. ನಂತರ ದಾಸರೇ "ನಾನು ಎಂದರೆ ನಾನೆಂಬ ಅಹಂಕಾರ " ಹೋದರೆ ಹೋದೇನು ಎಂಬ ಮಾತಿನಲ್ಲಿ ಭಗವಂತನ ಕರ್ತೃವನ್ನು ಪ್ರತಿಪಾದಿಸಿದರು.

ವ್ಯಾಸರಾಯರಿಗೆ ಕನಕದಾಸರ ಮೇಲೆ ಅತೀವವಾದ ಅಭಿಮಾನ. ಒಂದಲ್ಲ ಒಂದು ರೀತಿ ದಾಸರ ಜ್ಞಾನದ ಮಟ್ಟವನ್ನು ಜನರಿಗೆ ತಿಳಿಸುವ ಪ್ರಯತ್ನ ಮಾಡುತ್ತಿದ್ದರು. ಇಂತಹುದರಲ್ಲಿ ದೇವರನ್ನು ನಮಗೆ ತೋರಿಸುವೆಯಾ ಕನಕಾ ಎಂದಾಗ, ತಮ್ಮ ಅಪ್ಪಣೆ ಎಂದು ದಾಸರು ಸಮ್ಮತಿಸಿದರು. "ಭಕುತ ಜನ ಮುಂದೆ, ನೀನವರ ಹಿಂದೆ"ಎನ್ನುವ ಪುರಂದರದಾಸರ ಮಾತು ಕನಕದಾಸರ ಜೀವನದಲ್ಲಿ ಸದಾ ಘಟಿಸುತ್ತಿತ್ತು, ಕನಕದಾಸರು ಕರೆದ ತಕ್ಷಣ ಭಗವಂತನು ಪ್ರತ್ಯಕ್ಷನಾಗಿ ನಿಂತು ಬಿಡುತ್ತಿದ್ದನು. ಏಕೆಂದರೆ ಶ್ರೀಹರಿಯು ಭಕ್ತಾನುಕಂಪಿಯಾದುದರಿಂದ ಸೇವಕ ನಂತೆ ಹಾಜರಾಗಿ ಬಿಡುತ್ತಿದ್ದನು."ಪಾಂಡವರ ಮನೆಯಲ್ಲಿ ಕುದುರೆಗಳ ತಾ ತೊಳೆದ" ಸಕ್ಕೂಬಾಯಿ ಪಂಢರಾಪುರಕ್ಕೆ ಪಾಂಡುರಂಗನ ದರ್ಶನಾಕಾಂಕ್ಷಿಯಾಗಿ ಮೈಮರೆತು ಹೊರಟಾಗ ಸ್ವತಃ ಪಾಂಡುರಂಗನು, ಆಕೆಯ ಭಕ್ತಿಗೆ ಮೆಚ್ಚಿ, ಆಕೆಯು ಪಂಢರಾಪುರದಿಂದ ಹಿಂತಿರುಗುವವರೆಗೆ,ತಾನೇ ಸಕ್ಕೂ ಬಾಯಿಯ ವೇಷದಿಂದ ಅವಳ ಮನೆಯಲ್ಲಿದ್ದು ತಾನು ನಿಶ್ಚಲವಾದ ಭಕ್ತಿಗೆ ಮಾತ್ರ ಒಲಿಯುವವನೆಂದು ಧೃಡ ಪಡಿಸಿದ. ಕನಕದಾಸರು ಮತ್ತು ಭಗವಂತನ ಒಡನಾಟದ ಮಟ್ಟ ನೆನೆಸಿಕೊಂಡರೆ ಮೈ ರೋಮಾಂಚನವಾಗುತ್ತದೆ. ದಾಸರು ಭಗವಂತನನ್ನು ಸ್ಮರಿಸಿದಾಕ್ಷಣ,ಎದುರಲ್ಲಿ ಬಂದು ನಿಂತು ಏನು ನನ್ನನ್ನು ಕರೆದೆ ಎಂದಾಗ ದೇವಾ, ಪೂಜಾ ಸಮಯದಲ್ಲಿ ನಿನ್ನ ದರ್ಶನವಾಗಬೇಕೆಂತೆ ಹೋಗುವೆಯಾ ಸ್ವಾಮಿ ಎಂದಾಗ ಶ್ರೀ ಹರಿಯು, ನೀನು ಹೇಳಿದಂತೆ ನಾನು ಕೇಳುವೆನೆಂದು ವಚನ ಕೊಟ್ಟಿರುವೆನಲ್ಲ, ಸರಿ ನಾನು ಯಾವ ರೂಪದಿಂದ ಹೋಗಲಿ ನೀನೇ ಹೇಳು ಕನಕಾ ಎಂದಾಗ ಭೈರವ (ನಾಯಿ) ರೂಪದಿಂದ ಹೋಗು ನೋಡೋಣ. ಎಂದಾಗ, ಅಲ್ಲಿ ನೆರೆದಿದ್ದವರೆಲ್ಲರೂ ಆ ನಾಯಿಯನ್ನು ಹೊಡೆದೋಡಿಸಿದರು. ಶ್ರೀಗಳು ಕೇಳಿದಾಗ ಭಗವಂತ ಮೈಲಿಗೆಯಿಂದ ಬಂದಿದ್ದ, ಎಲ್ಲರೂ ಹೊಡೆದೋಡಿಸಿದರು. ನಾಳೆಮಡಿಯಿಂದ ಬರುವಂತೆ ಹೇಳುವೆಯಾ ಎಂದಾಗ, ಸರಿ ಎಂದು, ಸರ್ಪದ ರೂಪದಿಂದ ಭಗವಂತನು ಪ್ರವೇಶಿಸಿದಾಗ, ಶ್ರೀಗಳು, ಪುರಂದರದಾಸರು, ಮತ್ತು ಕನಕದಾಸರನ್ನು ಹೊರತು ಪಡಿಸಿ, ಎಲ್ಲರೂ ಭಯದಿಂದ ಓಡಿ ಹೋದರು. ಈ ಘಟನೆಯಿಂದ ಶ್ರೀಹರಿಯು ಬಿಂಬರೂಪನಾಗಿ ಸರ್ವ ಜೀವರಲ್ಲಿಯೂ ಇರುವನೆಂಬುದನ್ನು ತೋರಿಸಿ " ಈತ ನೀಗ ವಾಸುದೇವನೋ.." ಎಂದು ಸ್ತುತಿಸಿದರು.ದಾಸರಾಯರುಗಳು

ರಚಿಸಿದ ನಿಂದಾಸ್ತುತಿಗಳಲ್ಲಿ ತತ್ವಗಳ ನವನೀತವೇ ಅಡಗಿರುತ್ತದೆ.

ತಿರುಪತಿಯು ದಾಸಸಾಹಿತ್ಯದ ಕೇಂದ್ರ ಬಿಂದುಗಳಲ್ಲಿ ಒಂದಾಗಿದೆ. ವೈಕುಂಠ ದಾಸರನ್ನು ಹೊರತು ಪಡಿಸಿ ಉಳಿದ ಎಲ್ಲ ದಾಸರಾಯರುಗಳು ತಿರುಪತಿಯ ಶ್ರೀನಿವಾಸನ ದರ್ಶನ ಗೈದು ಸ್ತುತಿಸಿದವರು. ಕನಕದಾಸರೂ ಕೂಡಾ ಬಹುಕಾಲ ತಿರುಪತಿಯಲ್ಲಿ ಕಾಲಕಳೆದಿರುಂತೆ, ಅವರ ಕೃತಿಗಳನ್ನು ಗಮನಿಸಿದಾಗ ತಿಳಿಯುತ್ತದೆ. ದಾಸರಿಗೆ ಒಮ್ಮೆ ಸ್ವಪ್ನದಲ್ಲಿ"ಕನಕಾ ನನ್ನ ಮದುವೆಗೆ ಬಾರೋ" ಎಂದು ಆಮಂತ್ರಣ ನೀಡಿದ್ದಲ್ಲದೆ, ದೇವಸ್ಥಾನದ ಮಹಂತನಿಗೂ ಸ್ವಪ್ನದಲ್ಲಿ , "ನನ್ನ ಭಕ್ತ ಕನಕ ಬರುತ್ತಾನೆ. ಗೌರವಾದರಗಳಿಂದ ಸತ್ಕರಿಸು'' ಎಂದು ಸೂಚನೆ ಕೊಟ್ಟನು. ಹಾಗೆ ಏಕತಾರೆಯನ್ನು ಮಿಾಟುತ್ತ ಬರುತ್ತಿರುವ ಇವರನ್ನು ಮಹಂತನು. ಕನಕದಾಸರು ಎಲ್ಲಿ ಬರುತ್ತಿದ್ದಾರೆ ಎಂದು ಕೇಳಿದಾಗ, "ಮುಂದೆ ಬರುವವರಿಗೆ ಹಿಂದೆ, ಹಿಂದೆ ಬರುವವರಿಗೆ ಮುಂದೆ" ಎಂಬ ಒಗಟಿನ ಉತ್ತರದಿಂದ,ಮೃತ್ಯುವು ಯಾವಾಗಲೂ ಜೀವರ ಬೆನ್ನ ಹಿಂದೆ ಇರುತ್ತದೆ, ಎಂಬುದರ ಸೂಚನೆಯನ್ನು ನೀಡಿ,ತಾವು ಯಮಾಂಶರೆಂಬುದನ್ನು ಮತ್ತೊಮ್ಮೆ ಧೃಡ ಪಡಿಸಿದರು. ದಾಸರು ದೇವಾಲಯದ ಬಳಿ ಬಂದಾಗ ಜನಸಂದಣಿಯಿಂದ ಜಾಗವೂ ಸಿಗದೆ,ತುತ್ತನ್ನವೂ ಸಿಗದೆ ಸರಿ ರಾತ್ರಿಯಲ್ಲಿ ಛಳಿಯಲ್ಲಿ ನಡುಗುತ್ತಾ "ಇದೇನಾ ಸ್ವಾಮಿ ನಿನ್ನ ಮದುವೆಯ ವೈಭವ? ಆಗಲಿ ನಿನ್ನಿಚ್ಛೆ ಎಂದು ''ಬಂದೆನಯ್ಯ ಗೋವಿಂದ ಶೆಟ್ಟಿ....''ಎಂಬ ನಿಂದಾಸ್ತುತಿಯನ್ನು ರಚಿಸಿ ದೇವರನ್ನು ಪರಿಹಾಸ್ಯ ಮಾಡಿದರು. ತಕ್ಷಣ ಶ್ರೀನಿವಾಸನು ಓರ್ವ ಪರಿಚಾರಕನ ವೇಷದಿಂದ ಬಂದು, ಹೊದೆಯಲು ಜರತಾರಿಯ ಧೋತ್ರ, ಬಿಸಿ ಬಿಸಿಯಾದ ಓಗರ,ಹಾಲು ಕೊಟ್ಟಾಗ ದಾಸರು ನೀನ್ಯಾರೆಂದು ಕೇಳಲು,....ನಾನೇ...ಎಂದು ಅದೃಷ್ಯನಾದನು. ಮರು ದಿವಸ ಶ್ರೀನಿವಾಸನಿಗೆ ಉಡಿಸಿದ್ದ ಜರತಾರಿ ಧೋತರ, ಬಂಗಾರದ ಬಟ್ಟಲುಗಳು ಕಾಣದೆ ಇದ್ದಾಗ ಹುಡುಕಿಕೊಂಡು ಬರುವಾಗ ಧೋತರವನ್ನು ಹೊದ್ದ ದಾಸರನ್ನು ನೋಡಿ ಕಳ್ಳನೆಂದು ಪ್ರಹರಿಸಿದರು. ತಕ್ಷಣವೇ ದಾಸರು ಪುಳಕಾಂಕಿತರಾಗಿ, ಸ್ವಾಮಿ ಇದು ನಿನ್ನ ಮಾಯವೋ, ಅಂದು ನೀನು ಭೈರವ ರೂಪದಿಂದ ಬಂದಾಗ ಮಠದವರು ನಿನಗೆ ಹೊಡೆದದ್ದಕ್ಕೆ, ಇಂದು ನನಗೆ ಈ ರೀತಿ ಪ್ರತಿಫಲ ನೀಡುತ್ತಿರುವೆಯಾ? "ಗೋವಿಂದ ಸಲಹೆನ್ನನು.. " ಎಂದು ಶ್ರೀನಿವಾಸನ ಮೊರೆಬಿದ್ದರು. ದಾಸರ ಮೈಮೇಲೆ ಬಿದ್ದ ಪೆಟ್ಟಿನ ಗುರುತುಗಳು ಶ್ರೀನಿವಾಸನ ಮೂರ್ತಿಯ ಮೇಲೆ ಮೂಡಿದಾಗ, ಎಲ್ಲರಿಗೂ ಭಯ, ಆಶ್ಚರ್ಯಗಳಾಗಿ ಇವರ್‍ಯಾರೊ ಮಹಾತ್ಮರಾಗಿರಬೇಕು ಎನ್ನುವಷ್ಟರಲ್ಲಿ, ಒಬ್ಬ ಬಾಲಕನ ಮೂಲಕ "ಇವರೇ ನನ್ನ ಭಕ್ತ ಕನಕ, ಅವರನ್ನು ಬಿಡಿರಿ ಧೋತರ ಇತ್ಯಾದಿಗಳನ್ನು ಅವರಿಗೇ ಕೊಡರಿ, ಗೌರವಿಸಿರಿ, ಎಂಬ ಸೂಚನೆಯನ್ನು ಶ್ರೀನಿವಾಸನು ನೀಡಿದಾಗ, ದಾಸರನ್ನು ಗೌರವಿಸಿ ಏಕಾಂತ ಸೇವೆಗೆ ಅನುವು ಮಾಡಿಕೊಟ್ಟರು. ಆ ಸಮಯದಲ್ಲಿ ಶ್ರೀನಿವಾಸ ಮತ್ತು ದಾಸರ ಮಧ್ಯೆ ಸರಸ ಸಲ್ಲಾಪ ನಡೆದು ಶ್ರೀನಿವಾಸನು ದಾಸರನ್ನು ಸಂತೈಸಿದಾಗ ದಾಸರು "ನಿನ್ನ ನಾನೇನೆಂದೆನೋ ವೆಂಕಟರಾಯ ! ಎನ್ನ ನೀ ಸಲಹಬೇಕೋ..." ಎಂಬ ನಿಂದಾಸ್ತುತಿಯನ್ನು ರಚಿಸಿ, ವೇಂಕಟೇಶನನ್ನು ಸ್ತುತಿಸಿದರು.

ಕನಕದಾಸರು, ಬೇಲೂರಿನಲ್ಲಿದ್ದ, ದೇವರಾಜ ಇಂದ್ರಾಂಶ ಸಂಭೂತರಾದ ವೈಕುಂಠದಾಸರ ಸೇವೆಯನ್ನು,ತಮ್ಮ ಸ್ವರೂಪ ಆಚ್ಛಾದನೆ ಮಾಡಿಕೊಂಡು ಕೆಲವು ಕಾಲ ಮಾಡಿದ ನಂತರ ವಿಷಯ ತಿಳಿದಾಗ "ಬಂಟನಾಗಿ ಬಾಗಿಲ ಕಾಯುವೆ ವೈಕುಂಠದಾಸೋತ್ತಮದಾಸರ ಮನೆಯ'' ಎಂದು ಹಾಡಿದಾಗ ಆದಿಕೇಶವ ಅಂಕಿತ ಕೇಳಿ, ವೈಕುಂಠದಾಸರು, ಕನಕದಾಸರನ್ನು ಏಕಾಂತಕ್ಕೆ ಕರೆದುಕೊಂಡು ಹೋದರು. ಈ ಇಬ್ಬರು ಮಹಾನುಭಾವರು ಭಗವಂತನನ್ನು ಆಡಿಸಿ ಕುಣಿಸಿದವರು. ವೈಕುಂಠದಾಸರು ಸ್ವಪ್ರಯತ್ನದಿಂದ ದಾಸರಾದವರು ಕನಕದಾಸರು ಭಗವಂತನ ಪ್ರೇರಣೆಯಿಂದ ದಾಸರಾದವರು, ಆದರೆ ಕೂಡಿದ ಕೇಂದ್ರಬಿಂದು ಮಾತ್ರ ಶ್ರೀ ಹರಿಯೇ ಇಬ್ಬರೂ ಅಪರೋಕ್ಷ ಜ್ಞಾನಿಗಳು, ಕೇಶವನ ಭಕ್ತರು, ನಂತರ ಕನಕದಾಸರು ಉಡುಪಿಯಲ್ಲಿ ಶ್ರೀಕೃಷ್ಣನ ದರ್ಶನ ಮಾಡಿ, ಗುರುಗಳ ಬಳಿ ಇರಬೇಕೆಂದು ವಿಜಯನಗರಕ್ಕೆ ಬಂದರು, ಮಾನಸ ಪೂಜೆಯ ಮಹತ್ವ ತಿಳಿಯ ಪಡಿಸಿದರು.

ಜೀವನ ಮತ್ತು ಮರಣದ ಬಗ್ಗೆ ಗರುಡ ಪುರಾಣದಲ್ಲಿ ನಿರೂಪಿತವಾಗಿರುವ ಅಂಶಗಳನ್ನು ಸೂಕ್ಷ್ಮವಾಗಿ ಎಳೆ, ಎಳೆಯಾಗಿ ಬಿಡಿಸಿ, ಕೃತಿಗಳ ರೂಪದಲ್ಲಿ ಸಮಾಜಕ್ಕೆ ತಿಳಿಸಿದ್ದಾರೆ. 1. ಎಲ್ಲಿಂದ ಬಂದೆ ಮುಂದೆತ್ತಪಯಣ... 2. ನನ್ನಿಂದ ನಾನೇ ಜನಿಸಿ ಬಂದೆನೇ ದೇವಾ...3. ತನು ನಿನ್ನದೋ ಈ ಜೀವನ ನಿನ್ನದೋ...4. ಏನು ಬರುವುದೋ ಸಂಗಡೇನು ಬರುವುದೋ... 5. ಆರು ಸಂಗಡಬಾಹೋರಿಲ್ಲ.. ಇತ್ಯಾದಿ ಕೃತಿಗಳ ಮೂಲಕ ಸಮಾಜವನ್ನು ಎಚ್ಚರಿಸಿದ್ದಾರೆ.

ದಾಸಸಾಹಿತ್ಯದ ಪ್ರೇರಣೆಯಿಂದ ಲಕ್ಷಾವಧಿ ಜನರು, ಭಕ್ತಿ ಪಂಥದ ಅನುಯಾಯಿಗಳಾಗಿ ಭಕ್ತಿ ರಸಾಯನವನ್ನು ಸವಿದಿದ್ದಾರೆ. ಇದು ಅನುಭವ ಸಾಹಿತ್ಯ. ವರ್ಣಾಶ್ರಮಗಳಿಗನುಸಾರ ಜ್ಞಾನ ಭಕ್ತಿ ವೈರಾಗ್ಯಗಳನ್ನು ಪ್ರಚೋದಿಸುವ ಸಾಹಿತ್ಯ.

ಇಂತಹ ಮಹಾನ್ ಚೇತನವು ಕ್ರಿ.ಶ. 1594 ರಲ್ಲಿ ಈ ಭೂಲೋಕದಿಂದ ಕಣ್ಮರೆಯಾಗಿ ಕಾಗಿನೆಲೆಯ ಕಾಂತಿಯು ಅಸ್ತಂಗತವಾಯಿತೆಂದರೆ ಆಸ್ತಿಕರಿಗೆ ದುಃಖವಾಗದೇ ಇರದು. ಆದರೂ ಅವರ ಉಪದೇಶಗಳು ಮಾತ್ರ ಚಿರಸ್ಥಾಯಿಯಾಗಿ ಉಳಿದಿದೆ.

**ಶ್ರೀ ಕೃಷ್ಣಾರ್ಪಣ ಮಸ್ತು**



# ಧನುರ್ಮಾಸ – ಪಾರಮಾರ್ಥಿಕತೆ, ವೈಜ್ಞಾನಿಕತೆ, ಭಾವನಾತ್ಮಕತೆಯಿಂದ ಕೂಡಿದ ಶ್ರೇಷ್ಠಮಾಸ

– ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
9739369621



ಶ್ರೀ ಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ ತಿಳಿಸಿರುವಂತೆ- ಶ್ರೀ ಕೃಷ್ಣನಿಗೆ ಮಾರ್ಗಶಿರ ಮಾಸ ಅತ್ಯಂತ ಪ್ರಿಯವಾದ ತಿಂಗಳಾಗಿದೆ! "ಬೃಹತ್ ಸಾಮ ತಥಾ ಸಾಮ್ನಾಂ ಗಾಯತ್ರೀ ಛಂದಸಾನಾಮಹಮ್ ಮಾಸಾನಾಂ ಮಾರ್ಗಶೀರ್ಷೋಹಂ ಋತೂನಾಂ ಕುಸುಮಾಕರಃ" ಸಾಮಗಳಲ್ಲಿ ಬೃಹತ್ ಸಾಮವು ನಾನು, ಛಂದಸ್ಸುಗಳಲ್ಲಿ ಅತಿ ವಿಶಿಷ್ಟವಾದ ಗಾಯತ್ರಿ ಛಂದಸ್ಸು, ಮಾಸಗಳಲ್ಲಿ ಮಾರ್ಗಶೀರ್ಷಮಾಸ, ಋತುಗಳಲ್ಲಿ ಚಿಗುರೊಡೆಯುವ ವಸಂತವೂ ನಾನೇ ಆಗಿದ್ದೇನೆಂದು ತಿಳಿಸಿದ್ದಾನೆ.

ದೇವರನ್ನು ಧ್ಯಾನಿಸಲು ಪೂಜಿಸಲು ಪ್ರೀತಿಸಲು ಮತ್ತು ಒಳ್ಳೆಯ ಕೆಲಸ ಆರಂಭಿಸಲು ಧನುರ್ಮಾಸ ಅತಿ ಶ್ರೇಷ್ಠಮಾಸ ! ಬರುವ ಧನುರ್ಮಾಸವನ್ನು ಶೂನ್ಯಮಾಸವೆಂದು ಕೆಲವರು ತಪ್ಪು ತಿಳಿದಿದ್ದಾರೆ ಇದು ಮಾಸಗಳಲ್ಲೇ ಅತೀ ಶ್ರೇಷ್ಠವಾದ ಮಾಸ!!! ಈ ಮಾಸದಲ್ಲಿ ಬರುವ ಪ್ರಮುಖ ಹಬ್ಬಗಳು: ಮೋಕ್ಷದಾ ಏಕಾದಶಿ - ಗೀತಾಜಯಂತಿ, ದತ್ತಾತ್ರೇಯ ಜಯಂತಿ, ಸ್ಕಂದಷಷ್ಠಿ, ಧನುರ್ಮಾಸ ಆರಂಭ, ವಿಷ್ಣು ದೀಪೋತ್ಸವ, ಹುತ್ತರೀಹಬ್ಬ , ಕಾಲಭೈರವಾಷ್ಠಮಿ, ಎಳ್ಳಮಾವಾಸ್ಯೆ.

ಧನುರ್ಮಾಸದಲ್ಲಿ ವಿಶೇಷವಾಗಿ ಪರಮಾತ್ಮನನ್ನು ಹುಗ್ಗಿ ಸಮರ್ಪಣೆ ಮಾಡಿ ಪೂಜಿಸುವುದರಿಂದ ವಿಶೇಷ ಫಲವಿದೆ ಎಂದು ಪುರಾಣಗಳು ಸಾರಿ ಹೇಳುತ್ತಿವೆ. ಆಗ್ನೇಯ ಪುರಾಣದಲ್ಲಿ ಧನುರಾಶಿಯಲ್ಲಿ ಸೂರ್ಯನಿರುವಾಗ ಶ್ರೀಹರಿಗೆ ಹುಗ್ಗಿಯನ್ನು ಒಂದು ದಿನವಾದರೂ ಸಮರ್ಪಿಸುವ ಮನುಷ್ಯನು ಒಂದು ಸಾವಿರ ವರ್ಷಗಳವರೆಗೆ ಪೂಜೆ ಮಾಡಿದ ಫಲವನ್ನು ಪಡೆಯುವನು ಎಂದಿದೆ. ಧನುರ್ಮಾಸದ ಒಂದು ತಿಂಗಳ ಕಾಲ ಪ್ರತಿದಿನ ಉಷಃಕಾಲದಲ್ಲಿ ಶ್ರೀಹರಿಗೆ ಹುಗ್ಗಿಯನ್ನು ಸಮರ್ಪಿಸುವುದರಿಂದ ಶ್ರೀಹರಿಯು ಸಂಪ್ರೀತನಾಗುವನು. ವೈಜ್ಞಾನಿಕ ದೃಷ್ಟಿಯಿಂದ ನೋಡಿದಾಗ ಚಳಿಗಾಲದಲ್ಲಿ ದೇಹ ಎಣ್ಣೆ ಅಂಶ ಕಳೆದುಕೊಳ್ಳುವುದರಿಂದ ತುಪ್ಪವು ಅದನ್ನು ದೇಹಕ್ಕೆ ಒದಗಿಸುವುದು, ಮೆಣಸು, ಜೀರಿಗೆ ಇದು ಶೀತ ತಡೆಯುವುದು, ಕಫ, ವಾಂತಿ ಪಿತ್ತ ನಿವಾರಿಸಿ ದೇಹಕ್ಕೆ , ಉಷ್ಣವನ್ನು ನೀಡುವುದು ಹಾಗೂ ಹಸಿ ಶುಂಟಿ ಜೀರ್ಣಕ್ರಿಯೆಗೆ ಶ್ರೇಷ್ಠವಾದುದು. ಇನ್ನು ಈ ಕಾಲದ ಧನುರ್ವ್ಯತೀಪಾತಯೋಗವು ಸಹಸ್ರ ಅರ್ಧೋದಯಕ್ಕೆ ಸಮಾನ. ಈ ದಿನ ಶ್ರಾದ್ಧ, ಪಿತೃತರ್ಪಣ ನೀಡಬೇಕು. ನೈವೇದ್ಯ ಮಾಡಿ ಭಗವಂತನಿಗೆ ಅರ್ಘ್ಯವನ್ನು ನೀಡಬೇಕು.

ಈ ಆಚರಣೆಯಲ್ಲಿ ಪಾರಮಾರ್ಥಿಕತೆ, ವೈಜ್ಞಾನಿಕತೆ, ಭಾವನಾತ್ಮಕ ಸಂಬಂಧವೆಲ್ಲ ಕೂಡಿಕೊಂಡು ಒಳ್ಳೆಯದನ್ನೇ ನೀಡುತ್ತದೆ. ದೇವರನ್ನು ಧ್ಯಾನಿಸಲು, ಪೂಜಿಸಲು ಧನುರ್ಮಾಸ ಅತಿ ಶ್ರೇಷ್ಠವಾದುದಾಗಿದೆ. ಧನುರ್ಮಾಸದ ಈ ಮೂವತ್ತು ದಿನಗಳೂ ಶ್ರೀ ವೈಷ್ಣವ ದೇವಾಲಯಗಳಲ್ಲಿ ದಿನಕ್ಕೊಂದರಂತೆ ಮೂವತ್ತೂ ಶ್ಲೋಕಗಳನ್ನು ಪಾರಾಯಣ ಮಾಡಲಾಗುವುದು. ಪ್ರತೀ ದಿನ ಸಂಜೆ ಶ್ಲೋಕಗಳನ್ನು ಕುರಿತ ವಿಸ್ತಾರ ಉಪನ್ಯಾಸಗಳನ್ನೇರ್ಪಡಿಸಲಾಗುವುದು. ಧನುರ್ಮಾಸವನ್ನು ಎಲ್ಲ ಹಿಂದೂ ದೇವಾಲಯಗಳಲ್ಲೂ ಆಚರಿಸಲಾಗುವುದು.

ಈ ಕಾಲದಲ್ಲಿ ಧನುರಾಶಿಯಲ್ಲಿ ರವಿ ಸಂಚರಿಸುವ ಮಾಸವಾದ್ದರಿಂದ ಧನುರ್ಮಾಸ ಎನ್ನುವರು ಭಗವದ್ಗೀತೆಯ 10 ನೇ ಅಧ್ಯಾಯದಲ್ಲಿ ಕೃಷ್ಣನು ಅರ್ಜುನನಿಗೆ ತಾನು ಎಲ್ಲೆಲ್ಲಿ ಇದ್ದೇನೆಂದೂ ವಿವರಿಸುತ್ತಾ " "ಮಾಸಾನಾಂ ಮಾರ್ಗಶೀರ್ಷೋ" ಎಂದಿದ್ದಾನೆ. "ಅಂದರೆ ತಿಂಗಳುಗಳಲ್ಲಿ ಮಾರ್ಗಶೀರ್ಷ, ನಾನು ಋತುಗಳಲ್ಲಿ ವಸಂತ ಋತು ಎಂದಿದ್ದಾನೆ. ಹಾಗಾಗಿ ಮಾರ್ಗಶಿರ್ಷ ತಿಂಗಳಿಗೆ ಅಷ್ಟು ಪ್ರಾಮುಖ್ಯತೆ.

ಬೆಳಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ದೇವರನ್ನು ಪೂಜಿಸಿ ಅರಳಿವೃಕ್ಷ ಹಾಗೂ ನಾಗರಕಟ್ಟೆ ಪ್ರದಕ್ಷಿಣೆ ಮಾಡುವುದು ವಿಶೇಷ. ವೃಕ್ಷಗಳ ರಾಜ ಅರಳಿ ಹಾಗೂ ರಾಣಿ ಬೇವಿನ ಮರ. ಬೇವು ದುರ್ಗೆಯ ಪ್ರತೀಕ. ಇದನ್ನು ಪ್ರದಕ್ಷಿಣೆ

ಮಾಡಿದರೆ ಮದುವೆಯಾಗುವುದು ಹಾಗೂ ಮಕ್ಕಳಾಗುವುದೆಂಬುದು ಧಾರ್ಮಿಕ ನಂಬಿಕೆ, ಆದರೂ ವೈಜ್ಞಾನಿಕವಾಗಿ ವಿಶ್ಲೇಷಿಸಿದಾಗ ಬೇವು ಹಾಗೂ ಅರಳಿ ಮರದಿಂದ ಉತ್ತಮ ಆಮ್ಲಜನಕ ದೊರೆಯುವುದು. ಬೇವಿನ ಗಾಳಿಯಿಂದ ಸಕ್ಕರೆ ಕಾಯಿಲೆ, ಕಜ್ಜಿ ಗಾಯಗಳು ಗುಣವಾಗುತ್ತದೆ. ಜೊತೆಗೆ ಅರಳಿ ಎಲೆ ತಿನ್ನುವುದರಿಂದ ವ್ಯಾಧಿ ನಿವಾರಣೆಯಾಗುವುದು . ಇದು ಶ್ವಾಸಕೋಶವನ್ನು ಶುದ್ಧಿ ಮಾಡಿ ಮೆದುಳನ್ನು ಚುರುಕುಗೊಳಿಸುತ್ತದೆ. ಎಂಬ ವಿವರಣೆಯನ್ನು ಹಿರಿಯರು ನೀಡುತ್ತಾರೆ.



ಒಟ್ಟಿನಲ್ಲಿ ಈ ಆಚರಣೆಯಲ್ಲಿ ಪಾರಮಾರ್ಥಿಕತೆ, ವೈಜ್ಞಾನಿಕತೆ, ಭಾವನಾತ್ಮಕ ಸಂಬಂಧವೆಲ್ಲಾ ಮಿಳಿತವಾಗಿದೆ. ಅರಳಿ ಮರದ ಗಾಳಿ ಸೇವನೆಯಿಂದ ಗರ್ಭಕೋಶದ ಸಮಸ್ಯೆಗಳೂ ದೂರವಾಗುವುದೆಂಬುದು ವೈಜ್ಞಾನಿಕ ಕಾರಣವಾದರೆ, ರಾಹು, ಕೇತು, ಅಂಗಾರಕ ದೋಷ ನಿವಾರಣೆಯಾಗುತ್ತದೆ ಎನ್ನುವುದು ಪುರಾಣ. ಒಟ್ಟಿನಲ್ಲಿ ಕಾಕತಾಳೀಯವೆನ್ನುವಂತೆ ಒಳ್ಳೆಯದೇ ಆಗುತ್ತದೆ. ಆದ್ದರಿಂದ "ಮೂಢನೇ ಆದರೂ ನಂಬಿಕೆ ಕಳೆದುಕೊಳ್ಳಬೇಡ" ಎನ್ನುವರು ಹಿರಿಯರು.

**ಪ್ರಸಾದ :**

"ಧನುರ್ಮಾಸದ ಪೂಜೆಗೆ ಪೊಂಗಲ್ ಪ್ರಸಾದ. ಪ್ರಸಾದವಿಲ್ಲದೇ ಪೂಜೆ ಪರಿಸಮಾಪ್ತಿಯಾಗುವುದಿಲ್ಲ. ಪ್ರಸಾದದಲ್ಲಿ ಹರ್ವಿ ನಿವೇಧನಕ್ಕೆ ಹೆಚ್ಚು ಒತ್ತು. ಹವಿಸ್ಸು ಎಂದರೆ ತುಪ್ಪ. ಮೇದಸ್ಸನ್ನು ವೃದ್ಧಿಸುವ ತುಪ್ಪ ಭಗವಂತನಿಗೆ ಶ್ರೇಷ್ಠ ವೈಜ್ಞಾನಿಕ ದೃಷ್ಟಿಯಿಂದ ನೋಡಿದಾಗ ಚಳಿಗಾಲದಲ್ಲಿ ದೇಹ ಎಣ್ಣೆ ಅಂಶ ಕಳೆದುಕೊಂಡಿರುತ್ತದಾದ್ದರಿಂದ ತುಪ್ಪವನ್ನು ಬಳಸಲಾಗುವುದೇನೋ ಎನಿಸುತ್ತದೆ. ಮೆಣಸು, ಜೀರಿಗೆ ಇದು ಶೀತ ತಡೆಯುವುದು, ಕಫ, ವಾಂತಿ ಪಿತ್ತ ನಿವಾರಿಸುವುದು ಹಾಗೂ ಹಸಿ ಶುಂಠಿ ಜೀರ್ಣ ಕ್ರಿಯೆಗೆ ಶ್ರೇಷ್ಠವಾದುದು. ಇದು ಮೊದಲ ಬೆಳೆಯಾದುದರಿಂದ ಭತ್ತದಲ್ಲಿ ಗಂಜಿ ಹೆಚ್ಚಿರುವುದರಿಂದ ಪೊಂಗಲ್‌ಗೆ ಬಳಸಲಾಗುವುದು. ಮೊದಲ ಬೆಳೆಯನ್ನು ದೇವರಿಗೆ ಸಮರ್ಪಿಸಬೇಕೆನ್ನುವುದೂ ಒಂದು ಕಾರಣವಾಗಿದೆ" ಎನ್ನುತ್ತಾರೆ.

"ಬ್ರಾಹ್ಮೀ ಮುಹೂರ್ತದಲ್ಲಿ ದೇವಸ್ಥಾನಕ್ಕೆ ಹೋಗಬೇಕೆಂದೇನೂ ಇಲ್ಲ.ಮನೆಯಲ್ಲೇ ಕುಳಿತು ಪೂಜೆ ಮಾಡಲೂಬಹುದು.ಇದರಿಂದ ಮನಸ್ಸು ಹಗುರವಾಗುತ್ತದೆ" ಎನ್ನುವರು ರಾಜಮಣಿ, ಹಿಂದೂ ಸಂಸ್ಕೃತಿ ಜಪ, ತಪ, ವ್ರತಗಳ ಬುನಾದಿಯಿಂದಲೇ , ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಭಗವಂತನೇ ಹಿಂದೂ ಸಂಪ್ರದಾಯದ ಕೇಂದ್ರಬಿಂದುವಾಗಿದ್ದಾನೆ ಈ ಆಚರಣೆಗಳ ಹಿಂದೆ ಅರ್ಥಪೂರ್ಣತೆ, ಗಹನವಾದ ಕಾರಣ ಅಡಕವಾಗಿಯೇ ಇರುತ್ತದೆ.

ಧನುರ್ಮಾಸದಲ್ಲಿ ಬ್ರಾಹ್ಮೀ ಮುಹೂರ್ತದಲ್ಲೇ ದೇವರನ್ನು ಪೂಜಿಸಬೇಕು. ದೇವಮಾನದ ಪ್ರಕಾರ ದಕ್ಷಿಣಾಯಣ ರಾತ್ರಿಯಾಗಿದ್ದು, ಅದರ ಕೊನೆಯ ಸಮಯ ಬ್ರಾಹ್ಮೀ ಮುಹೂರ್ತದಲ್ಲಿ ವೈಕುಂಠದ ಬಾಗಿಲು ತೆರೆದಿರುತ್ತದೆ. ಉತ್ತರಾಯಣ ಪುಣ್ಯಕಾಲದಿಂದ ಹಗಲು ಪ್ರಾರಂಭವಾಗುವುದರಿಂದ, ಅಂದರೆ ೨ ಗಂಟೆಯು ರಾತ್ರಿಯ ಕೊನೆಯ ವೇಳೆಯಾಗಿ ಧನುರ್ಮಾಸವಾಗಿರುತ್ತದೆ. ಧನುರ್ಮಾಸ ಪ್ರಕಾರ ಈ ಸಮಯ ವಿಷ್ಣು ಏಳುವ ಸಮಯ ಆಗಿರುವುದರಿಂದ ಆ ವೇಳೆಯಲ್ಲಿಯೇ ದೇವತಾ ಪೂಜೆ ಮಾಡಬೇಕು.

**ಧನುರ್ಮಾಸದ ಮಹತ್ವ**

ಮಾರ್ಗಶಿರ ಮಾಸದಲ್ಲಿ ಧನುರಾಶಿಗೆ ಸೂರ್ಯನು ಪ್ರವೇಶಿಸುವನು. ಧನುರಾಶಿಗೆ ಸೂರ್ಯನ ಪ್ರವೇಶವನ್ನು ಧನುರ್ಮಾಸ ಎನ್ನಲಾಗಿದೆ. ದೇವತೆಗಳಿಗೆ ದಕ್ಷಿಣಾಯಣವು ರಾತ್ರಿಯಾಗಿದೆ. ಉತ್ತರಾಯಣವು ಹಗಲಾಗಿದೆ. ಉತ್ಥಾನ ದ್ವಾದಶಿಯಂದು ಎದ್ದ ಭಗವಂತನಿಗೆ ಧನುರ್ಮಾಸವು ಅರಣೋದಯ ಕಾಲವಾಗಿದೆ. ದೇವತೆಗಳು ಅರಣೋದಯಕಾಲದಲ್ಲಿ ಭಗವಂತನಿಗೆ (ಹುಗ್ಗಿ) ಮುದ್ಗಾನ್ನವನ್ನು ನಿವೇದಿಸುವರು.

ಧನುರ್ಮಾಸದಲ್ಲಿ ದೇವರಿಗೆ ಮುದ್ಗಾನ್ನ (ಹುಗ್ಗಿ) ನೈವೇದ್ಯದ ಮಹತ್ವ

ಧನುರ್ಮಾಸದಲ್ಲಿ ಯಾರು ಒಂದು ತಿಂಗಳ ಕಾಲ ಅರಣೋದಯದಲ್ಲಿ ಎದ್ದು ಸ್ನಾನಾದಿಗಳನ್ನು ಮಾಡಿ ಹುಗ್ಗಿಯ ನೈವೇದ್ಯವನ್ನು ಮಾಡಿ ಭಗವಂತನನ್ನು ಪೂಜಿಸುವನೋ ಅವನು ಭಾಗವತೋತ್ತಮನೆನಿಸುವನು ಒಂದು ದಿನದ ಪೂಜೆಯಿಂದ ಸಾವಿರವರ್ಷ ಪೂಜಾಫಲವು ಲಭಿಸುತ್ತದೆ.

**ಧನುರ್ಮಾಸದ ಪೂಜಾ ಸಮಯ**

ಧನುರ್ಮಾಸ ಪೂಜೆಯು ಅರುಣೋದಯ ಕಾಲದಲ್ಲಿ ಆಚರಿಸುವುದು ಉತ್ತಮ ಪಕ್ಷವಾಗಿದೆ. ನಕ್ಷತ್ರಗಳು ಕಾಣಿಸದೆ ಸ್ವಲ್ಪ ಮುಂಜಾನೆಯಲ್ಲಿ ಮಾಡಿದ ಪೂಜೆಯು ಮಧ್ಯಮವಾಗಿದೆ. ಸೂರ್ಯೋದಯವಾದ ಮೇಲೆ ಮಾಡಿದ ಪೂಜೆಯು ಅಧಮ ಪಕ್ಷವಾಗಿದೆ. ಮಧ್ಯಾಹ್ನದಲ್ಲಿ ಮಾಡಿದ ಪೂಜೆಯು ನಿಷ್ಫಲವಾದದ್ದು

**ಅರುಣೋದಯ ಕಾಲದ ಪ್ರಾಮುಖ್ಯತೇ**

ದೇವತೆಗಳೊಡನೆ ಅಷಾಢ ಶುಕ್ಲ (ಚಾತುರ್ಮಾಸ್ಯ ಕಾಲದಲ್ಲಿ) ಏಕಾದಶಿ ದಿನದಲ್ಲಿ ಪರಮಾತ್ಮನು ತಾನು ಮಲಗಿದನು (ಯೋಗನಿದ್ರೆ) ನಾಲ್ಕು ತಿಂಗಳಾದ ಮೇಲೆ ದೇವತೆಗಳಿಗೆ ಎಚ್ಚರವಾಯಿತು. ಅವರು ಕಾರ್ತೀಕ ಶುಕ್ಲಪಕ್ಷ ಏಕಾದಶಿ ದಿನದಲ್ಲಿ ಶ್ರೀ ಹರಿಯನ್ನು ಎಬ್ಬಿಸಿದರು. ಮಾರ್ಗಶಿರ ಶುಕ್ಲ ಏಕಾದಶಿ ಅಥವಾ ಧನುರ್ಮಾಸ ಆರಂಭ ಕಾಲದಲ್ಲಿ ದೇತೆಗಳಿಗೆ ರಾತ್ರಿಯ ಕೊನೆಯ ಭಾಗವಾದ ಅರುಣೋದಯಕಾಲದ ಆರಂಭವಾಗಿದೆ.

ಆಗ ದೇವತೆಗಳು ಶ್ರೀ ಹರಿಯನ್ನು ಪೂಜಿಸಿ ತಮ್ಮ ಅರುಣೋದಯ ಕಾಲವಾದ ಧನುರ್ಮಾಸದಲ್ಲಿ ಹುಗ್ಗಿಯನ್ನು ಭಗವಂತನಿಗೆ ಅರ್ಪಿಸಿದರು ಅದ್ದರಿಂದ ಮನುಷ್ಯರು ಸೂರ್ಯನು ಧನುರಾಶಿಯಲ್ಲಿರುವವರೆಗೂ ಒಂದು ತಿಂಗಳು ಕಾಲ ಸೂರ್ಯೋದಯಕ್ಕೂ ಮೊದಲು ತೊಂಬತ್ತಾರು ನಿಮಿಷ ಮೊದಲು ದೇವರಪೂಜೆಯನ್ನು ಮಾಡಿ ಮುದ್ಗಾನ್ನ (ಹುಗ್ಗಿವನ್ನು ಹಾಗೂ ಇತರ ಪಾಯಸಾದಿ ಭಕ್ಷ್ಯಗಳನ್ನು ಭಗವಂತನಿಗೆ ನೈವೇದ್ಯ ಮಾಡಬೇಕು. ಸಂಧ್ಯಾವಂದನೆ ಮೊದಲಾದ ನಿತ್ಯಾಹ್ನಿಕವನ್ನು ಪೂಜಾ ನಂತರ ಮಾಡಿದರೂ



ದೋಷವಿರುವುದಿಲ್ಲ. ಮೊದಲು ಭಗವಂತನಿಗೆ ಪೂಜೆ ಹಾಗೂ ಹುಗ್ಗಿಯನ್ನು ನಿವೇದಿಸಿ ನಂತರ ಅಹ್ನಿಕವನ್ನು ಮಾಡಬಹುದು.

ಉಷಃಕಾಲದಲ್ಲಿ ಎದ್ದು ಪೂಜೆ ಹುಗ್ಗಿ ನಿವೇದನೆಯನ್ನು ಮಾಡುತ್ತಿದ್ದರೆ ನಿತ್ಯ ಸಂಧ್ಯಾವಂದನಾದಿ ಲೋಪ ಬರುತ್ತದೆ ಎಂದು ಯಾರಾದರು ದೇವರ ಪೂಜಾದಿಗಳನ್ನು ಮಾಡದೆ ನಿತ್ಯಾಹ್ನಿಕದಲ್ಲೇ ನಿರತನಾಗುವನೋ ಏಳು ಜನ್ಮ ನಿರ್ಧನನಾಗುವನು.

ಅರುಣೋದಯ ಕಾಲದಲ್ಲಿ (ಅರುಣೋದಯ - ಬೆಳಗಿನ ಜಾವ 4:30 ರಿಂದ 6 ಘಂಟೆಯ ಒಳಗೆ ) ಮೊದಲು ಷೋಡೋಶೋಪಚಾರ ಪೂಜೆ, ನಂತರ ಪಾಯಸ ಮುಂತಾದ ಭಕ್ಷ್ಯಗಳ ಜೊತೆಗೆ ಹುಗ್ಗಿಯ ನೈವೇದ್ಯ, ಅನಂತರ ನಿತ್ಯಾಹ್ನಿಕವನ್ನು ಮಾಡಿ ಸೂರ್ಯೋದಯವಾದ ಮೇಲೆ ಬ್ರಾಹ್ಮಣರ ಭೋಜನವನ್ನು ಮಾಡಿಸಿ ತಾನು ಭುಜಿಸಬೇಕು.

## ಧನುರ್ಮಾಸದಲ್ಲಿ ಮುದ್ಗಾನ್ನ ನೈವೇದ್ಯ ಮತ್ತು ಭದ್ರಲಕ್ಷ್ಮೀಸ್ತವದ ಮಹತ್ವ

ಇಂದ್ರದೇವರ ಪತ್ನಿಯಾದ ಶಚೀದೇವಿಯು ತನ್ನ ಪತಿಯಾದ ಇಂದ್ರದೇವರು ಇಂದ್ರಪದವಿಯನ್ನು ಕಳೆದುಕೊಂಡು ಪದವಿಯಿಂದ ಚ್ಯುತರಾದಾಗ ದುಃಖಿಗೊಂಡ ಶಚಿದೇವಿಯು ಧನುರ್ಮಾಸದಲ್ಲಿ ಅರುಣೋದಯ ಕಾಲದಲ್ಲಿ ಶ್ರೀಹರಿಗೆ ಮುದ್ಗಾನ್ನವನ್ನು ಸಮರ್ಪಿಸಿ ತನ್ನ ಪತಿಯನ್ನು ಹಾಗೂ ನಿತ್ಯೈಶ್ವರ್ಯವನ್ನು ಪಡೆದಳು.

ಧನುರ್ಮಾಸದಲ್ಲಿ ಶ್ರೀ ಹರಿಗೆ ಮುದ್ಗಾನ್ನವನ್ನು ಸಮರ್ಪಿಸಿ ಲಕ್ಷ್ಮೀದೇವಿಯ ದ್ವಾದಶನಾಮಗಳಿಂದ ಹನ್ನೆರಡು ಬಾರಿ ಅರಿಶಿಣ, ಕುಂಕುಮ, ಪುಷ್ಪಾದಿಗಳಿಂದ ಅರ್ಚಿಸಿ ಶ್ರೀ ಹರಿಗೆ ನಿವೇದಿತವಾದ ಮುದ್ಗಾನ್ನವನ್ನು ಲಕ್ಷ್ಮೀದೇವಿಗೂ ಅರ್ಪಿಸಬೇಕು. ಧನುರ್ಮಾಸದಲ್ಲಿನ ಮುದ್ಗಾನ್ನ ನಿವೇದನೆಯು ಭಗವಂತನಿಗೆ ಅತ್ಯಂತ ಪ್ರೀತಿಯುಂಟು ಮಾಡುವುದು. ಶತೃಗಳು ನಶಿಸುವರು. ದೀರ್ಘವಾದ ಅಯುಸ್ಸನ್ನು ಪಡೆಯಬಹುದು. ಧನ, ಧಾನ್ಯ ಸಂಪತ್ತು ಮುಂತಾದ ಸಕಲ ಭಾಗ್ಯವುಂಟಾಗುವುದು. ಜನ್ಮ ಜನ್ಮಗಳಲ್ಲಿಯೂ ವಿಷ್ಣುಭಕ್ತನಾಗಿ ಜನಿಸುವನು.

ಧನುರ್ಮಾಸದಲ್ಲಿ ಪ್ರತಿನಿತ್ಯ ಪಠಿಸಬೇಕಾದ ಭದ್ರಲಕ್ಷ್ಮೀಸ್ತವ
ಶ್ರೀದೇವೀ ಪ್ರಥಮಂ ನಾಮ ದ್ವಿತೀಯಂ ಅಮೃತೋದ್ಭವಾ।
ತೃತೀಯಂ ಕಮಲಾ ಪ್ರೋಕ್ತಾ ಚತುರ್ಥಂ ಚಂದ್ರಲೋಚನ (ಲೋಕಸುಂದರಿ) ॥1॥

ಪಂಚಮಂ ವಿಷ್ಣುಪತ್ನೀತಿ ಷಷ್ಠಂ ಶ್ರೀವೈಷ್ಣವೀತಿ ಚ।
ಸಪ್ತಮಂ ತು ವರಾರೋಹಾ ಅಷ್ಟಮಂ ಹರಿವಲ್ಲಭಾ ॥2॥

ನವಮಂ ಶಾರ್ಙ್ಗಿಣೀ ಪ್ರೋಕ್ತಾ ದಶಮಂ ದೇವದೇವಿಕಾ।
ಏಕಾದಶಂ ಮಹಾಲಕ್ಷ್ಮೀ ಃ ದ್ವಾದಶಂ ಭುವನೇಶ್ವರಿ ॥3॥

ಶ್ರೀಃ ಪದ್ಮಾ ಕಮಲಾ ಮುಕುಂದಮಹಿಷೀ ಲಕ್ಷ್ಮೀ ಸ್ತ್ರಿಲೋಕೇಶ್ವರೀ (ತ್ರಿಕೋಣೇಶ್ವರಿ)
ಮಾ ಕ್ಷೀರಾಬ್ಧಿ ಸುತಾರವಿಂದಜನನೀ ವಿದ್ಯಾ ಸರೋಜಾತ್ಮಿಕಾ ॥4॥

ಸರ್ವಾಭೀಷ್ಟಫಲಪ್ರದೇತಿ ಸತತಂ ನಾಮಾನಿ ಯೇ ದ್ವಾದಶ।
ಪ್ರಾತಃ ಶುದ್ಧತರಾಃ ಪಠಂತಿ ಸತತಂ ಸರ್ವಾನ್ ಲಭಂತೇ ಶುಭಾನ್ ॥5॥

ಭದ್ರಲಕ್ಷ್ಮೀ ಸ್ತವಂ ನಿತ್ಯ ಪುಣ್ಯ ಮೇತಚ್ಛುಭಾವಹಂ।

ಎಂಬ ಈ ಹನ್ನೆರಡು ಲಕ್ಷ್ಮೀ ದೇವಿಯ ಹೆಸರುಗಳನ್ನು (ಭದ್ರಲಕ್ಷ್ಮೀಸ್ತವವನ್ನು) ಧನುರ್ಮಾಸದಲ್ಲಿ ಪ್ರಾತಃಕಾಲದಲ್ಲಿ ಶುಚಿರ್ಭೂತರಾಗಿ ಪಠಿಸುವವರು ಎಲ್ಲ ಶುಭ ಫಲಗಳನ್ನು ಪಡೆಯುತ್ತಾರೆ.

## ಮುದ್ಗಾನ್ನ (ಹುಗ್ಗಿ)ದಲ್ಲಿ ಇರಬೇಕಾದ ಪದಾರ್ಥಗಳ ಮತ್ತು ಪ್ರಾಮಾಣ

ಅಕ್ಕಿಯ ಪ್ರಮಾಣದಷ್ಟೇ ಹೆಸರು ಬೇಳೆಯನ್ನು ಹಾಕಿ ತಯಾರಿಸಿದ ಮುದ್ಗಾನ್ನವು ಉತ್ತಮವಾದದ್ದು. ಅಕ್ಕಿಯ ಪ್ರಾಮಾಣದಲ್ಲಿ ಅರ್ಧದಷ್ಟು ಮಾತ್ರ ಹೆಸರುಬೇಳೆಯನ್ನು ಹಾಕಿ ತಯಾರಿಸಿದ ಹುಗ್ಗಿಯು ಮಧ್ಯಮವಾದದ್ದು. ಅಕ್ಕಿಯ ಪ್ರಮಾಣದ ಕಾಲುಭಾಗ (1/4) ಹೆಸರುಬೇಳೆಯನ್ನು ಉಪಯೋಗಿಸಿ ತಯಾರಿಸಿದ ಹುಗ್ಗಿಯು ಅಧಮವೆನಿಸಿದೆ. ಈ ರೀತಿಯ ಉತ್ತಮೋತ್ತಮ ಹುಗ್ಗಿಯಿಂದ ಬರುವ ಫಲವು ಉತ್ತಮೋತ್ತಮ ಮಧ್ಯಮಾಧಮವಾಗಿರುತ್ತದೆ. ಅಕ್ಕಿಯು ಒಂದು ಸೇರು ಇದ್ದರೆ ಅದಕ್ಕೇ ಎರಡುಪಟ್ಟು ಎಂದರೆ ಎರಡು ಸೇರು ಹೆಸರುಬೇಳೆಯನ್ನು ಸೇರಿಸಿ ಮಾಡಿದ ಹುಗ್ಗಿಯು ಅತ್ಯಂತ ಶ್ರೇಷ್ಠವಾಗಿದೆ.

## ಹುಗ್ಗಿಯಲ್ಲಿರಬೇಕಾದ ಪದಾರ್ಥಗಳು

ಧನುರ್ಮಾಸದಲ್ಲಿ ಶುಂಠಿಸಹಿತವಾದ ಮೊಸರು, ತುಪ್ಪ, ಯಾಲಕ್ಕಿ, ಬೆಲ್ಲಗಳಿಂದ ಕೂಡಿದ ಹುಗ್ಗಿ (ಮುದ್ಗಾನ್ನ) ಇವುಗಳನ್ನು ಶ್ರೀವಿಷ್ಣುವಿಗೆ ಸಮರ್ಪಿಸಬೇಕು ಇದು ಅತ್ಯಂತ ಹಿತಕರವಾದ ಬಿಸಿಯಿಂದ ಕೂಡಿರಬೇಕು.ಜೊತೆಗೆ ಗೆಡ್ಡೆಯ ಶಾಕಗಳನ್ನು ಸಮರ್ಪಿಸಬೇಕು. ಈ ಹುಗ್ಗಿ ಎಂಬ ನೈವೇದ್ಯ ಸಾಮಾಗ್ರಿಯನ್ನು ನೋಡಿಯೇ ಸಂತುಷ್ಟನಾದ ಭಕ್ತವತ್ಸಲನಾದ ಸಕಲ ಜಗತ್ ಸ್ವಾಮಿಯಾದ ಶ್ರೀನಾರಾಯಣನು ಎಲ್ಲ ವಿಧವಾದ ಭೋಗಗಳನ್ನು ಕರುಣಿಸುತ್ತಾನೆ ನಾನು ದರಿದ್ರನೆಂದು ಮುದ್ಗಾನ್ನವನ್ನು ಭಗವಂತನಿಗೆ ಅರ್ಪಿಸದೆ ಇರಬಾರದು ಹುಗ್ಗಿಯನ್ನು ನಿವೇದಿಸದ ವ್ಯಕ್ತಿಯು ಏಳು ಜನ್ಮಗಳಲ್ಲಿ ದರಿದ್ರನಾಗುವನು. ಆದ್ದರಿಂದ ಪ್ರತಿಯೊಬ್ಬರು ಧನುರ್ಮಾಸದಲ್ಲಿ ಮುದ್ಗಾನ್ನವನ್ನು ನಿವೇದಿಸಬೇಕು.

# ಉತ್ತಮ ಗುರಿ - ಉತ್ತಮ ಅಭಿರುಚಿ

**ಡಾ|| ವೈಷ್ಣವಾಂಘ್ರಿಸೇವಕ್‌ದಾಸ್**
**ಅನುವಾದ : ಡಿ.ಎಸ್.ಭೂಮಿಕ**



ರುಚಿ ಎನ್ನುವುದು ಕೇವಲ ನಾಲಿಗೆಯಿಂದ ಮಾತ್ರವೇ ತಿಳಿಯುವಂಥದಲ್ಲ, ಬುದ್ಧಿಯಿಂದ ಸಹಾ ವಿಶ್ಲೇಷಿಸುವಂಥದ್ದು, ಒಂದು ಬಾರಿ ವಿಜಯದ ರುಚಿಯನ್ನು ಸವಿದವರು ಪದೇ ಪದೇ ವಿಜಯಿಗಳಾಗಲು ಹಂಬಲಿಸುತ್ತಾರೆ. ಆದರೆ ವಿಜಯದ ರುಚಿಯನ್ನು ಸವಿಯಲು ನಾಲಿಗೆಯಿಂದ ಸಾಧ್ಯವಾಗುವುದಿಲ್ಲವಲ್ಲ! ಅದು ಬುದ್ಧಿಯಿಂದ ಮಾತ್ರ ಸಾಧ್ಯ. ಹಾಗೆಯೇ ರುಚಿಹತ್ತದೇ ಮನುಷ್ಯ ಯಾವ ಕಾರ್ಯಕ್ಕು ಬದ್ಧನಾಗುವುದಿಲ್ಲ. ಇದು ಎಲ್ಲರೂ ಊಟದ ವಿಷಯದಲ್ಲಿ ಅನುಭವಿಸುವ ಸತ್ಯವೇ ಆಗಿದೆ. ರುಚಿಕರವಾದ ಭೋಜನವನ್ನು ಮನುಷ್ಯ ಸ್ವೀಕರಿಸಲಾರ. ಆದ್ದರಿಂದ ಮಾಡುವ ಕಾರ್ಯದ ಮೇಲೆ, ಮಾಡಿದ ಕಾರ್ಯದಿಂದೊದಗುವ ಅದ್ಭುತವಾದ ಫಲಿತಾಂಶಗಳ ಮೇಲೆ ಮನುಷ್ಯನಿಗೆ ರುಚಿಯುಂಟಾಗಬೇಕು. ಇದೇ ಯುವಜನರಿಗೆ ಬೇಕಾಗಿರುವ ಪ್ರಮುಖ ವಿಷಯ.

ರುಚಿಗಳಲ್ಲಿ ಸಾಮಾನ್ಯ ರುಚಿ - ವಿಶೇಷವಾದ ರುಚಿ ಎಂಬುವು ಇರುತ್ತವೆ. ಉದಾಹರಣೆಗೆ ಒಂದು ಮದುವೆ ಸಮಾರಂಭಕ್ಕೆ ಸಾಗುವ ದಾರಿಯಲ್ಲಿ ಮಧ್ಯೆ ನಿಂತು ದಾರಿ ಬದಿಯಲ್ಲಿ ಮಾಡಲ್ಪಡುವ ಮೆಣಸಿನಕಾಯಿ ಬಜ್ಜಿಗಳನ್ನು ತಿನ್ನುವುದು ಅಲ್ಪರುಚಿಗೆ ಸೇರುವಂಥವು. ಪಂಚಪಕ್ಷ ಪರಮಾನ್ನಗಳನ್ನು ತಿನ್ನಲು ಸಾಗಿರುತ್ತಿರುವಾಗ ಒಂದು ಕ್ಷುಲ್ಲಕವಾದ ಹಾದಿ ಬದಿಯ ಬಜ್ಜಿಗಳನ್ನು ತಿನ್ನುವುದು.

ತಿಳಿವಿರುವರ ವರ್ತನೆಯೆನಿಸಿಕೊಳ್ಳದು.ಆದ್ದರಿಂದಲೇ ಮನುಷ್ಯನು ಅಲ್ಪರುಚಿ ಹಾಗೂ ಉನ್ನತ ರುಚಿಗಳ ಬಗ್ಗೆ ತಿಳಿದುಕೊಳ್ಳಬೇಕು. ಹಾಗೆಯೇ ಮನುಷ್ಯ ಆರಿಸಿಕೊಳ್ಳುವ ಗುರಿಗಳಲ್ಲಿ ಅಲ್ಪಲಕ್ಷ್ಯಗಳು ಉನ್ನತ ಲಕ್ಷ್ಯಗಳಿರುತ್ತವೆ. ಜೀವನದಲ್ಲಿ ಒಳ್ಳೆಯ ತಿರುವು ತರಬಲ್ಲ ಪರೀಕ್ಷೆಗೆ ಹಾಜರಾಗಬೇಕಾದ ದಿನ ಬೆಳಗ್ಗೆ ಪಕ್ಕದ ಮನೆಯ ಯಾವುದೋ ಸಮಾರಂಭಕ್ಕೆ ಹೋಗುವುದು ಉನ್ನತ ಗುರಿಯನ್ನು ಮರೆತು ಅಲ್ಪಗುರಿಯನ್ನು ಹಿಡಿಯುವುದೇ ಆಗುತ್ತದೆ. ಮಿತ್ರರೊಂದಿಗೆ ಬೆರೆತು ನಲಿಯುವುದು ಒಳ್ಳೆಯದೇ ಆದರೂ ಪರೀಕ್ಷೆಯ ದಿನ ಮಾತ್ರ ಪರೀಕ್ಷೆ ಬರೆಯುವುದೇ ಅತ್ಯಂತ ಅಗತ್ಯವಾದ ಪ್ರಧಾನ ಲಕ್ಷ್ಯವಾಗಿರಬೇಕು.

ಆದರೆ ಸಾಮಾನ್ಯವಾಗಿ ಮನುಷ್ಯನಲ್ಲಿ ಉನ್ನತ ರುಚಿ ಹಾಗೂ ಅಲ್ಪ ರುಚಿಯ ಮಧ್ಯೆ ಸ್ಪರ್ಧೆ ನಡೆದೇ ಇರುತ್ತದೆ. ಯಾರು ಈ ಸ್ಪರ್ಧೆಯಲ್ಲಿ ಉನ್ನತ ರುಚಿಗಳ ಕಡೆಗೆ, ಉನ್ನತ ಲಕ್ಷ್ಯಗಳ ಕಡೆಗೆವಾಲುತ್ತಾರೋ ಅವರೇ ಜೀವನದಲ್ಲಿ ವಿರಾಜಿಸುತ್ತಾರೆ. ಅವರೆ ತಮ್ಮ ಕುಟುಂಬಕ್ಕೆ, ಸಂಘಕ್ಕೆ, ರಾಷ್ಟ್ರಕ್ಕೆ, ದೇಶಕ್ಕೆ, ಹೆಸರು ಕೀರ್ತಿಗಳನ್ನು ತಂದು ಕೊಡುತ್ತಾರೆ. ಇದನ್ನು ಸಾಧಿಸುವ ವಿಷಯದಲ್ಲಿ ಭಗವದ್ಗೀತೆ (2-59) ಎಲ್ಲರಿಗೂ ಉತ್ತಮವಾದ ಸಂದೇಶವನ್ನು ಕೊಡುತ್ತದೆ.

''ಮನುಷ್ಯ ಇಂದ್ರಿಯ ಭೋಗಗಳಿಂದ ದೂರ ಸರಿದರೂ ಅವನ ರುಚಿ ''ಇಂದ್ರಿಯಾರ್ಥಗಳ ಮೇಲೆ ನಿಂತೇ ಇರುತ್ತದೆ. ಆದರೂ ಉತ್ತಮವಾದ ರಸಾನುಭೂತಿಯ ಮೂಲಕ ಆತನು ಅಂತಹ ಕಲಾಪಗಳನ್ನು ತೊರೆದು ಚೈತನ್ಯದಲ್ಲೇ ಸ್ಥಿರವಾಗಿರುತ್ತಾನೆ.

ಮದುವೆಯೂಟಕ್ಕೆ ಹೋಗುತ್ತಿರುವ ವ್ಯಕ್ತಿಗೆ ಹಾದಿ ಬದಿಯಲ್ಲಿನ ಮೆಣಸಿನ ಬಜ್ಜಿಯ ರುಚಿ ತಿಳಿದ್ದಿದರೂ, ಮನಸ್ಸು ನಾಲಿಗೆ ಆ ಕಡೆ ಸೆಳೆದರೂ ಆತನು ತಿಳುವಳಿಕೆಯಿಂದ ಮದುವೆಯೂಟವನ್ನು ನೆನೆಸಿಕೊಂಡು ರಸ್ತೆ ಬದಿಯ ತಿನಿಸನ್ನು ತೊರೆದು ಬಿಡಬೇಕು. ತಿಳುವಳಿಕೆ ಹೊಂದಿದವನು ಇದನ್ನು ಮಾಡುತ್ತಾನೆ. ಇದನ್ನೇ ಭಗವದ್ಗೀತೆಯಲ್ಲಿ "ಪರಂ ದೃಷ್ಟ್ವಾ ನಿವರ್ತತೇ'' ಅಂದರೆ ಉನ್ನತವಾದ ವಿಷಯಗಳ ಅನುಭೂತಿಯಿಂದ ಅಲ್ಪವಾದ ವಿಷಯಗಳಿಂದ ನಿವೃತ್ತರಾಗಬೇಕೆಂದು ಅರ್ಥ. ಹಾಗೆಯೇ ಜೀವನದಲ್ಲಿ ಒಳ್ಳೆಯ ತಿರುವನ್ನು ತೆರೆತಕ್ಕೆ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಯು ಮನೆಯಲ್ಲಿ ಎಷ್ಟೇ ದೊಡ್ಡ ಸಮಾರಂಭ ಜರುಗುತ್ತಿದ್ದರೂ ಅದನ್ನು ಹಿಡಿಸಿಕೊಳ್ಳದೇ ಉನ್ನತ ಲಕ್ಷ್ಯದೆಡೆಗೆ ಸಾಗಿ ಬಿಡುತ್ತಾರೆ ಯಾರು ಉನ್ನತ ಲಕ್ಷ್ಯಗಳನ್ನು ನಿರ್ಣಯಿಸಿಕೊಳ್ಳುತ್ತಾರೋ ಯಾರಿಗೆ ಉನ್ನತ ವಿಷಯಗಳಲ್ಲಿ ಆಸಕ್ತಿಯಿರುತ್ತದೋ ಅವರು ಅಲ್ಪವಾದ ವಿಷಯಗಳನ್ನು ಮರೆತು ಮುಂದೆ ಸಾಗುತ್ತಾರೆ. ಒಲಂಪಿಕ್ಸ್‌ನಲ್ಲಿ ಉನ್ನತವಾದ ಸ್ವರ್ಣ ಪದಕವನ್ನು ಸಾಧಿಸಬೇಕೆಂಬ ಲಕ್ಷ್ಯವಿರುವ ವ್ಯಕ್ತಿ ಎಲ್ಲಾ ಭೋಗಗಳನ್ನು ತೊರೆದು ದಿನಕ್ಕೆ ಕನಿಷ್ಠ 10 ಗಂಟೆಯವರೆಗೆ ಪ್ರಯತ್ನದಲ್ಲಿ ತೊಡಗುತ್ತಾರೆ. ನೋಬಲ್ ಪುರಸ್ಕಾರವನ್ನು ಹೊಂದಲು ಕನವರಿಸುವ ವ್ಯಕ್ತಿ ನಿರಂತರವಾಗಿ ಸಂಶೋಧನಾಲಯದಲ್ಲೇ ಇರುವುದಲ್ಲದೇ ಸತತ ಜ್ಞಾನಮಥನದಲ್ಲಿಯೇ ಮುಳುಗಿರುತ್ತಾನೆ. ಆಗಲೇ ಅವನು ಅದ್ಭುತವಾದ ವಿಜಯವನ್ನು ಸಾಧಿಸಬಲ್ಲವನಾಗುತ್ತಾನೆ. ಆದ್ದರಿಂದ ಯುವ ಜನರು ಅಲ್ಪವಾದ ವಿಷಯ ರುಚಿಗಳನ್ನು, ಅಲ್ಪವಾದ ವಿಷಯಗಳನ್ನು, ಕಂಡು ಆಕರ್ಷಿತರಾಗುತ್ತಿದ್ದಾರೆಂದರೆ ಅವರಿಗೆ ಉನ್ನತವಾದ ರುಚಿಗಳು, ಉನ್ನತವಾದ ಗುರಿಗಳು ಇಲ್ಲವೆಂದೇ ಅರ್ಥ. ಕೇವಲ ಹಿರಿಯರ ಸಹಕಾರದಿಂದ ಉತ್ತಮವಾದ ಲಕ್ಷ್ಯಗಳನ್ನು ಉತ್ತಮವಾದ ರುಚಿಗಳನ್ನು ಏರ್ಪಾಟು ಮಾಡಿಕೊಂಡ ಯುವಕ - ಯುವತಿಯರು. ತಾತ್ಕಾಲಿಕ ಪ್ರಲೋಭೆಗಳನ್ನು, ಆಕರ್ಷಣೆಗಳನ್ನು ಮೀರಿ ಜೀವನದಲ್ಲಿ ಮಹೋನ್ನತವಾದ ವಿಜಯಗಳನ್ನು ಸಾಧಿಸುತ್ತಾರೆ. ಆಟವಾಡುವ ಸಮಯದಲ್ಲಿ ಧ್ರುವನು ತಪಸ್ಸನ್ನು ಕೈಗೊಂಡು ಇಡೀ ಧ್ರುವಮಂಡಲವನ್ನೇ ಹೊಂದಿದ್ದಾನೆ.ಇದನ್ನೇ ಆದರ್ಶವಾಗಿಟ್ಟುಕೊಳ್ಳಬೇಕು. ಅಲ್ಪವಾದ ವಿಷಯಗಳೆಡೆ. ಮನಸ್ಸು ಪ್ರೇರೇಪಿಸಿದರೂ ಬುದ್ಧಿಯಿಂದ ಉನ್ನತವಾದ ಆದರ್ಶಗಳನ್ನು ಮಾದರಿಯಾಗಿಟ್ಟುಕೊಂಡು ಬಾಳುವುದೇ ಯುವಜನರ ಆದ್ಯ ಕರ್ತವ್ಯ.ಅದಕ್ಕಾಗಿ ಅವರಿಗೆ ಸಾಧು ಸಾಂಗತ್ಯ, ಅನುಭವಸ್ಥರ ಸಹವಾಸ, ಗೀತೋಪದೇಶಗಳು ತುಂಬಾ ಅಗತ್ಯವೆನಿಸುತ್ತವೆ.



# ಶ್ರೀ ವೈಷ್ಣವರ ಆನೆ ಹಬ್ಬ ವಿಶಿಷ್ಟ ಪೂಜೆ

**– ಶ್ರೀಮತಿ. ಕೆ.ವಿ. ಪದ್ಮಾವತಿ**

ಮೈಸೂರು ಪ್ರಾಂತ್ಯದ ಅಯ್ಯಂಗಾರರಲ್ಲಿ ಮಾತ್ರ ಈ ವಿಶಿಷ್ಟ ಪೂಜೆಯನ್ನು ಸೌರಮಾನ ಪದ್ಧತಿಯ ವೃಶ್ಚಿಕ ಮಾಸ ( ಕಾರ್ತೀಕ)ದ ಹುಣ್ಣಿಮೆಯಂದು ಆಚರಿಸಲಾಗುತ್ತದೆ. ಇದು ಪೌರಾಣಿಕ ಕತೆಗೆ ಜಾನಪದ ಆಧಾರದ ನಂಬಿಕೆಯ ಲೇಪನವನ್ನು ಹಚ್ಚಿರುವ ಪ್ರಕೃತಿ ಪೂಜೆಯ ಸಂಸ್ಕೃತಿ.

ಮದುವೆ ಮಾಡುವಷ್ಟೇ ಸಂಭ್ರಮದಿಂದ ಈ ಹಬ್ಬವನ್ನು ವೈಭವ ದಿಂದ ಮಾಡುವರು. ಭಾದ್ರಪದ ಮಾಸದ ಗಣೇಶ ಚತುರ್ಥಿಯನ್ನು ಆಚರಿಸಿದಂತೆ ಶ್ರೀವೈಷ್ಣವರು ವಿಷ್ಣುದೀಪದ ದಿನದಂದು ಗಜರಾಜನ ಮೃಣ್ಮಯ ಮೂರ್ತಿಯನ್ನು ಮಾಡಿ ದೀಪಾರಾಧನೆಯೊಂದಿಗೆ ವಿಶೇಷ ವಾಗಿ ಆಚರಿಸುವರು. ಶ್ರೀಮನ್ನಾರಾಯಣನು ಪರಂಜ್ಯೋತಿ ಸ್ವರೂಪನು. ಅವನ ಪ್ರತೀಕವಾಗಿ ಎಲ್ಲೆಲ್ಲೂ ಜ್ಯೋತಿ ಬೆಳಗಿಸಿ ಪೂಜಿಸುವುದರಿಂದ ಇದನ್ನು ವಿಷ್ಣುದೀಪ ಎಂದು ಕರೆಯುತ್ತಾರೆ.ಇನ್ನು ಮಹಾಲಕ್ಷ್ಮೀಯು ಜಗನ್ಮಾತೆಯಾಗಿ ದಿಗ್ಗಜಗಳಿಂದ ಅಮೃತಾಭಿಷೇಕ ಮಾಡಿಸಿಕೊಳ್ಳುವು ದರಿಂದ ಆಕೆಗೆ ಗಜಲಕ್ಷ್ಮೀ ಎಂಬ ಹೆಸರುಂಟು.

ಈ ಕೃತ್ತಿಕೋತ್ಸವದ ದಿನ ಲಕ್ಷ್ಮೀ ಸಹಿತ ನಾರಾಯಣನನ್ನು ಪೂಜಿಸುವುದರಿಂದ ಧನಧ್ಯಾನ ಸಮೃದ್ಧಿಯಾಗಿ ವಿಶೇಷ ಅನುಗ್ರಹವಾಗು ವುದೆಂಬ ನಂಬಿಕೆ ಇದೆ. ಮಹಾಭಾರತದ ಐತಿಹ್ಯದಂತೆ ಗಾಂಧಾರಿಯು ಮಣ್ಣಿನ ಗಜಲಕ್ಷ್ಮೀಯನ್ನು ಪೂಜೆ ಮಾಡುವುದರಿಂದ ಪ್ರಭಾವಿತಳಾಗಿ ಕುಂತಿದೇವಿಯು ಸಾಹಸಿಗಳಾದ ಭೀಮಾರ್ಜುನರ ಸಹಾಯದಿಂದ ಇಂದ್ರನ ಐರಾವತವನ್ನೇ ಭೂಮಿಗೆ ತರಿಸಿ ಪೂಜೆ ಮಾಡುತ್ತಾಳೆ. ಇದರ ಕುರುಹಾಗಿ ಈ ಆಚರಣೆ ಬಂದಿರಬಹುದು.

ಮೈಸೂರು ಕಡೆಯ ಅಯ್ಯಂಗಾರರು ತಮಿಳುನಾಡಿನ ಅವರ ಸಂಪ್ರದಾಯದ ಆಚರಣೆ ಮಾಡುತ್ತಾರೆ. ಆದರೆ ಇಲ್ಲಿಯೇ ಹುಟ್ಟಿ ಇಲ್ಲಿಯೇ ಬೆಳೆದ ಅವರಿಗೆ ದೇಶಾಚಾರ ಎಂದು ಒಂದು ಕಾರಣಕ್ಕೆ ಇದನ್ನು ಕಾರ್ತಿಕ ದೀಪೋತ್ಸವದ ಆಚರಣೆಯಲ್ಲಿ ಸೇರಿಸಿಕೊಳ್ಳಲಾಗಿದೆ. ಅಯ್ಯಂಗಾರರಲ್ಲಿ ವ್ರತಾಚರಣೆಗಳಿಲ್ಲ. ಸ್ಥಳೀಯ ಬ್ರಾಹ್ಮಣರೆಲ್ಲಾ ವ್ರತಗಳಾಚರಿಸುವಾಗ ಅವರಿಗೆ ತಾವು ಬೇರೆಯೇ ಪಂಗಡವಾಗಿ ದೂರ ನಿಲ್ಲುವುದು ಸರಿಯೆನಿಸದಿರ ಬಹುದು. ಹೀಗಾಗಿ ಲಕ್ಷ್ಮೀ ವ್ರತದಿಂದಲೂ ಕೆಲವು ಅಂಶಗಳನ್ನು ಅಳವಡಿಸಿ ಕೊಂಡು ಈ ಆನೆ ಹಬ್ಬ ರೂಢಿಗೆ ಬಂದಿದೆ ಅನ್ನಿಸುತ್ತದೆ.

ಇನ್ನು ಹಬ್ಬದ ಉದ್ದೇಶದಿಂದ ಲೋಕಕ್ಕೆಲ್ಲಾ ಸುಭಿಕ್ಷೆ ಬರಲೆಂದು ಬಯಸಿ ದೀಪ ಬೆಳಗಿಸುವಾಗ ಪ್ರಕೃತಿಯ ಪ್ರತಿನಿಧಿಯಾಗಿ ಮಣ್ಣಿನಲ್ಲಿ ಆನೆ ಮಾಡಿ, ದೈವತ್ವ ಆರೋಪಿಸಿ ಪೂಜಿಸಿ ಮನೆ ಬೆಳಗಲು ಬಂದ ಸೊಸೆಯಿಂದಲೆ ದೀಪ ಬೆಳಗಿಸಿ ಅವಳಿಗೆ ಉಡುಗೊರೆಯಿತ್ತು, ಪರಿಚಿತರನ್ನೆಲ್ಲ ಕರೆದು ಆರತಿ ಮಾಡಿ, ಹೊಸ ಸೊಸೆಯನ್ನು ಎಲ್ಲರಿಗೂ ಪರಿಚಯಿಸಿ ಗೌರವಿಸುವುದು ಇನ್ನೊಂದು ಉದ್ದೇಶ.

ಆನೆ ಹಬ್ಬ ಆಚರಿಸುವವರು ಹಿಂದೆ ಮಣ್ಣಿನ ಆನೆಯನ್ನು ಅಂಗಡಿಯಿಂದ ಖರೀದಿಸುತ್ತಿದ್ದರು. ಈಗ ಆನೆಗಳು ಮಾರಾಟಕ್ಕೆ ದೊರೆಯ ದಿರುವುದರಿಂದ ಕುಂಬಾರರಿಂದ ಅಚ್ಚಿನಲ್ಲಿ ನಿರ್ಮಿತವಾದ ಆನೆಯನ್ನು ಖರೀದಿಸಿ ತರುತ್ತಾರೆ. ಅದು ಸಿಗದಿದ್ದವರು ತಮ್ಮ ಮನೆಯಲ್ಲೇ ಮಣ್ಣಿನಲ್ಲಿ ಆನೆಯನ್ನು ನಿರ್ಮಿಸಿಕೊಳ್ಳುತ್ತಾರೆ. ಮಣ್ಣಿನ ಆನೆ ಸಿಗದ ಕೆಲವರು ಮನೆಯಲ್ಲಿರುವ ಬೆಳ್ಳಿ , ಹಿತ್ತಾಳೆ, ಮರದ ಆನೆಗಳನ್ನು ದೇವರ ಮುಂದಿಟ್ಟು ಪೂಜಿಸುತ್ತಾರೆ.

ಹೊಲದಿಂದ ತಂದ ಜೇಡಿ ಮಣ್ಣಿನಲ್ಲಿ ಆನೆ( ಗಂಡಾನೆ) ಮಾಡಿ, ಅದರ ಹಣೆಗೆ ತಮ್ಮದೇ ಆದ ಲಾಂಛನದ ನಾಮವಿಟ್ಟು ಅರಿಸಿನ ಕುಂಕುಮದಿಂದ ಪೂಜಿಸಿ ಶುಭ ವೇಳೆಯಲ್ಲಿ ಹಸೆಮಣೆಯ ಮೇಲಿರಿಸುತ್ತಾರೆ. ಪೂಜೆಗೆ ಸಿದ್ಧಪಡಿಸುವ ಆನೆಗೆ ದೇವರ ಮುಂದೆ ಫಲ ಪುಷ್ಪ, ಧೂಪ ಹಾರಗಳಿಂದ ಅಲಂಕರಿಸಿ, ಅದರ ಹೆಗಲ ಮೇಲೆ ಕೃಷ್ಣನ ವಿಗ್ರಹವನ್ನು ಇಡುತ್ತಾರೆ. ಎಲ್ಲ ತರಹದ ಆನೆಗಳನ್ನು ಅದರ ಜೊತೆಗೆ ಇರಿಸಿ ಪೂಜಿಸುತ್ತಾರೆ. ಬೆಳಗ್ಗೆ ಹಬ್ಬದಡಿಗೆ ಮಾಡಿ ನೈವೇದ್ಯ ಮಾಡುತ್ತಾರೆ. ಆನೆಗೆ ಪ್ರಿಯವಾದ ಗರಿಕೆಹುಲ್ಲು, ಬೆಲ್ಲ ಕಾಯಿ, ಕಬ್ಬಿನ ಚೂರು, ಅಕ್ಕಿಗಳನ್ನು ಮುಂದಿಟ್ಟು ಬಾಳೆಹಣ್ಣುಗಳನ್ನು ಮತ್ತು ಸಜ್ಜಪ್ಪ, ಸಿಹಿ ಅವಲಕ್ಕಿ ಜೊತೆಗೆ ಎರಯಪ್ಪ ಮುಂತಾದ ಭಕ್ಷ್ಯಗಳನ್ನು ಸಿದ್ಧಪಡಿಸಿ ನೈವೇದ್ಯ ಮಾಡುತ್ತಾರೆ. ಸಂಜೆ ಕಸಗುಡಿಸಿ ಒಟ್ಟು ಮಾಡುವ ಹಜಾರದ ಮೂಲೆಯನ್ನು ಶುಭ್ರಮಾಡಿ ರಂಗವಲ್ಲಿಯಿಟ್ಟು ಆ ಮೂಲೆಯಲ್ಲಿ ದೀಪಸ್ಥಂಭವಿಟ್ಟು ಪೂಜಿಸುತ್ತಾರೆ.



ಗಣೇಶನ ವಿಗ್ರಹ ವಿಸರ್ಜನೆ ಮಾಡುವಂತೆಯೇ ಈ ಆನೆಯನ್ನು ಮೂರನೆಯ ಇಲ್ಲವೇ ಐದನೆಯ ದಿನ ವಿಸರ್ಜಿಸುತ್ತಾರೆ. ಆನೆಯನ್ನು ಜಲಸ್ತಂಭನ ಮಾಡುವ ಮೊದಲು ಅದರ ಹೊಟ್ಟೆಗೆ ಮೊಸರನ್ನವನ್ನು ಲೇಪಿಸಿ "ರಾಜ್ಯದಲ್ಲಿ ಮಳೆ - ಬೆಳೆ ಚೆನ್ನಾಗಿ ಆಗಲಿ, ನದಿ ನೀರು ತುಂಬಿ ಹರಿಯಲಿ, ಭೂಮಿ ತಂಪಾಗಿರಲಿ ಎಂದು ಪ್ರಾರ್ಥಿಸಿ ಬಾಳೆಯ ತೋಟ ದಲ್ಲೋ, ಅವರೆಕಾಯಿ ಹೊಲದಲ್ಲೋ!ಅದೂ ಸಿಗದಿದ್ದಲ್ಲಿ ಗಿಡ ಮರಗಳ ಗುಂಪು ಇದ್ದಲ್ಲಿ ವಿಸರ್ಜಿಸುತ್ತಾರೆ. ಕಾಲ ಬದಲಾದಂತೆ ಇಂದು ಮನೆ ಯಂಗಳದಲ್ಲಿ ಬಗೆಟ್ ನೀರಿನಲ್ಲೇ ವಿಸರ್ಜಿಸಲಾಗುತ್ತದೆ. ನಂತರ ಹೊಳೆ ಯೂಟ ಹೊಳೆಯಲ್ಲದ್ದಿದ್ದರೆ ಕೆರೆ ಬದಿ. ಅದೂ ಇಲ್ಲದಿದ್ದರೆ ಮನೆಯಂಗಳ ಬಾವಿ ಇದ್ದರೆ ಅದರ ಬಳಿ ಕದಂಬ, ಮೊಸರನ್ನ, ಸಕ್ಕರೆ ಪೊಂಗಲ್‌ನ ಊಟ ಮಾಡುತ್ತಾರೆ.

ತವರು ಮನೆಯಿಂದ ಬರುವ ಸೊಸೆ ಹಿತ್ತಾಳೆಯ ಹಾಗೂ ಬೆಳ್ಳಿಯ ಆನೆಯನ್ನು ದೀಪದ ಒಂದು ಜೋಡಿ ಕಂಬಗಳನ್ನು ಆರತಿಗೆ ಬೇಕಾದ ವಸ್ತುಗಳನ್ನು ತರುತ್ತಾಳೆ. ಜೊತೆಗೆ ಸಜ್ಜಪ್ಪ ಅವಲಕ್ಕಿ ಪುರಿಉಂಡೆಗಳನ್ನು ತರುತ್ತಾಳೆ. ಅವಳಿಗೆ ಗಂಡನ ಮನೆಯಿಂದ ಅವರ ಶಕ್ತ್ಯಾನುಸಾರ ಉಡುಗೊರೆ ನೀಡಲ್ಪಡುತ್ತದೆ. ಆದ್ದರಿಂದ ಇದನ್ನು "ಸೊಸೆ ಹಬ್ಬ" ವೆಂದೂ ಕರೆಯುತ್ತಾರೆ.

ವಿಷ್ಣು ದೇವಾಲಯಗಳಲ್ಲಿ ದೊಡ್ಡದಾದ ಕೋಲು ಒಂದಕ್ಕೆ ಹೊಸ ಬಟ್ಟೆಯೊಂದನ್ನು ತುಪ್ಪದಲ್ಲಿ ಅದ್ದಿ ಗರುಡಗಂಭದ ಬಳಿ ಅದನ್ನು ಹೊತ್ತಿಸಿ ಉರಿಸುತ್ತಾರೆ. ಅದರ ಕರಿಯನ್ನು ಹಣೆಗೆ ರಕ್ಷೆಯೆಂದು ಹಚ್ಚಿಕೊಳ್ಳುತ್ತಾರೆ. ಒಟ್ಟಾರೆ ನಮ್ಮ ಮನಸ್ಸಿನ ರಾಕ್ಷಸ ಗುಣಗಳನ್ನು ದೂರವಾಗಿಸುವ ಪ್ರಕೃತಿಯ ಪೂಜೆ ಮಾಡಿ ಸರ್ವಮಂಗಳವನ್ನು ಪ್ರಾರ್ಥಿಸಿ ಕೋರುವ ಉದ್ದೇಶದಿಂದ ಈ ಹಬ್ಬ ರೂಪುಗೊಂಡಿದೆ ಎನ್ನಬಹುದು.

## ಗಜರಾಜನ ಬಗ್ಗೆ ಒಂದಷ್ಟು ಮಾಹಿತಿ:

ಜನ್ಮಜನ್ಮಾಂತರದ ಪ್ರತಿಪದಾನೆಯಲ್ಲಿ ಆನೆಯ ಜನ್ಮದ ನಂತರ ಜನ್ಮವೇ ಮನುಷ್ಯ ಜನ್ಮ ಎನ್ನುತ್ತಾರೆ. ಭಗವಂತನ ಷೋಡಶೋಪಚಾರದಲ್ಲಿ ಗಜಾರೋಹಣ ಇದೆ; ಇಂದ್ರನ ಐರಾವತ ಆನೆ. ಬುದ್ಧನಂತಹ ದಾರ್ಶನಿಕರನ್ನು ಗರ್ಭದಲ್ಲಿ ಹೊತ್ತ ಯಶೋಧರೆಯ ಸ್ವಪ್ನದಲ್ಲಿ ಗರ್ಭ ಪ್ರವೇಶ ಮಾಡಿದ್ದು ಆನೆ! ಇಂದೂ ಕೂಡ ಆನೆಯ ಸೊಂಡಲಿನಿಂದ ಹಾರ ಹಾಕಿಸಿಕೊಂಡು ಮಹನೀಯರು ಮೆರವಣಿಗೆ ಹೊರಡುವುದುಂಟು.

ಆನೆಯ ಸೊಂಡಿಲಿನಲ್ಲಿ ಅತಿ ಸೂಕ್ಷ್ಮತೆಯನ್ನು ಗ್ರಹಿಸುವ ಸಂವೇದನಾಶೀಲ ಸಾಮರ್ಥ್ಯವನ್ನು ಪಡೆದಿರುತ್ತದೆ. ಹಾಗೆಯೇ ಮರದ ದಿಮ್ಮಿಗಳಂತಹ ಬೃಹತ್ ಗಾತ್ರವನ್ನು ಭಾರವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಆನೆಯ ಸೊಂಡಿಲು ನೆರವಾಗುತ್ತದೆ. ಶಕ್ತಿ-ಯುಕ್ತಿಪೂರ್ಣವಾದ ಈ ಅಂಶದ್ವಯವು ಜವಾಬ್ದಾರಿಯುತ ಹೊಣೆಗಾರಿಕೆಯನ್ನು ನಿರ್ವಹಿಸುವ ನಾಯಕತ್ವಕ್ಕೆ ಅತಿ ಅವಶ್ಯವಾದ ಲಕ್ಷಣವೂ ಹೌದು, ಗುಣವೂ ಹೌದು.

ಆನೆಯು ಜೀವಿವೈವಿಧ್ಯ ಸಂಕುಲದ ಅತ್ಯಂತ ಮಹತ್ವದ ಪ್ರಾಣಿ, ಕಾಡಿನ ಇತರ ಸಸ್ಯಾಹಾರಿ ಪ್ರಾಣಿಗಳಾದ ಕಾಟಿ, ಕಡವೆ, ಜಿಂಕೆ ಇತ್ಯಾದಿಗಳ ಜೀವನೋಪಾಯ ಬಹುಪಾಲು ಆನೆಯನ್ನೇ ಅವಲಂಭಿಸಿದೆ. 'ಆನೆ ತುಳಿದದ್ದೇ ಹಾದಿ' ಎಂಬ ಮಾತು ಪ್ರಚಲಿತದಲ್ಲಿದೆ. ಆನೆ ಹಿಂಡು ನಡೆದು ಹೋದ ಕಾಡಿನಲ್ಲಿ ಇತರ ಶಾಖಾಹಾರಿ ಪ್ರಾಣಿಗಳು ಹಿಂಬಾಲಿಸಿ ಆಹಾರ ದೊರಕಿಸಿಕೊಳ್ಳುವಲ್ಲಿ ಪ್ರಯೋಜನ ಪಡೆಯುತ್ತವೆ. ಆನೆಗಳು ತಮ್ಮ ಲದ್ದಿಯಿಂದ ಕಾಡಿನ ಫಲವತ್ತತೆ ಹೆಚ್ಚಿಸುವಲ್ಲಿಯೂ ಕಾರಣವಾಗಿವೆ. ಹೀಗಾಗಿ ಆನೆಯನ್ನು 'ಜೀವಿ ವೈವಿಧ್ಯದ ನೆತ್ತಿಗಲ್ಲು" ಎಂದು ಕರೆಯಲಾಗಿದೆ. ಆನೆ ಸಮಾಜ ಮತ್ತು ಮಾನವ ಸಮಾಜದ ಮಧ್ಯೆ ಹಲವಾರು ವಿಷಯಗಳಲ್ಲಿ ಸಾಮ್ಯ ಕಂಡು ಬರುತ್ತದೆ. ಆನೆಯ ಹಿಂಡು 'ಮಾತೃ ಯಾಜಮಾನ್ಯ' ಎನಿಸಿದ ಹೆಚ್ಚು ಅನುಭವವುಳ್ಳ ಅತ್ಯಂತ ಹಿರಿಯ ಹೆಣ್ಣಾನೆ 'ಹೆಗ್ಗಡತಿ'ಯಿಂದ ವ್ಯವಹರಿಸಲ್ಪಡುತ್ತದೆ. ಆನೆಗಳಲ್ಲಿ ಮನುಷ್ಯ ಕುಲದಲ್ಲಿರುವಂತೆ ತೀರಾ ಹತ್ತಿರದ ಸಂಬಂಧಿಗಳೊಡನೆ ರತಿ ಕ್ರೀಡೆಗೈದು ಸಂತಾನಾಭಿವೃದ್ಧಿಯು ನಿಷಿದ್ಧವಾಗಿದೆ.

ಮಾನವ ಹಾಗೂ ಆನೆಯ ಮಧ್ಯೆ ಕಂಡು ಬರುವ ಹೋಲಿಕೆಯನ್ನು ದೃಢೀಕರಿಸಲು ಆನೆ ರುಂಡ ಹೊತ್ತ ಮಾನವ ದೇಹವುಳ್ಳ ಗಣೇಶನನ್ನು ಹುಟ್ಟು ಹಾಕಿರಬಹುದು ಎಂದು ತೋರುತ್ತದೆ. ಆನೆಯು ನಡೆಯುವ ಭಂಗಿಯೇ ಒಂದು ವಿಶೇಷ ಹಾವಭಾವಗಳಿಂದ ಬಳುಕುತ್ತ ನಡೆಯುವ ಆನೆಯ ದೇಹಭಾಷೆ ಅದಕ್ಕೆ ಭೂಷಣ. ಅದು ನೋಡುವವರಿಗೆ ಮನಮೋಹಕ . ಇಂಥಾ ಮೋಹಕ ನಡೆಯುಳ್ಳ ಸ್ತ್ರೀಯನ್ನು ಗಜಗಾಮಿನಿ ಎಂದು ಭಾವನಾತ್ಮಕವಾಗಿ ವರ್ಣಿಸುತ್ತದೆ ಕವಿ ಸಮಯ.

ಇನ್ನೊಂದು ಆಸಕ್ತಿ ಕೆರಳಿಸುವ ವಿಷಯವೆಂದರೆ ಆನೆಗಳು ನೀರು ಹತ್ತಿರವಿರುವ ಜಾಗದಲ್ಲಿ ಅಥವಾ ಅಜ್ಞಾತ ಸ್ಥಳಗಳಿಗೆ ತಮ್ಮ ಕೊನೆಯುಸಿರೆಳೆಯಲು ಹೋಗುವುದೆಂಬ ನಂಬುಗೆ ಇದೆ. ಕಾಡಿನಲ್ಲಿ ನಿಸರ್ಗವು ಶವಗಳನ್ನು ಸಾಗಹಾಕುವ ತನ್ನದೇ ಆದ ವಿಧಿ ವಿಧಾನಗಳನ್ನು ಹೊಂದಿದೆ. ಇದು ಅತಿ ಕ್ಷಿಪ್ರದಲ್ಲೇ ನಡೆದು ಹೋಗುವುದು.



# ಮುಕ್ತಿಗಾಥೆ ತಿರುಪ್ಪಾವೈ

– ಶ್ರೀಮತಿ. ಸುಮ ಚಂದ್ರಶೇಖರ್





ಧನುರ್ಮಾಸ ಬಂದರೆ ಸಾಕು. ದಕ್ಷಿಣ ಭಾರತದಲ್ಲಿ ಲಕ್ಷಾಂತರ ತುಟಿಗಳ ಮೇಲೆ ಬೆಳಗಿನ ಜಾವದಲ್ಲಿ ಭಕ್ತಿಯಿಂದ ಕೇಳಿಸುವ ಈ ದಿವ್ಯ ಪ್ರಬಂಧವು ಒಂದು ತಮಿಳು ರಚನೆಯಾಗಿದ್ದರೂ ಸಹ ಎಷ್ಟೋ ಪ್ರಚಾರ, ಪ್ರಾಶಸ್ತ್ಯವನ್ನು ಪಡೆದಿದೆ. ಭಗವಂತನನ್ನು ಧನ್ಯ ಪೂರ್ವಕ ಆರಾಧನೆಗೆ ಸಾಕ್ಷಿಯಾಗಿ ನಿಂತಿದೆ.

ನಮ್ಮ ಚರಿತ್ರೆಯ ಪುಟಗಳನ್ನು ತೆರೆದಾಗ, ನಮ್ಮ ಬಹು ಧರ್ಮಗಳ ಸಂಸ್ಕೃತಿಯು ಕಾಲಾನುಕಾಲಕ್ಕೆ ಬೇರೆ ಬೇರೆ ಸಂಸ್ಕೃತಿಗಳೊಂದಿಗೆ ಸಮಾಜವನ್ನು ಮುನ್ನಡೆಸಿರುವುದು ತಿಳಿಯುತ್ತದೆ. ಧಾರ್ಮಿಕ ನಾಯಕರು ಹೀಗೆ ಧರ್ಮಪ್ರಸಾರ ಮಾಡುತ್ತ ತಮ್ಮತಮ್ಮ ನಂಬಿಕೆಯ ತತ್ತ್ವಗಳೊಂದಿಗೆ ಬದುಕಿ ಆದರ್ಶ ವ್ಯಕ್ತಿಗಳೆನಿಸಿಕೊಂಡಿದ್ದಾರೆ. ಅಂತೆಯೇ ಶ್ರೀ ವೈಷ್ಣವರಲ್ಲಿ 'ಆಳ್ವಾರ್ ಗಳೆಂಬ ಸಂತರು ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಇದ್ದ ಸಂತ ಕವಿಗಳು, ನಾರಾಯಣನ ಪರಮಭಕ್ತರಾಗಿ ತಮ್ಮ ಇಡೀ ಜೀವನವನ್ನು ಅವನ ಆರಾಧನೆಯಲ್ಲಿಯೇ ಕಳೆಯುತ್ತ ಭಕ್ತಿ ಪಂಥವನ್ನು ಸ್ವೀಕರಿಸಿ ಜನರಲ್ಲಿ ತಮ್ಮ ಭಕ್ತಿ ಸಾಹಿತ್ಯದ ಮೂಲಕ ಧರ್ಮ ಜಾಗೃತಿಯನ್ನು ಉಂಟು ಮಾಡಿದವರು. ಇವರು ಹನ್ನೆರಡು ಮಂದಿ ಸಂತರು. ಇವರಲ್ಲಿ ಏಕಮಾತ್ರ ಮಹಿಳೆಯೇ 'ಆಂಡಾಳ್ ಈಕೆ ರಚಿಸಿ ಕೃಷ್ಣನಿಗೆ ಅರ್ಪಿಸಿದ ರಚನೆಯೇ 'ತಿರುಪ್ಪಾವೈ' ಎಂಬ ತಮಿಳುನಾಡಿನಲ್ಲಿ ಮಾತ್ರವಲ್ಲದೆ ಎಲ್ಲ ಶ್ರೀ ವೈಷ್ಣವರಿಗೆ ಪರಮ ಪೂಜ್ಯವೂ, ಪ್ರಿಯವೂ ಆದ ಭಕ್ತಿ ಸಾಹಿತ್ಯ ಮೂವತ್ತು ಪದ್ಯಗಳ ಹಾಡುಗಳ ಈ ಗೀತಗುಚ್ಛ ಎಲ್ಲ ವಿಷ್ಣು ದೇವಾಲಯಗಳಲ್ಲಿ ಹಾಡುವ ಭಕ್ತಿ ಕುಸುಮ. ಮಾರ್ಗಶಿರ ಮಾಸದ ಎಲ್ಲ ಮೂವತ್ತು ದಿನಗಳಲ್ಲಿಯೂ ಯಾವುದೇ ವಿಷ್ಣು ದೇವಾಲಯಕ್ಕೆ ಹೋದರೂ ಈ ತಿರುಪ್ಪಾವೈ ಹಾಡುಗಳನ್ನು ಹಾಡುತ್ತಿರುವುದನ್ನು ಕಾಣುತ್ತೇವೆ. ಇವು ಗಳನ್ನು ರಚಿಸಿದ ಆಂಡಾಳ್ ಅಥವಾ ಗೋದಾದೇವಿ ಸಾಕ್ಷಾತ್ ಭೂದೇವಿಯ ಅವತಾರವೆಂದೇ ಹೇಳಲಾಗುತ್ತದೆ. ನಾಚ್ಚಿಯಾರ್, ಕೋದೈ ಎಂಬ ಹೆಸರುಗಳಿಂದಲೂ ಈಕೆ ತಮಿಳುನಾಡಿನ ಸಂತರಲ್ಲಿ ಪ್ರಮುಖಳೆನಿಸಿದವಳು.ತನ್ನ ಸ್ವಾಮಿಯಾದ ಮಹಾವಿಷ್ಣುವನ್ನು ಕುರಿತು ಸ್ತುತಿಸಿರುವ ಮೂವತ್ತು ಹಾಡುಗಳಲ್ಲಿ ಪ್ರತಿಯೊಂದು ಅಂದರೆ ಈ ಮಾರ್ಗಶಿರ ಮಾಸದ ಮೂವತ್ತು ದಿನಗಳಿಗೆ ಒಂದೊಂದರಂತೆ ಮುಡಿಪಾಗಿವೆ. ಎಲ್ಲವೂ ವೈಷ್ಣವ

ಧರ್ಮದ ತತ್ತ್ವಗಳಿಗೆ ಸಂಬಂಧಿಸಿದ ವಿಚಾರಗಳನ್ನು ಒಳಗೊಂಡಿವೆ. ಮೋಕ್ಷ ಸಾಧನೆಗೆ ಸಹಾಯಕವಾದ ಭಕ್ತಿ ಸಾಹಿತ್ಯವಾಗಿ ಇವುಗಳು ಪೂಜ್ಯವೆನಿಸಿವೆ.

ಯಾರು ಈ ಆಂಡಾಳ್? ತಮಿಳುನಾಡಿನ ವಿರುದ್ಧನಗರ ಜಿಲ್ಲೆಯಲ್ಲಿ ಶ್ರೀ ವಿಲ್ಲಿಪುತ್ತೂರ್ ಎಂಬುದು ಒಂದು ಸಣ್ಣ ಊರು. ಅಲ್ಲಿ ವಿಷ್ಣುಚಿತ್ತ ಎಂಬ ವಿಷ್ಣುಭಕ್ತ. (ಆತನನ್ನು ಗರುಡನ ಅವತಾರವೆಂದೂ ಹೇಳುತ್ತಾರೆ.) ವೇದಪಾರಂಗತನೂ ಕವಿಯೂ ಆಗಿದ್ದ ಈತ ಊರಿನ ದೇವಾಲಯದಲ್ಲಿ 'ವಟಪತ್ರ ಶಾಯಿ' ಶ್ರೀಮನ್ನಾರಾಯಣನ ಪರಮಭಕ್ತನೂ ಆಗಿದ್ದ. ತನ್ನದೇ ಒಂದು ಪುಷ್ಪೋದ್ಯಾನವನ್ನು ನಿರ್ಮಿಸಿಕೊಂಡಿದ್ದು, ಪ್ರತಿದಿನ ಅಲ್ಲಿನ ತುಳಸೀದಳಗಳಿಂದ ಮಾಲೆ ಮಾಡಿ ದೇವರಿಗೆ ಅರ್ಪಿಸುವುದು ಅವನ ನಿತ್ಯದ ಸೇವೆಯಾಗಿತ್ತು. ಮಕ್ಕಳಿಲ್ಲದ ವಿಷ್ಣುಚಿತ್ತನಿಗೆ ಒಂದು ದಿನ ಅವನ ಹೂತೋಟದಲ್ಲಿ ತುಳಸೀ ಗಿಡದ ಬಳಿ ಒಂದು ಹೆಣ್ಣು ಮಗು ಮಲಗಿರುವುದು ಕಂಡು ಬರುತ್ತದೆ.ದೇವರೇ ಕರುಣಿಸಿದನೆಂದು ಅತ್ಯಂತ ಸಂತೋಷದಿಂದ ಆ ಮಗುವನ್ನು ಎತ್ತಿಕೊಂಡು ಮನೆಗೆ ಹೋಗುತ್ತಾನೆ. ಕೋದೈ ಎಂದು ಅವಳಿಗೆ ಹೆಸರಿಡುತ್ತಾನೆ. ತಮಿಳಿನಲ್ಲಿ ಅದರ ಅರ್ಥ "ಭೂಮಿ ತಾಯಿಯ ಕೊಡುಗೆ'' ಎಂದು. ಈಕೆಯೇ ಮುಂದೆ ಗೋದಾದೇವಿ ಎಂದೂ ಪ್ರಸಿದ್ಧಳಾದಳು.

ಭಗವಂತನಲ್ಲಿ ಭಕ್ತಿ ಮತ್ತು ಪ್ರೀತಿಯ ಪರಿಸರದಲ್ಲಿ ವಿಷ್ಣುಚಿತ್ತ ಮಗುವನ್ನು ಬೆಳೆಸುತ್ತಾನೆ. ಮಗು ಬೆಳೆಯುತ್ತ ಹೋದಂತೆ ಅದರ ಭಕ್ತಿ ಭಾವವೂ ಬೆಳೆದು ಹದಿವಯಸ್ಸಿಗೆ ಬಂದಾಗ ರಂಗನಾಥಸ್ವಾಮಿಯನ್ನೇ (ಶ್ರೀರಂಗದ) ವಿವಾಹವಾಗುವೆನೆಂದು ನಿರ್ಧರಿಸುವಷ್ಟು ಗಟ್ಟಿಯಾಗುತ್ತದೆ. ಬಾಲ್ಯಸಹಜವಾದ ಸುಕುಮಾರ ಭಾವ, ಹುಡುಗುತನದ ಮುಗ್ಧ ಮನಸ್ಸು ಎಲ್ಲವೂ ಹಂತಹಂತವಾಗಿ ಪ್ರಬುದ್ಧವಾಗುತ್ತ ಹೋಗುತ್ತದೆ. ಶ್ರೀಮನ್ನಾರಾಯಣ, ವಟಪತ್ರಶಾಯಿಯನ್ನು ಆಕೆ ಆರಾಧಿಸುವ ರೀತಿಯೇ ವಿಶಿಷ್ಟವಾಗಿರುತ್ತದೆ. ತನ್ನ ತಂದೆ ಸಿದ್ಧಪಡಿಸುತ್ತಿದ್ದ ತುಳಸೀಮಾಲೆಯನ್ನು ಕಂಡು ಒಂದು ದಿನ ಅವಳಲ್ಲಿ ಒಂದು ಆಲೋಚನೆ ಮೂಡುತ್ತದೆ. "ನಾನು ಆ ನಾರಾಯಣನಿಗೆ ಸೂಕ್ತವಾದ ವಧುವಾಗುತ್ತೇನೆಯೇ? ಈ ತುಳಸೀ ಮಾಲೆಯನ್ನು ನಾನು ಹಾಕಿಕೊಂಡು ಹೇಗೆ ಕಾಣುತ್ತೇನೆಂದೂ ದರ್ಪಣದಲ್ಲಿ ನೋಡಿಕೊಳ್ಳುತ್ತೇನೆ'' ಎಂದು ಮನದಲ್ಲಿ ಯೋಚಿಸಿ ತುಳಸೀ ಮಾಲೆಯನ್ನು ಧರಿಸಿ ತನ್ನನ್ನು ನೋಡಿಕೊಂಡು ತೃಪ್ತಳಾಗಿ, ತೆಗೆದಿಟ್ಟು ಬಿಡುತ್ತಾಳೆ. ಇದನ್ನು ತಿಳಿಯದ ವಿಷ್ಣುಚಿತ್ತ ಆ ಮಾಲೆಯನ್ನೇ ವಟಪತ್ರಶಾಯಿಗೆ ಅರ್ಪಿಸುತ್ತಾನೆ. ಇದು ಹಲವು ದಿನಗಳವರೆಗೆ ಮುಂದುವರಿಯುತ್ತದೆ. ಆದರೆ, ಒಂದು ದಿನ ಮಗಳು ತುಳಸೀ ಮಾಲೆಯನ್ನು ಧರಿಸುತ್ತಿರುವುದನ್ನು ಕಂಡ ವಿಷ್ಣುಚಿತ್ತ ಸಿಟ್ಟು ಮತ್ತು ಅಸಮಾಧಾನದಿಂದ ಮಗಳು ಮಾಡಿದ್ದು ತಪ್ಪೆಂದು ತಿಳಿಯಹೇಳಿ ಉಪವಾಸವಿದ್ದು ಆ ದಿನ ದೇವರಿಗೆ ಮಾಲೆಯನ್ನು ಅರ್ಪಿಸಲಾಗದೆ ಹಾಗೆ ಉಳಿಯುತ್ತಾನೆ. ಆದರೆ ರಾತ್ರಿ ಕನಸಿನಲ್ಲಿ ನಾರಾಯಣನು ಅವನಿಗೆ ಕಾಣಿಸಿ ಮಾಲೆಯನ್ನೇಕೆ ತರಲಿಲ್ಲವೆಂದು ಕೇಳಿದ್ದಲ್ಲದೆ, ಅವನ ಮಗಳು ಧರಿಸಿ ನೀಡಿದ ಮಾಲೆ ತನಗೆ ಪ್ರಿಯವಾದುದೆಂದೂ, ಪ್ರತಿದಿನ ಅವಳಿಗೆ ಹಾಕಿದ ನಂತರವೇ ತನಗೆ ಅರ್ಪಿಸಬೇಕೆಂದೂ ಆದೇಶಿಸುತ್ತಾನೆ.

ಆಶ್ಚರ್ಯ ಹಾಗೂ ಸಂತೋಷದಿಂದ ವಿಷ್ಣುಚಿತ್ತ ಅದರಂತೆಯೇ ನಡೆದುಕೊಳ್ಳುತ್ತಾನೆ. ಆ ದಿನದಿಂದ ಗೋದಾದೇವಿ (ಕೋದೈ) 'ಆಂಡಾಳ್' ಎಂಬ ಹೆಸರನ್ನು ಹೊಂದುತ್ತಾಳೆ. ಅಂದರೆ ಭಗವಂತನನ್ನು ಆಳಿದವಳು' ಎಂದರ್ಥ.






ಮಗಳು ಆಂಡಾಳ್, ಮಧು ಮಗಳಾಗುವ ವಯಸ್ಸಿಗೆ ಬಂದಾಗ ವಿಷ್ಣುಚಿತ್ತ ವಿವಾಹ ಪ್ರಸ್ತಾಪ ಮಾಡಿದಾಗ ತಾನು ರಂಗನಾಥಸ್ವಾಮಿಯನ್ನೇ ಮದುವೆಯಾಗುವುದಾಗಿ ಹೇಳುತ್ತಾಳೆ. ವಿಷ್ಣುಚಿತ್ತನಿಗೆ ಕನಸಿನಲ್ಲಿ ದರ್ಶನ ನೀಡಿದ ನಾರಾಯಣ ಮಗಳನ್ನು ವಧುವಾಗಿ ಸಿಂಗರಿಸಿ ಶ್ರೀರಂಗದ ರಂಗನಾಥಸ್ವಾಮಿ ದೇವಾಲಯಕ್ಕೆ ಕಳುಹಿಸುವಂತೆ ಆದೇಶ ನೀಡುತ್ತಾನೆ. ಅದೇ ಸಮಯದಲ್ಲಿ ದೇವಾಲಯದ ಅರ್ಚಕನಿಗೂ ಕನಸಿನಲ್ಲಿ ಕಾಣಿಸಿಕೊಂಡು ಮದುವೆಯ ಸಿದ್ಧತೆ ಮಾಡಲು ಆದೇಶಿಸುತ್ತಾನೆ.ಆಗ, ಅಲ್ಲಿ ದೊರೆಯಾಗಿದ್ದ ವಲ್ಲಭದೇವನಿಗೂ ಕನಸಿನಲ್ಲಿ ದರ್ಶನ ನೀಡಿ ಮದುಮಗಳಾದ ಆಂಡಾಳ್ ಕರೆತರಲು ಪಲ್ಲಕ್ಕಿಯನ್ನು ಕಳುಹಿಸುವಂತೆ ಸೂಚಿಸುತ್ತಾನೆ. ಎಲ್ಲ ಸಿದ್ಧತೆಗಳೂ ನಡೆದು ಸಕಲ ವೈಭವದೊಂದಿಗೆ ಪಲ್ಲಕ್ಕಿಯಲ್ಲಿ ಕುಳಿತು ರಂಗನಾಥಸ್ವಾಮಿಯ ದೇವಾಲಯವನ್ನು ತಲುಪಿದ ಆಂಡಾಳ್ ಎಲ್ಲರೂ ನೋಡುತ್ತಿರುವಂತೆಯೇ ಒಳಗೆ

ಪ್ರವೇಶಿಸಿ, ಗರ್ಭಗುಡಿಯನ್ನು ಹೊಕ್ಕು ರಂಗನಾಥನ ಪಕ್ಕದಲ್ಲಿ ಆಸೀನಳಾಗಿ ಐಕ್ಯವಾಗಿ ಬಿಡುತ್ತಾಳೆ.

ಇದು ಗೋದಾದೇವಿಯು, ಆಂಡಾಳ್ ಆಗಿ ನಾರಾಯಣನನ್ನು ಸೇರಿದ ಕಥೆ. ಈಕೆ ತನ್ನ ಭಕ್ತಿಯನ್ನು ವ್ಯಕ್ತಪಡಿಸುವುದಕ್ಕಾಗಿ ರಚಿಸಿ ಅರ್ಪಿಸಿದ ಗೀತಗುಚ್ಛವೇ 'ತಿರುಪ್ಪಾವೈ' ಎಂಬ ಭಕ್ತಿ ಸಾಹಿತ್ಯ. ಶ್ರೀ ಕೃಷ್ಣನೇ ಆಗಿರುವ ಮಾರ್ಗಶಿರ ಮಾಸದಲ್ಲಿನ ಪ್ರತಿಯೊಂದು ಪವಿತ್ರ ದಿನವನ್ನು ಅವನ ಆರಾಧನೆಗಾಗಿ ಮುಡಿಪಾಗಿಟ್ಟು ದಿನಕ್ಕೊಂದು ರಚಿಸಿ ಸಮರ್ಪಿಸಿದ ಸಂಕಲನವೇ ತಿರುಪ್ಪಾವೈ.

ತಿರುಪ್ಪಾವೈನ ಮೂವತ್ತು ಭಕ್ತಿಗೀತೆಗಳಲ್ಲಿ ಆಂಡಾಳ್ ಮಹಾವಿಷ್ಣುವಿನ ಮಹಿಮೆಯನ್ನು ತಿಳಿಸಿದ್ದಾಳೆ. ಇವುಗಳನ್ನು ಪ್ರತಿದಿನ ಪಠಿಸುವುದರಿಂದ ಮೋಕ್ಷ ಸಾಧನೆಗೆ ಸಹಕಾರಿ ಎಂಬುದು ವಿಷ್ಣುಭಕ್ತರ ನಂಬಿಕೆ. ಮಹಾವಿಷ್ಣುವಿನ ಮಾಸವಾದ ಮಾರ್ಗಶಿರದಲ್ಲಿ ಈ ಹಾಡುಗಳ ಪಠನ ಮಾಡುತ್ತಾ (ದೇವಾಲಯದಲ್ಲಾಗಲೀ, ಮನೆಯಲ್ಲಾಗಲೀ) ಆಧ್ಯಾತ್ಮಚಿಂತನೆಯಲ್ಲಿ ತೊಡಗುತ್ತಾರೆ. ಪರಮಾತ್ಮನ ಕೃಪೆಗೆ ಪಾತ್ರರಾಗಲು ಬಯಸುತ್ತಾರೆ. ಲೌಕಿಕ ಚಿಂತನೆಗಳನ್ನು ತ್ಯಜಿಸಿ ಲೋಕದ ಶಾಂತಿಗಾಗಿ ಪ್ರಾಮಾಣಿಕವಾಗಿ ಪ್ರಾರ್ಥನೆಯನ್ನು ಸಲ್ಲಿಸಬೇಕೆಂದು ಈ ಗೀತೆಗಳು ಹೇಳುತ್ತದೆ.

'ತಿರುಪ್ಪಾವೈ'ನಲ್ಲಿರುವ ಮೂವತ್ತು ರಚನೆಗಳನ್ನು ನಾಲ್ಕು ಗುಂಪುಗಳಾಗಿ ವಿಭಾಗಿಸಲಾಗಿದೆ. ಮೊದಲ ಐದು ಗೀತೆಗಳು ಪೀಠಿಕೆಯ ರೂಪದಲ್ಲಿದ್ದು ಶ್ರೀಕೃಷ್ಣನನ್ನು ಪ್ರಾಮಾಣಿಕವಾದ ಪ್ರಾರ್ಥನೆಯೊಂದಿಗೆ ಲೋಕಕಲ್ಯಾಣಕ್ಕಾಗಿ ಬೇಡುತ್ತ ಭಕ್ತಿಯಿಂದ ಪುಷ್ಪಗಳನ್ನು ಅರ್ಪಿಸಿದರೆ ಅವರು ಹಿಂದೆ ಮಾಡಿದ ಪಾಪ ಕೃತ್ಯಗಳ ಫಲದಿಂದ ದೂರವಾಗುವುದಲ್ಲದೆ, ಮುಂದಿನ ದಿನಗಳಲ್ಲಿ ಕೂಡ ಅಂತಹ ಕೆಲಸಗಳನ್ನು ತೋರುವ ಅನುಗ್ರಹದ ಪರಿಯನ್ನು ತಿಳಿಸುತ್ತದೆ.

ಮುಂದಿನ ಹತ್ತು ಗೀತೆಗಳು ಭಗವಂತನ ಆರಾಧನೆಯನ್ನು ಸಾಮೂಹಿಕವಾಗಿ ಮಾಡುವುದರಲ್ಲಿನ ಹಿರಿಮೆಯನ್ನು ವ್ಯಕ್ತ ಪಡಿಸುತ್ತದೆ. ಆಂಡಾಳ್ ತನ್ನ ಗೆಳತಿಯರನ್ನೆಲ್ಲ ಕೃಷ್ಣ ಭಕ್ತಿಯಲ್ಲಿ ಲೀನಗೊಳಿಸುವ ಕಾರ್ಯದಲ್ಲಿ ತೊಡಗುತ್ತಾಳೆ. ಪ್ರತಿಯೊಂದು ಮನೆಗೂ ಹೋಗಿ ಕೃಷ್ಣನ ಮಹಿಮೆಯನ್ನು ತಿಳಿಸಿ ತನ್ನೊಂದಿಗೆ ಕರೆದೊಯ್ಯುತ್ತಾಳೆ. ಹೂಗಳನ್ನು ಸಂಗ್ರಹಿಸಲು ಪ್ರೇರೇಪಿಸುತ್ತಾಳೆ. ತನ್ನೂರಿನ ಪರಿಸರದಲ್ಲಿ ಪ್ರಾಕೃತಿಕ ಸೌಂದರ್ಯದ ವರ್ಣನೆಯನ್ನೂ ಇಲ್ಲಿ ನೀಡುತ್ತಾಳೆ. ಹಕ್ಕಿಗಳ ಕಲರವ, ಅರಳಿರುವ ಬಣ್ಣ ಬಣ್ಣದ ಹೂಗಳು. ಮನೆಗಳಲ್ಲಿ ಹೆಣ್ಣು ಮಕ್ಕಳು ಮೊಸರು ಕಡೆಯುತ್ತಿರುವ ಶಬ್ದ, ಸಂಜೆಯ ವೇಳೆ ಗೋವುಗಳು ಹಿಂತಿರುಗುವ ದೃಶ್ಯವೈಭವ, ದೇವಾಲಯಗಳಲ್ಲಿ ಘಂಟೆಗಳು ಮೊಳಗುವಾಗ ಮಧುರವಾದ ಎಲ್ಲದರ ವಿವರ ಇಲ್ಲಿ ಬರುತ್ತದೆ.

ನಂತರದ ಐದು ಗೀತೆಗಳಲ್ಲಿ ಆಂಡಾಳ್ ಆಕೆ ರಂಗನಾಥನ ಮಂದಿರಕ್ಕೆ ತನ್ನ ಗೆಳತಿಯರೊಂದಿಗೆ ಹೋಗಿದ್ದು, ತಮ್ಮ ಸುಪ್ರಭಾತದೊಂದಿಗೆ ಅವನನ್ನು ಎಚ್ಚರಿಸಲು ಆಶಿಸಿದ್ದು, ಅದಕ್ಕಾಗಿ ತಮ್ಮನ್ನು ಒಳಗೆ ಪ್ರವೇಶಿಸಿ ಅವಕಾಶ ನೀಡಲು ಮಂದಿರದ ಕಾವಲಿನವನನ್ನು ಎಲ್ಲರೂ ಪ್ರಾರ್ಥಿಸಿದ ಮಂದಿರ ಪ್ರವೇಶ ಮಾಡಿ ಮಲಗಿರುವ ಕೃಷ್ಣ ಬಲರಾಮರನ್ನು ಎಚ್ಚರಗೊಳಿಸಲು ಅವರ ತಾಯ್ತಂದೆಯನ್ನು ಬೇಡಿದ್ದು, ನಂತರ ನೀಲಾದೇವಿಯನ್ನು ಪ್ರಾರ್ಥಿಸುತ್ತ ಕೃಷ್ಣದರ್ಶನ ಪಡೆಯಲು ಅನುವು ಮಾಡುವಂತೆ ಕೇಳಿದ್ದು ಎಲ್ಲ ವಿವರವಾಗಿ ವರ್ಣಿಸಿದ್ದಾಳೆ.

ಕಡೆಯ ಒಂಭತ್ತು ಗೀತೆಗಳು ಕೃಷ್ಣನ (ರಂಗನಾಥ) ವೈಭವದ ವರ್ಣನೆಯನ್ನೂ ಹೊಂದಿವೆ. ಅವನ ಅನುಗ್ರಹವನ್ನು ಪಡೆದ ಆಂಡಾಳ್ ಅವನ ವೈಭವವನ್ನು ವರ್ಣಿಸುತ್ತಾಳೆ.

ಮುಕ್ತಾಯದ ಮೂವತ್ತನೆಯ ಗೀತೆಯಲ್ಲಿಯೇ ತಾನು ಅಂದರೆ, ವಿಷ್ಣುಚಿತ್ತನ ಮಗಳು ಈ ಎಲ್ಲ ಮೂವತ್ತು ಭಕ್ತಿ ಕುಸುಮಗಳನ್ನು ಪೋಣಿಸಿದ ಮಾಲೆಯನ್ನು ಮಾಡಿ, ಭಕ್ತಿಯಿಂದ ಹಾಡಿ, ಕೃಷ್ಣನ ಅನುಗ್ರಹವನ್ನು ಪಡೆಯಲು ಆಶಿಸಿದವಳೆಂದು ಹೇಳುತ್ತಾಳೆ.

ಮುಖ್ಯವಾಗಿ ಇಪ್ಪತ್ತೊಂಬತ್ತನೆಯ ಗೀತೆಯಲ್ಲಿ ಆಂಡಾಳ್ ತನ್ನ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾಳೆ. ಆಕೆ ರಂಗನಾಥನನ್ನು ವಿವಾಹವಾಗಲು ಬಯಸುವುದರ ನಿಜವಾದ ಅಂಶವೆಂದರೆ ಕೇವಲ ಒಂದು ಬಾರಿಯ ಏಳೇಳು ಜನ್ಮಗಳಲ್ಲಿಯೂ ಆತನ ಸಾನಿಧ್ಯವನ್ನು ಆಶಿಸುತ್ತಾಳೆ. ಆತನ ಎಲ್ಲ ಅವತಾರಗಳಲ್ಲಿಯೂ ತನ್ನ ಇರುವಿಕೆಯನ್ನೂ ಬಯಸುತ್ತಾಳೆ. ಕೇವಲ ಮದುವೆಯ ಸಂಬಂಧವಷ್ಟೇ ಅಲ್ಲ.

ಶ್ರೀವೈಷ್ಣವರು ಮಾರ್ಗಶಿರ ಮಾಸದ ಎಲ್ಲ ಮೂವತ್ತು ದಿನಗಳಲ್ಲಿ ಈ ಮೂವತ್ತು ಗೀತೆಗಳನ್ನು ಹಾಡುವ ವ್ರತವನ್ನು ಆಚರಿಸುತ್ತಾರೆ. ಗೌಳ, ಅರಭಿ, ವರಾಳಿ, ಶ್ರೀ, ಶಂಕರಾಭರಣ, ಭೈರವಿ, ಧನ್ಯಾಸಿ, ತೋಡಿ, ಅಮೀರ್ ಕಲ್ಯಾಣಿ, ಕೇದಾರಗೌಳ, ಅಠಾಣ, ಆನಂದಭೈರವಿ,ಬೇಗಡೆ, ಮೋಹನ, ಕಲ್ಯಾಣಿ ನಾದನಾಮಕ್ರಿಯಾ, ಯಮುನಾಕಲ್ಯಾಣಿ, ಬೇಹಾಗ್,ಕುಂತಳವರಾಳಿ, ಪೂರ್ವಕಲ್ಯಾಣಿ, ಕಾಂಬೋಜಿ, ಸುಂಟಿ, ಮಲಯಮಾರುತ, ಸಿಂಧು ಭೈರವಿ, ಸಾವೇರಿ, ಶಹಾನ, ಹುಸೇನಿ, ಮಣಿರಂಗು ಎಂದು ವಿಭಿನ್ನರಾಗಗಳಲ್ಲಿ, ವಿಭಿನ್ನ ತಾಳಗಳಲ್ಲಿ ಈ ಗೀತೆಗಳನ್ನು ಹಾಡಲಾಗುತ್ತದೆ.

ಭಗವದ್ರಾಮಾನುಜರಿಗೆ ಗೋದಾಗ್ರಜ ಎಂಬ ಬಿರುದು ತಂದುಕೊಟ್ಟು ಮಹಾತ್ಮಳು. ಇದಕ್ಕೆ ಕಾರಣ ಏನೆಂದರೆ, ಗೋದಾದೇವಿಯು ''ಸುಂದರ ಬಾಹು'' ದೇವರಿಗೆ ನೂರು ಬಾನೆ ಬೆಣ್ಣೆ ಮತ್ತು ನೂರು ಬಾನೆ ಸಕ್ಕರೆ ಪೊಂಗಲ್ ಅರ್ಪಿಸುವುದಾಗಿ ಹರಕೆ ಹೊತ್ತಿದ್ದಳು,ಆದರೆ, ಆ ಹರಕೆ ತೀರುವ ಮೊದಲೇ ಗೋದಾದೇವಿ ಶ್ರೀರಂಗನಾಥನಲ್ಲಿ ಐಕ್ಯವಾದಳು. ಅವಳು ಐಕ್ಯವಾದ ಹಲವಾರು ವರ್ಷಗಳು ಕಳೆದ ಮೇಲೆ ಶ್ರೀಮದ್ರಾಮಾನುಜರು ಅವಳ ಹರಕೆಯನ್ನು ಸಲ್ಲಿಸಿದರು. ಈ ಕಾರಣದಿಂದ ಶ್ರೀ ರಾಮಾನುಜರಿಗೆ ''ತಿರುಪ್ಪಾವೈ ಜೀಯರ್'' ಮತ್ತು ''ನಮ್ಮ ಕೋಯಿಲ್ ಅಣ್ಣರ್'' ಎಂಬ ಹೆಸರೂ ಬಂದವು.



# ಆರೋಗ್ಯಾಮೃತ

# ಅಮೃತ ಬಳ್ಳಿ

- ಮೂಲ : ಡಾ॥ ಸಿ. ಮಧುಸೂದನಶರ್ಮ
9000761390
ಅನುವಾದ - ಶ್ರೀಮತಿ

ನಮ್ಮ ಆರೋಗ್ಯ ರಕ್ಷಣೆಗಾಗಿ ಭಗವದತ್ತವಾದ, ಪ್ರಕೃತಿ ಪ್ರಸಾದಿಸಿದ ಔಷಧ ಮೂಲಿಕೆಗಳ ನಿಧಿಗಂಟಿನಲ್ಲಿ ಅಮೃತಬಳ್ಳಿ ಬಹಳಾ ಪ್ರಾಶಸ್ತ್ಯವನ್ನು ಪಡೆದಿದೆ.

ನಮ್ಮ ದೇಶದೆಲ್ಲೆಡೆ ವರ್ಷಪೂರ್ತಿ ಬೆಳೆಯುವ ಈ ಅಮೃತಬಳ್ಳಿ ಹೃದಯಾಕಾರದಲ್ಲಿರುವ ನುಣಪಾದ, ಮೃದುವಾದ ಎಲೆಗಳನ್ನು ಒಂದು ತುಂಬಿ ಗೊಂದರಂತೆ ಹೊಂದಿರುತ್ತದೆ.ಇದಾವುದಾದರೂ ಆಧಾರವನ್ನು ಹಿಡಿದುಕೊಂಡು ಹಾವಿನಂತೆ ಸುತ್ತಿಕೊಂಡು ಬೆಳೆಯುತ್ತದೆ.

ಯಾವುದೇ ವ್ಯಾಧಿಯಿಂದ ಯಥೋಚಿತವಾಗಿ ರಕ್ಷಿಸುವುದರಿಂದ ಇದನ್ನು 'ಗುಡೂಚಿ' ಎಂದೂ ಅಮೃತತುಲ್ಯ ಗುಣಗಳಿರುವುದರಿಂದ ಇದನ್ನು ಅಮೃತವೆಂದೂ ಎಲೆಗಳಲ್ಲಿ ಜೇನಿನಂತಹ ಉತ್ತಮವಾದ ದ್ರವವಿರುವುದರಿಂದ 'ಮಧುಪರ್ಣಿ' ಎಂದೂ, ಮುರಿದ ಭಾಗದಿಂದ ಮತ್ತೆ ಚಿಗುರುವ ಶಕ್ತಿ ಹೊಂದಿರುವುದರಿಂದ 'ಛಿನ್ನೋದ್ಭವ' ಎಂದೂ ವಿವಿಧ ಬಗೆಯ ಜ್ವರಗಳನ್ನು ತಗ್ಗಿಸುವುದರಿಂದ ಜ್ವರಘ್ನ ಎಂದೂ ಸಂಸ್ಕೃತದಲ್ಲಿ ಇದಕ್ಕೆ ಹೆಸರು.

'ಮಿನಿಸ್ಪರ್ಮೇಸಿ' ಎಂಬ ಸಸ್ಯ ಕುಟುಂಬಕ್ಕೆ ಹೊಂದಿರುವ ಈ ಸಸ್ಯದ ಶಾಸ್ತ್ರೀಯ ನಾಮಧೇಯ ಟನೋ ಸ್ಪೋರಾ ಕಾರ್ಡಿಪೋಲಿಯಾ'.

ಒಣಗಿದ ಅಮೃತಬಳ್ಳಿಯ ಎಲೆಗಳು ಹಾಗೂ ಅದರ ಚೂರ್ಣವು ಆಯುರ್ವೇದ ಔಷಧಾಲಯಗಳಲ್ಲಿ ಮತ್ತಿತರೆ ಗಿಡಮೂಲಿಕೆ ಮಾರಾಟ ಮಳಿಗೆಗಳಲ್ಲಿ ಲಭಿಸುತ್ತದೆ. ಅಮೃತ ಬಳ್ಳಿಯಿಂದ ಹಲವು ಪ್ರತ್ಯೇಕ ಪದ್ಧತಿಗಳ ಪ್ರಕಾರ ತಯಾರು ಮಾಡಿದ ತಿಪ್ಪಸತ್ತು ಎಂಬ ಔಷಧವು ಸಹ "ಗುಡೂಚಿ ಸತ್ವ" ಎಂಬ ಹೆಸರಿನಿಂದ ಲಭ್ಯವಾಗುತ್ತದೆ.

ಚರ್ಮವ್ಯಾಧಿಗೆ : ಅಮೃತ ಬಳ್ಳಿಯ ಪುಡಿ, ವೀಳೆದೆಲೆಯ ಪುಡಿ ಒಂದೊಂದನ್ನು 50 ಗ್ರಾಂನಂತೆ ತೆಗೆದುಕೊಂಡು ಕಲಿಸಿಟ್ಟುಕೊಂಡು ದಿನವೂ ಒಂದೆರಡು ಬಾರಿ ಬಾರಿಯೊಂದಕ್ಕೆ 200 ಮಿ.ಲೀ. ನೀರಿನಲ್ಲಿ 2-3 ಗ್ರಾಂ ಪುಡಿಯನ್ನು ಕಲಿಸಿ 100 ಮಿ.ಲೀ. ನೀರು ಉಳಿಯುವಂತೆ ಸಣ್ಣನುರಿಯಲ್ಲಿ ಮರಳಿಸಿ, ಇಳಿಸಿ, ಶೋಧಿಸಿ ಒಂದು ಟೀ ಸ್ಪೂನ್ ಜೇನು ಕಲಿಸಿ ಸೇವಿಸುತ್ತಿದ್ದರೆ ರಕ್ತ ಶುದ್ಧಿಯಾಗಿ ಕಜ್ಜಿ, ತಾಮರ, ತುರಿಕೆ, ಸೋರಿಯಾಸಿಸ್‌ನಂತಹ ವಿವಿಧ ಬಗೆಯ ಚರ್ಮವ್ಯಾಧಿಗಳು ತಗ್ಗುತ್ತವೆ ರಕ್ತ ದೋಷಗಳು ತಗ್ಗಿ ಹೋಗುತ್ತವೆ.

ಅಮೃತ ಬಳ್ಳಿಯ ಎಲೆಗಳ ರಸ, ಎಳ್ಳೆಣ್ಣೆ ಸಮಾನವಾಗಿ ಕಲಿಸಿ ಸಣ್ಣ ಉರಿಯ ಮೇಲೆ ರಸವೆಲ್ಲಾ ಇಂಗಿ ಹೋಗಿ ಎಣ್ಣೆ ಮಾತ್ರವೇ ಉಳಿಯುವಂತೆ ಮರಳಿಸಿ, ಇಳಿಸಿ, ಬಿಸಿಯಾರಿದ ನಂತರ ಶೇಖರಿಸಿಟ್ಟುಕೊಂಡು ಅಭ್ಯಂಜನದ ಮೊದಲು ಬಳಿಸಿ ಕೊಳ್ಳಬಹುದು.

**ವಿವಿಧ ರೀತಿಯ ಜ್ವರಕ್ಕೆ:**

ದಿನವೂ ಎರಡೂ ಬಾರಿ, ಬಾರಿ ಯೊಂದಕ್ಕೆ 20ಮಿ.ಲೀ. ಅಮೃತ ದೆಲೆಯ ರಸದಲ್ಲಿ ಒಂದು ಟೀ ಸ್ಪೂನ್ ಜೇನು ಅಥವಾ ಕಲ್ಲುಸಕ್ಕರೆ ಕಲಿಸಿ ಸೇವಿಸುತ್ತಿದ್ದರೆ ಮಲೇರಿಯಾ, ಟೈಫಾಯ್ಡ್, ವೈರಲ್ ಜ್ವರಗಳೆಂದೇ ಅಲ್ಲದೇ ಕಾರಣಗಳು ಸ್ಪಷ್ಟವಾಗಿ ತಿಳಿಯದ ಜ್ವರಗಳೂ ಸಹಾ ತಗ್ಗಿ ಹೋಗುತ್ತದೆ.

**ದೇಹ ಭಾರ ಇಳಿಸಲು**

ಅಮೃತಬಳ್ಳಿಯ ಪುಡಿ, ತ್ರಿಫಲ ಚೂರ್ಣ, ಒಂದೊಂದನ್ನು 100 ಗ್ರಾಂ ನಂತೆ ಕಲಿಸಿಟ್ಟುಕೊಂಡು ದಿನವೂ 2 ಬಾರಿ ಬಾರಿಯೊಂದಕ್ಕೆ 200 ಮಿ.ಲೀ. ನೀರಿನಲ್ಲಿ ಅರ್ಧ ಟೀಸ್ಪೂನ್‌ನಂತೆ ಒಂದು ಸ್ಪೂನ್‌ವರೆಗೆ ಪುಡಿಯನ್ನು ಕಲಿಸಿ ಸಣ್ಣನುರಿಯಲ್ಲಿ 100 ಮಿ.ಲೀ. ನೀರು ಉಳಿಯುವಂತೆ ಮರಳಿಸಿ, ಇಳಿಸಿ,ಉಗುರು ಬೆಚ್ಚಗಿರುವಾಗಲೇ ತಿಳಿ ಬಗ್ಗಿಸಿ ಒಂದು ಟೀಸ್ಪೂನು ಜೇನು ಕಲಿಸಿ ಆಹಾರ ಸೇವನೆಗೆ ಒಂದು ತಾಸು ಮುಂಚೆಯೇ ಸೇವಿಸಬೇಕು.

**ಕೀಲು ನೋವಿಗೆ**

ಅಮೃತದ ಪುಡಿ, ಕಾರ್ಚಿ ಕಾಯಿ, ಅಬ್ಬಹುಲ್ಲಿನ ಚೂರ್ಣಗಳನ್ನು ಒಂದೊಂದು 50 ಗ್ರಾಂನಂತೆ ಕಲಿ ಸಿಟ್ಟುಕೊಂಡು ಬೆಳಗ್ಗೆ, ಸಂಜೆ ಬಾರಿಯೊಂದಕ್ಕೆ 2-3 ಗ್ರಾಂ ಪುಡಿಯನ್ನು ತಕ್ಕಷ್ಟು ಜೇನಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಸ್ಥೂಲಕಾಯ ತಗ್ಗುವುದಲ್ಲದೇ ದೇಹ ಭಾರದಿಂದ ಉಂಟಾಗುವ ಕೀಲುನೋವು ಕೂಡ ಕಡಿಮೆಯಾಗುತ್ತದೆ.

**ಗಾಯಗಳು, ಹುಣ್ಣುಗಳು ಬಡಕುಗಳಿಗೆ :**

ಅಮೃತ ಬಳ್ಳಿಯ ಎಲೆಗಳನ್ನು ತಕ್ಕಷ್ಟು ಜೇನಿನೊಂದಿಗೆ ಕಲಿಸಿ ಚೆನ್ನಾಗಿ ನಾದಿ ದಿನವೂ ಒಂದೆರಡು ಸಾರಿ ಲೇಪನ ಮಾಡುತ್ತಿದ್ದರೆ ಗಾಯಗಳು, ಹುಣ್ಣು, ವಿವಿಧ ಬಗೆಯ ವ್ರಣಗಳು,ದೀರ್ಘಕಾಲಿಕ ದುರ್ಗಂಧಯುಕ್ತ ಹುಣ್ಣುಗಳು ಮಾಸಿ ಹೋಗುತ್ತದೆ.

**ಕಾಮಿಣೆಗೆ:**

ದಿನಕ್ಕೆರಡು ಬಾರಿ, ಬಾರಿಯೊಂದಕ್ಕೆ ಗುಲಗಂಜಿಯಷ್ಟು ಅಮೃತಬಳ್ಳಿಯ ಮದ್ದನ್ನು ಒಂದು ಲೋಟ ಮಜ್ಜಿಗೆಯ ಅನುಪಾತದಲ್ಲಿ ಸೇವಿಸುತ್ತಾ ನಿರಂತರವಾದ ಪತ್ಯದಲ್ಲಿದ್ದರೆ ಕಾಮಿಣೆ ಶೀಘ್ರ ಗುಣವಾಗುತ್ತದೆ.



**ಅಧಿಕ ಉಷ್ಣ ಇಳಿಯಲು:**

ಅಮೃತ ಬಳ್ಳಿಯ ರಸ ಹಾಗೂ ಕಲ್ಲುಸಕ್ಕರೆ ಒಂದೊಂದನ್ನೂ 25 ಗ್ರಾಂನಂತೆ ಕಲಿಸಿಟ್ಟುಕೊಂಡು ಎರಡು ಬಾರಿಯಂತೆ ಬಾರಿಯೊಂದಕ್ಕೆ ಒಂದು ಗ್ರಾಂ ಪುಡಿಯನ್ನು ತಕ್ಕಷ್ಟು ಬೆಣ್ಣೆ ಅಥವಾ ತುಪ್ಪದಲ್ಲಿ ಕಲಿಸಿ ಸೇವಿಸುತ್ತಿದ್ದರೆ ಅಧಿಕ ಉಷ್ಣತೆ ತಗ್ಗುವು ದೊಂದೇ ಅಲ್ಲದೆ ಹೊಟ್ಟೆಯಲ್ಲಿ ಉರಿ, ಕೈಕಾಲಿನಲ್ಲಿ ಉರಿ, ಬಾಯಿ ಹುಣ್ಣಿನಂತಹವುಗಳು ಶಮನ ಗೊಳ್ಳುತ್ತವೆ.

**ವಿವಿಧ ಬಗೆಯ ವಾತನೋವುಗಳಿಗೆ :**

ಅಮೃತದೆಲೆಯ ಪುಡಿ ಶುಂಠಿ ಚೂರ್ಣವನ್ನು ಒಂದೊಂದು 50 ಗ್ರಾಂನಂತೆ ಕಲಿ ಸಿಟ್ಟುಕೊಂಡು ಬೆಳಗ್ಗೆ, ರಾತ್ರಿ ಆಹಾರಕ್ಕೆ ಅರ್ಧಗಂಟೆ ಮುಂಚೆ ಬಾರಿಯೊಂದಕ್ಕೆ ಎರಡು ಗ್ರಾಂ ಪುಡಿಯಲ್ಲಿ ತಕ್ಕಷ್ಟು ಜೇನು ಕಲಿಸಿ ಸೇವಿಸುತ್ತಿರಬೇಕು. ಹೀಗೆ ಬಳಸುವುದರಿಂದ ಕಾಲುನೋವು, ಸೊಂಟನೋವು,ಕೀಲುನೋವುಗಳು, ತೊಡೆನೋವು, ಬೆನ್ನುನೋವು ಭುಜನೋವುಗಳು ಕಡಿಮೆಯಾಗುತ್ತದೆ.

ಅಮೃತ ಬಳ್ಳಿಯ ಬಗ್ಗೆ ನಡೆದ ಪರಿಶೋಧನೆಯಲ್ಲಿ ಅಮೃತ ಬಳ್ಳಿಗೆ ಮಧು ಮೇಹವನ್ನು ತಗ್ಗಿಸುವ ಗುಣ, ಮೂತ್ರ ಪಿಂಡದಲ್ಲಿನ ಕಲ್ಲುಗಳನ್ನು ಕರಗಿಸುವ ಗುಣವಿದೆಯೆಂದು ಗುರುತಿಸಲಾಗಿದೆ. ಹಾಗೆಯೇ ಹೆಚ್.ಐ.ವಿ. ಹೆಪಟೈಟಸ್-ಬಿ ಸಮಸ್ಯೆಗಳಲ್ಲಿ ವೈರಸ್ಸಿನ ತೀವ್ರತೆಯನ್ನು ಅದರ ಚೈತನ್ಯಶಕ್ತಿಯನ್ನು ತಗ್ಗಿಸಿ, ಶೀಘ್ರವಾಗಿ ವ್ಯಾಧಿಯನ್ನು ಕ್ಷೀಣಿಸುವ, ಯಾವುದೇ ದುಷ್ಪರಿಣಾಮಗಳು ಉಂಟಾಗದೇ ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುವ ಶಕ್ತಿಯಿದೆಯೆಂದು ಸಂಶೋಧನೆಗಳು ಸಾರುತ್ತದೆ.

ಅಮೃತಾರಿಷ್ಟ, ಕೈಶೋರ ಗುಗ್ಗುಲು, ಸಂಶಮನ ಪಡಿ, ಛಿನ್ನರುಹೋಧಿಕ್ವಾಥ, ಗೂಡವ್ಯಾಧಿ ತೈಲ ದಂತಹ ಪ್ರಮುಖ ಆಯುರ್ವೇದ ಔಷಧ ತಯಾರಿಕೆಯಲ್ಲಿ ಈ ಅಮೃತ ಬಳ್ಳಿಯನ್ನು ಉಪಯೋಗಿಸುತ್ತಾರೆ.

# ಸಂಸ್ಕೃತ ಕಲಿಯೋಣ...!!

## द्वितीयः पाठ : ಪಾಠ-2

**ರಚನೆ :- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ**
**ನಿರ್ವಹಣೆ :- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ**

**ते** = ಅವರು **कदा?** = ಯಾವಾಗ **सन्ति** = ಇದ್ದಾರೆ **यूयं** = ನೀವು **तदा** = ಆಗ
**स्थ** = ನೀವಿದ್ದೀರಾ **अयं** = ನಾವು **इदानीं** = ಈಗ **स्मः** = ಇದ್ದೇವೆ

१. त्वं तदा तत्रासि २. ते सन्ति ३. यूंय स्थ ४.वयं स्मः ५.ते इदनीं कुत्र सन्ति? ६. यूंय कदा अत्र स्थ?
७. वयं तदा अत्र स्मः ८. सः इदीनां कुत्रास्ति ९. अहं इदानीं अत्रास्मि १०. यूयं कुत्र स्थ?

1. ನೀನು ಆಗ ಅಲ್ಲಿದ್ದೀಯಾ 2.ಅವರಿದ್ದಾರೆ 3.ನೀವು ಇದ್ದೀರಾ 4.ನಾವು ಇದ್ದೇವೆ 5.ಅವರೀಗ ಎಲ್ಲಿದ್ದಾರೆ? 6.ನೀವು ಯಾವಾಗ ಇಲ್ಲಿ ಇದ್ದೀರಾ? 7.ನಾವು ಆಗ ಅಲ್ಲಿ ಇದ್ದೇವು 8.ಅವನು ಈಗ ಎಲ್ಲಿದ್ದಾನೆ? 9. ನಾನು ಈಗ ಇಲ್ಲಿದ್ದೇನೆ 10. ನೀವು ಎಲ್ಲಿದ್ದೀರಾ?

१. अहं इदानीं तत्रास्मि २. यूयं इदानीं तत्र स्थ। ३. वयं तदा कुत्र स्मः? ४. ते कदा तत्र सन्ति?
५. यूयं कदा तत्र स्थ? ६. वयं तदा स्मः। ७. ते सन्ति। ८. यूयं स्थ। ९. वयं स्मः।१०. ते कुत्र सन्ति

1. ನಾನು ಈಗ ಅಲ್ಲಿದ್ದೇನೆ 2. ನೀವು ಈಗ ಎಲ್ಲಿದ್ದೀರಾ 3. ನಾವೀಗ ಎಲ್ಲಿದ್ದೇವೆ ? 4. ಅವರು ಈಗ ಎಲ್ಲಿದ್ದಾರೆ? 5. ನೀವು ಯಾವಾಗ ಅಲ್ಲಿದ್ದೀರಾ 6.ನಾವು ಅಲ್ಲಿದ್ದೇವು. 7. ಅವರಿದ್ದಾರೆ. 8. ನೀವಿದ್ದೀರಾ 9. ನಾವಿದ್ದೇವೆ 10. ಅವರೆಲ್ಲಿದ್ದಾರೆ.

# ಆಂಜನೇಯನ ಜನನ ಅಂಜನಾದ್ರಿಯಲ್ಲೇ ಎಂಬುದಕ್ಕೆ ಪುರಾಣಗಳಲ್ಲಿರುವ ಪುರಾವೆಗಳು

- ಡಾ ॥ ಪ್ರಕಾಶ್ ಕೆ. ನಾಡಿಗ್
9845529789



ವಾಲ್ಮೀಕಿ ಮಹರ್ಷಿಗಳು ತಮ್ಮ ಮೇರುಕೃತಿಯಾದ ಶ್ರೀಮದ್ರಾಮಾಯಣದಲ್ಲಿ ಹನುಮಂತನ ಜನ್ಮ ಒಂದು ಪರ್ವತದ ಗುಹೆಯಲ್ಲಿ ಆಗಿದೆಯೆಂದು ಉಲ್ಲೇಖ ನೀಡುತ್ತಾರೆ. ಮಧ್ಯ ಪ್ರದೇಶದ ಬುಡಕಟ್ಟು ಜನಾಂಗದವರ ಪ್ರಕಾರ ಹನುಮಂತ ಜನಿಸಿದ್ದು ರಾಂಚಿ ಜಿಲ್ಲೆಯ "ಅಂಜನ್" ಎಂಬ ಹಳ್ಳಿಯಲ್ಲಿ ಜನಿಸಿದನೆಂದು ಹೇಳುತ್ತಾರೆ." ಹಿಸ್ಟಾರಿಟಿ ಆಫ್ ರಾಮಾಯಣ ಎಂಬ ಗ್ರಂಥದಲ್ಲಿ ಖ್ಯಾತ ಇತಿಹಾಸಕಾರರಾದ ಎನ್.ಸಿ. ದೇವ್ ಎಂಬುವವರು ಆಂಜನೇಯನ ಜನನ ಋಷ್ಯಮೂಕ ಪರ್ವತದಲ್ಲಿ ಆಗಿದೆ ಎಂದು ತಿಳಿಸಿದ್ದಾರೆ. ಈ ಋಷ್ಯಮೂಕ ಪರ್ವತವು ಪ್ರಸ್ತುತ ಕರ್ನಾಟಕದಲ್ಲಿ ಇದೆ ಅಲ್ಲವೇ? ಅಂದ ಮೇಲೆ ಹನುಮಂತನ ಜನನ ಕರ್ನಾಟಕದಲ್ಲಿಯೇ ಆಗಿದೆ ಎಂದು ನಿಖರವಾಗಿ ಹೇಳಬಹುದು. ಇದನ್ನು ಪುಷ್ಟೀಕರಿಸುವಂತೆ ಡಾ "ಅನ್ನದಾನಂ ಚಿದಂಬರ ಶಾಸ್ತ್ರಿಗಳು ಎಂಬುವರು ಹತ್ತಾರು ವರ್ಷಗಳ ಪರಿಶ್ರಮದಿಂದ ಹರಿದು ಹಂಚಿ ಹೋಗಿದ್ದ ಪರಾಶರ ಸಂಹಿತೆಯನ್ನು ಕಲೆ ಹಾಕಿದ್ದಾರೆ. ಅದನ್ನು ಅಭ್ಯಾಸಿಸಿ ಅಧ್ಯಯನ ನಡೆಸಿರುವ ಎನ್.ಜಿ ಹನುಮದ್ ಪ್ರಸಾದ್ ಎಂಬುವವರು ಪರಾಶರ ಸಂಹಿತೆಯ ಶ್ಲೋಕಗಳಲ್ಲಿರುವ ಪ್ರದೇಶಗಳ ಹೆಸರುಗಳನ್ನು ಅಧ್ಯಯನ ಮಾಡುವ ಮೂಲಕ ಹನುಮಂತನ ಜನ್ಮ ಕರ್ನಾಟಕದ ಅಂಜನಾದ್ರಿ ಪರ್ವತದಲ್ಲಿಯೇ ಆಗಿದೆ ಎಂದು ಸಾಬೀತುಪಡಿಸಿದ್ದಾರೆ.

## ಭವಿಷ್ಯೋತ್ತರ ಪುರಾಣದಲ್ಲಿ ಅಂಜನಾದ್ರಿಯ ಉಲ್ಲೇಖ :

ಹಂಪೆಯ ಬಳಿ ಇರುವ ಅಂಜನಾದ್ರಿ ಹನುಮಂತನ ಜನನ ಸ್ಥಳ ಎಂದು ಹೇಳಲಾಗುತ್ತದೆ. ಭವಿಷ್ಯೋತ್ತರ ಪುರಾಣದಲ್ಲಿ ಅಂಜನಾದ್ರಿಯ ಬಗ್ಗೆ ಹಾಗೂ ಆಂಜನೇಯನ ಹುಟ್ಟಿನ ಬಗ್ಗೆ ಸಾಕಷ್ಟು ಸಾಕ್ಷ್ಯಗಳು ಮತ್ತು ಉಲ್ಲೇಖಗಳಿವೆ. ವೆಂಕಟಾಚಲ ಮಹಾತ್ಮೇ ಗ್ರಂಥದಲ್ಲಿ ಅನೇಕ ಪುರಾಣಕ್ಕೆ ಸಂಬಂಧ ಪಟ್ಟ ಕಥೆಗಳಿದೆ. ಪುರಾಣಕ್ಕೆ ಸಂಬಂಧಪಟ್ಟ ಈ ಗ್ರಂಥದ ಮೊದಲ ಅಧ್ಯಾಯದಲ್ಲಿ ಜನಕ ಮಹಾರಾಜ ಶತಾನಂದವನ್ನು ಈ ಪರ್ವತಕ್ಕೆ "ಅಂಜನಾದ್ರಿ" ಎಂಬ ಹೆಸರು ಬರಲು ಕಾರಣವೇನೆಂದು ಕೇಳಿದಾಗ, ಶತಾನಂದ ಮತಂಗ ಮುನಿಯ ಆದೇಶದಂತೆ ಅಂಜನೆ ಈ ಪರ್ವತದಲ್ಲಿ ಕಠಿಣ ತಪಸ್ಸನ್ನು ಮಾಡಿ "ವಾಯುಪುತ್ರ ಹನುಮಂತನನ್ನು ಮಗನನ್ನಾಗಿ ಪಡೆದ ಕಥೆಯನ್ನು ಹೇಳುತ್ತಾರೆ. ಅಂಜನೆ ಈ ಪರ್ವತದಲ್ಲಿ ಕಠಿಣ ತಪಸ್ಸನ್ನಾಚರಿಸಿದ್ದರಿಂದ ಆ ಪರ್ವತಕ್ಕೆ ಅಂಜನಾದ್ರಿ ಎಂಬ ಹೆಸರು ಬಂದಿದೆ ಎಂದು ಹೇಳುತ್ತಾನೆ. ಇದನ್ನು ಭವಿಷ್ಯೋತ್ತರ ಪುರಾಣದ ಒಂದು ಶ್ಲೋಕದಲ್ಲಿ ಕೆಳಗಿನಂತೆ ವಿವರಿಸಲಾಗಿದೆ.

ಅಂಜನಾ ವ್ರತಮಾಸ್ಥಾಯ - ಪುತ್ರಂ ಪ್ರಾಪ ಗಿರೀಶ್ವರೇ ॥ 1-87
ತಸ್ಮಾದಂಜನಶೈಲೋಯಮ್ -- ಲೋಕೇ ವಿಖ್ಯಾತಕೀರ್ತಿಮಾನ್ ॥ 1-88

ಹಾಗಾಗಿ ಆಂಜನೇಯನ ಜನನ ಅಂಜನಾದ್ರಿ ಪರ್ವತಲ್ಲೇ ಆಗಿದೆಯೆಂದು ಹೇಳಬಹುದು.

## ಬ್ರಹ್ಮಾಂಡ ಪುರಾಣದಲ್ಲಿ ಅಂಜನಾದ್ರಿಯ ಉಲ್ಲೇಖ:

ಬ್ರಹ್ಮಾಂಡ ಪುರಾಣದಲ್ಲಿ ಕೂಡ ಅಂಜನಾದ್ರಿ ಪರ್ವತದ ಉಲ್ಲೇಖವಿದೆ. ತೀರ್ಥಖಂಡದ ಐದನೇ ಅಧ್ಯಾಯದಲ್ಲಿ ಅಂಜನಾದ್ರಿ ಪರ್ವತದ ಬಗ್ಗೆ ಉಲ್ಲೇಖ ಬರುತ್ತದೆ. ನಾರದ ಮಹರ್ಷಿಗಳು ಭೃಗು ಮಹರ್ಷಿಗಳೊಂದಿಗೆ ಸಂಭಾಷಿಸುತ್ತಾ ಅಂಜನಾದೇವಿಯ ಜನನ ವೃತ್ತಾಂತ ಹಾಗೂ ಆಂಜನೇಯ ಜನನದ ಕಾರಣದ ಹಿಂದಿನ ರಹಸ್ಯವನ್ನು ತಿಳಿಸುತ್ತಾರೆ. ದುಷ್ಟ ಸಂಹಾರಕನಾದ ಭಗವಾನ್ ವಿಷ್ಣುವು ದುಷ್ಟ ರಾಕ್ಷಸನಾದ ರಾವಣ ಸಂಹಾರಕ್ಕಾಗಿ ರಘುಕುಲ ವಂಶದಲ್ಲಿ ಅವತಾರವನ್ನು ಸ್ವೀಕರಿಸಲಿರುವನು. ಆ ಅವತಾರ ಪುರುಷನ ಸಹಾಯಾರ್ಥವಾಗಿ ವೀರ್ಯವಂತನಾದ ಪುತ್ರನು ಅಂದರೆ ಆಂಜನೇಯನು ಹುಟ್ಟಿದ ವಿಷಯವನ್ನು ತಿಳಿಸುತ್ತಾನೆ.

ಅಂಜನಾದೇವಿ ಬಲಿಷ್ಠನಾದ ಸುಂದರ ಮಗನನ್ನು ಪಡೆಯುತ್ತಾಳೆ. ಭಾರತೀಯ ಕಾಲಮಾನ ಪ್ರಕಾರ ಅಂದು ಶ್ರಾವಣ ಮಾಸದ ಶ್ರವಣಾ ನಕ್ಷತ್ರದ ಭಾನುವಾರದ ದಿನ, ಆ ಶಿಶುವು ಉಜ್ವಲವಾದ ಕರ್ಣ ಕುಂಡಲಗಳಿಂದಲೂ, ದಿವ್ಯವಾದ ಯಜ್ಞೋಪವೀತದಿಂದಲೂ, ಶೋಭಾಯಮಾನ



ವಾದ ಕೌಪೀನದಿಂದಲೂ ಕಂಗೊಳಿಸುತ್ತಿರುತ್ತದೆ. ಹುಟ್ಟಿದ ಸ್ವಲ್ಪ ಸಮಯದಲ್ಲೇ ಉದಯಿಸುತ್ತಿದ್ದ ಸೂರ್ಯನನ್ನು ಹಣ್ಣೆಂದು ಭಾವಿಸಿ ಅದನ್ನು ಹಿಡಿಯಲು ಧಾವಿಸುತ್ತಿದ್ದವನಿಗೆ ಇಂದ್ರನ ವಜ್ರಾಯುಧದಿಂದ ಪ್ರಜ್ಞೆ ತಪ್ಪಿ ಬೀಳುತ್ತಾನೆ. ಪ್ರಜ್ಞೆ ಕಳೆದುಕೊಂಡ ಹನುಮಂತನನ್ನು ನೋಡಿ ಅಂಜನಾದೇವಿ ರೋಧಿಸುತ್ತಾಳೆ. ಆ ಬಾಲಕನು ಕಾರಣ ಜನ್ಮನೆಂದು ಹಾಗೂ ಶಿವಾಂಶ ಸಂಭೂತನೆಂದು ತಿಳಿದ ದೇವತೆಗಳು ಬಾಲಕನಿಗೆ ವರವನ್ನು ಕೊಡುತ್ತಾರೆ.ಅಲ್ಲಿಗೆ ಬಂದ ಬ್ರಹ್ಮ ದೇವರು ಅಂಜನೆಗೆ ಆಶೀರ್ವದಿಸಿ ಹೀಗೆ ಹೇಳುತ್ತಾರೆ.

ಅಂಜನೇ ತ್ವಂ ಹಿ ಶೇಷಾದ್ರೌ ತಪಸ್ತಪ್ತ್ವಾ ಸುದಾರುಣಂ।
ಪುತ್ರಂ ಸೂತವತೀ ಯಸ್ಮಾಲ್ಲೋಕತ್ರಯ ಹಿತಾಯ ವೈ ॥47॥
ಪ್ರಸಿದ್ಧಿಂ ಯಾತು ಶೈಲೋಽಯಮಂಜನೇ ನಾಮತಸ್ತವ।
ಅಂಜನಾಚಲ ಇತ್ಯೇವ ನಾತ್ರಕಾರ್ಯಾ ವಿಚಾರಣಾ ॥48॥

ಅಂದರೆ ಓ ಅಂಜನೇ ನೀನು ಶೇಷಾದ್ರಿ ಪರ್ವತದ ಮೇಲೆ ಅತ್ಯಂತ ಕಠಿಣ ತಪಸ್ಸನ್ನು ಮಾಡುವ ಮೂಲಕ ಲೋಕಕ್ಕೆ ಹಿತವನ್ನುಂಟು ಮಾಡುವ ಮಗನನ್ನು ಪಡೆದಿದ್ದೀಯೇ. ಇನ್ನು ಮುಂದೆ ಈ ಪರ್ವತವು ಅಂಜನಾದ್ರಿ ಪರ್ವತ ಎಂಬ ಹೆಸರಿನಿಂದ ಪ್ರಸಿದ್ಧಿ ಹೊಂದುವುದು. ಇದರಿಂದ ಸಂತೋಷಗೊಂಡ ಅಂಜನಾದೇವಿಯು ಪುತ್ರ ಹನುಮನೊಂದಿಗೆ ವೆಂಕಟಾಚಲದಲ್ಲಿರುವ ತನ್ನ ಆಶ್ರಮಕ್ಕೆ ಹಿಂದಿರುಗುತ್ತಾಳೆ.

ಶ್ರಾವಣೇ ಮಾಸಿ ನಕ್ಷತ್ರೇ ಶ್ರವಣೇ ಹರಿವಾಸರೇ ।
ಕುಂಡಲೋದ್ಭಾಸಿ ಗಂಡಾತಮುಪವೀತಿನಮುಜ್ವಲಮ್ ॥38॥

ಎಂದು ಉಲ್ಲೇಖಿಸುವ ಮೂಲಕ ಬ್ರಹ್ಮಾಂಡ ಪುರಾಣದಲ್ಲಿ ಹನುಮಂತನ ಜನನ ಶ್ರಾವಣ ಮಾಸದ ಶುದ್ಧ ಏಕಾದಶಿಯಂದು ಆಗಿದೆ ಎಂದು ಹೇಳಲಾಗಿದೆ. ಹನುಮಂತನ ಜನನ ತಿಥಿ ಮತ್ತು ಕಾಲಮಾನದಲ್ಲಿ ಭಿನ್ನಾಭಿಪ್ರಾಯಗಳು ಸಮಯದ ವ್ಯತ್ಯಾಸದಿಂದ ಆಗಿರಬಹುದೆಂದು ತಿಳಿಯಬಹುದಾಗಿದೆ.

## ಪರಾಶರ ಸಂಹಿತೆಯಲ್ಲಿ ಹನುಮನ ಜನ್ಮವೃತ್ತಾಂತ

ಹನುಮಂತನ ಜನ್ಮವೃತ್ತಾಂತದ ಹಿಂದಿನ ಘಟನಾವಳಿಗಳ ಬಗ್ಗೆ ಬೇರೆ ಶಾಸ್ತ್ರ ಪುರಾಣಗಳಿಗಿಂತ ಪರಾಶರ ಸಂಹಿತೆಯಲ್ಲಿ ವಿವರವಾಗಿ ತಿಳಿಸಲಾಗಿದೆ. ಹನುಮಂತನ ಉಗಮದ ಬಗ್ಗೆ ಹಲವಾರು ಪುರಾಣ ಕಥೆಗಳು ಇಂದಿಗೂ ಪ್ರಚಲಿತದಲ್ಲಿದೆ. ಆದರೆ ಪರಾಶರ ಸಂಹಿತೆಯಲ್ಲಿ ಹನುಮಂತನ ಉಗಮಕ್ಕೆ ನಿಖರವಾದ ಕಾರಣಗಳನ್ನು ಕೊಡಲಾಗಿದೆ ಎಂದರೆ ತಪ್ಪಾಗಲಾರದು.

ಈಗ ನಾವಿರುವುದು ರಾಧಾಂತರ ಎಂಬ ಕಲ್ಪ, ಆಗ ಕಶ್ಯಪನೆಂಬ ಬ್ರಾಹ್ಮಣನೊಬ್ಬನಿದ್ದನು. ಅವನು ಸಕಲ ವೇದಾವಿದ್ಯಾ ಪಾರಂಗತನಾಗಿದ್ದನು. ಇವನಿಗೆ ಮದುವೆ ಆಗಿ ಬಹಳ ವರ್ಷಗಳಾದರೂ ಮಕ್ಕಳಾಗಿರಲಿಲ್ಲ. ಆಗ ಈತ ತನ್ನ ಪತ್ನಿ ಸಾದ್ಯಾಳನ್ನು ಕರೆದುಕೊಂಡು ತಪಸ್ಸನ್ನು ಮಾಡಿ ಶಿವನನ್ನು ಮೆಚ್ಚಿಸಿ ಸಂತಾನ ಪಡೆಯಬೇಕೆಂದು ಕೈಲಾಸಕ್ಕೆ ಹೋಗಿ ಪತ್ನಿಯೊಡಗೂಡಿ ಘೋರ ತಪಸ್ಸನ್ನಾಚರಿಸುತ್ತಾನೆ. ಮಳೆ, ಗಾಳಿ, ಬಿಸಿಲನ್ನು ಲೆಕ್ಕಿಸದೇ ತಪಸ್ಸನ್ನು ಮಾಡುತ್ತಿರುವ ಇವರಿಗೆ ಸಹಾಯವಾಗಲೆಂದು ಶಿವ ಅಗ್ನಿ ಮತ್ತು ವಾಯುದೇವರನ್ನು ಅವರ ಸಹಾಯಕ್ಕೆ ಕಳಿಸುತ್ತಾನೆ. ಬ್ರಾಹ್ಮಣ ವಟುಗಳಂತೆ ವೇಷಧರಿಸಿ ಕಶ್ಯಪ ದಂಪತಿಗಳ ತಪಸ್ಸಿಗೆ ಸಹಕರಿಸುತ್ತಾ ನೆರವಾಗುತ್ತಾರೆ. ತಪಸ್ಸು ಪರಿಪಕ್ವವಾದ ಕಾರಣ ಪರಮೇಶ್ವರನು ಇವರ ಮುಂದೆ ಬಂದು ನಿಂತು ನಿಮ್ಮ ತಪಸ್ಸಿಗೆ ಮೆಚ್ಚಿದ್ದೇನೆ ಏನು ವರ ಬೇಕೆಂದು ಕೇಳಲು, ಕಶ್ಯಪ ದಂಪತಿಗಳು ನಮಗೆ ಪುತ್ರರೂಪದಲ್ಲಿ ನೀನೇ ಜನಿಸಬೇಕೆಂದು ವರಬೇಡಿದಾಗ ಹಾಗೆಯೇ ಆಗಲಿ ಎನ್ನುತ್ತಾನೆ ಶಿವ.

ಈ ಘಟನೆ ಘಟಿಸುವುದಕ್ಕೆ ಮುಂಚೆಯೇ ಗಾರ್ದಬನಿಃಸ್ವನನೆಂಬ ರಾಕ್ಷಸನೊಬ್ಬ ಶಿವನನ್ನು ಕುರಿತು ಘೋರ ತಪಸ್ಸಾನ್ನಾಚರಿಸಿ ವರಗಳನ್ನು ಪಡೆಯುತ್ತಾನೆ. ವರಗಳಿಂದ ಶಕ್ತಿವಂತನಾಗಿ ದೇವತೆಗಳನ್ನು ಪೀಡಿಸುತ್ತಾ ಮೂರುಲೋಕಗಳಿಗೂ ಕಂಟಕನಾಗುತ್ತಾನೆ. ಇದರಿಂದ ಭಯಭೀತಗೊಂಡ ದೇವಾನುದೇವತೆಗಳು ಬ್ರಹ್ಮನನ್ನು ಕರೆದುಕೊಂಡು ಪರಶಿವನಲ್ಲಿಗೆ ಬಂದು ಆ ರಾಕ್ಷಸನನ್ನು ವಧಿಸುವ ಮಾರ್ಗೋಪಾಯಗಳನ್ನು ಕೇಳುತ್ತಾರೆ. ಆಗ ಪರಶಿವನು ತಾನೇ ವರಗಳನ್ನು ಕರುಣಿಸಿರುವುದರಿಂದ ಅವನನ್ನು ಸಂಹರಿಸಲು ನಾನು ಅಸಮರ್ಥನಾಗಿರುವೆನೆಂದು ಹೇಳಿದಾಗ ದೇವಾನು ದೇವತೆಗಳು ಶ್ರೀಹರಿಯ ಮೊರೆ ಹೋಗುತ್ತಾರೆ. ಶ್ರೀಹರಿಯು ತಾನು ರಾಕ್ಷಸನನ್ನು ಕೊಲ್ಲುವುದಾಗಿ ಅಭಯ ನೀಡುತ್ತಾನೆ.ಆಗ ಪರಶಿವನು ಇದು ಅಸಂಭವ, ಹಾಗೇನಾದರೂ ವಿಷ್ಣುವು ರಾಕ್ಷಸನನ್ನು ಕೊಂದರೆ ನಾನು ನಾರಾಯಣನ ದಾಸತ್ವವನ್ನು ಸ್ವೀಕರಿಸುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಆಗ ಶ್ರೀಹರಿಯು ಕೂಡ ಆ ರಾಕ್ಷಸನನ್ನು ಕೊಲ್ಲಲು ಅಸಮರ್ಥನಾದಲ್ಲಿ ಶಿವನಿಗೆ ದಾಸನಾಗುವುದಾಗಿ ಹೇಳುತ್ತಾನೆ.

ವಿಷ್ಣು ಈಗ ಗಾರ್ದಬನಿಃಸ್ವನನನ್ನು ಕೊಲ್ಲಲು ಉಪಾಯ ಮಾಡಿ ಮೋಹಿನಿಯ ರೂಪವನ್ನು ಧರಿಸಿ ಕೈಯಲ್ಲಿ ಮಧು ಪಾತ್ರೆಯನ್ನು ಹಿಡಿದು ರಾಕ್ಷಸನಿರುವ ಉದ್ಯಾನವನದಲ್ಲಿ ಸಂಚರಿಸತೊಡಗುತ್ತಾನೆ.ಮೋಹಿನಿಯ ರೂಪಕ್ಕೆ ಮರುಳಾದ ರಾಕ್ಷಸನ ಗೂಢಚಾರರು ಆ ಮೋಹಿನಿಯನ್ನು ಮದುವೆಯಾಗುವಂತೆ ಗಾರ್ದಬನಿಃಸ್ವನಿಗೆ ಒತ್ತಾಯಿಸುತ್ತಾರೆ. ಆಗ ಗಾರ್ಧ ಬನಿಸ್ವನನು ಮೋಹಿನಿಯನ್ನು ಬಲಾತ್ಕರಿಸಲು ಪ್ರಯತ್ನಿಸಿದಾಗ,ಮೋಹಿನಿಯು ನಾನು ನಿನಗೋಸ್ಕರವಾಗಿಯೇ ಬಂದಿರುವೆ. ಅವಸರವೇಕೆ? ಮೊದಲು ಈ ಮದ್ಯವನ್ನು ಕುಡಿ ನಂತರ ರಮಿಸುವೆಯಂತೆ ಎಂದು ಹೇಳುತ್ತಾಳೆ. ಇದಕ್ಕೆ ಒಪ್ಪಿ ಮೋಹಿನಿ ತಂದಿದ್ದ ಮದ್ಯವನ್ನು ಕುಡಿದು ಪ್ರಜ್ಞೆತಪ್ಪಿ ಬೀಳುತ್ತಾನೆ. ತಕ್ಷಣವೇ ವಿಷ್ಣು ಮೋಹಿನಿ ರೂಪವನ್ನು ಕಳಚಿ ನರಿಯ ರೂಪವನ್ನು ಧರಿಸಿ ರಾಕ್ಷಸನ ಹೊಟ್ಟೆಯನ್ನು ಸೀಳಿ ಅವನನ್ನು ಸಂಹರಿಸಿ ಜಯಶೀಲನಾಗುತ್ತಾನೆ.

ಇದನ್ನು ನೋಡಿದ ಶಿವನು ತಾನು ಕೊಟ್ಟ ಮಾತಿನಂತೆ ವಿಷ್ಣುವಿನ ದಾಸನಾಗಲು ತಯಾರಿ ನಡೆಸಲು ಮುಂದಾದಾಗ ವಿಷ್ಣುವು ಪರಮೇಶ್ವರ ನಾವು ಮಾಡುವ ಕಾರ್ಯಗಳೆಲ್ಲವೂ ಲೋಕಕಲ್ಯಾಣಕ್ಕಾಗಿಯೇ ಅಲ್ಲವೆ? ನಾನು ಮುಂದೆ ತ್ರೇತಾ ಯುಗದಲ್ಲಿ ಧರ್ಮ ರಕ್ಷಣೆಗಾಗಿ ಶ್ರೀರಾಮನ ಅವತಾರವನ್ನು ಎತ್ತುತ್ತೇನೆ. ಆಗ ನೀನು ಆಂಜನೇಯನ ರೂಪದಲ್ಲಿ ಅವತರಿಸಿ ನನ್ನ ಸ್ನೇಹ ಬೆಳಸಿ ನಿನ್ನ ದಾಸತ್ವದ ಪ್ರತಿಜ್ಞೆಯನ್ನು ಪಾಲಿಸುವೆಯಂತೆ ಎಂದು ಹೇಳುತ್ತಾನೆ.

ಉಭಯೋರಂತರಮ್ ನಾಸ್ತಿ ಬೇಧ ಕೃತ್ಪಾಪಮಶ್ನುತೇ!
ತಸ್ಮಾತ್ ಹರಿಹರಾಭೇದೋ ವಿಜ್ಞೇಯೋ ಮೋಕ್ಷಾ ಕಾಂಕ್ಷಿಭಿಃ


ನಮ್ಮಿಬ್ಬರ ಮದ್ಯೆ ಭೇದವೆಣಿಸುವವನು ಪಾಪಾತ್ಮನಾಗುತ್ತಾನೆ ಮತ್ತು ಹರಿಹರ ಭೇದವನ್ನು ಅರಿತುಕೊಂಡವನು ಮೋಕ್ಷ ಪದವಿಯನ್ನು ಪಡೆಯುತ್ತಾನೆ ಎನ್ನುತ್ತಾನೆ.

ದೇವತೆಗಳಿಗೆ ಯಾವಾಗಲೂ ರಾಕ್ಷಸ ಬಾಧೆ ತಪ್ಪಿದ್ದಲ್ಲ. ಒಮ್ಮೆ ಹೀಗೆ ಬಂದಿದ್ದ ರಾಕ್ಷಸರ ಹಿಂಸೆಯನ್ನು ತಾಳಲಾರದೆ ದೇವಾನುದೇವತೆಗಳು ಪರಶಿವ, ಬ್ರಹ್ಮದೇವರು ಹಾಗೂ ಇಂದ್ರನ ಮುಂದಾಳತ್ವದಲ್ಲಿ ತಮ್ಮನ್ನು ರಾಕ್ಷಸರ ಉಪಟಳದಿಂದ ರಕ್ಷಿಸುವಂತೆ ಬದರಿಕಾವನದಲ್ಲಿ ತಪೋನಿರತನಾಗಿದ್ದ ವಿಷ್ಣವಿನ ಸಮೀಪಕ್ಕೆ ಬಂದು ಮೊರೆಯಿಡುತ್ತಾರೆ ತಮ್ಮ ಕಷ್ಟಗಳನ್ನು ನಿವೇದಿಸಿಕೊಂಡ ದೇವತೆಗಳಿಗೆ ಅಭಯವನ್ನಿತ್ತು ರಾಕ್ಷಸ ಬಾಧೆ ಖಂಡಿತವಾಗಿ ನಿವಾರಣೆಯಾಗುತ್ತದೆ ಎಂದು ಹೇಳಿ, ಅಲ್ಲಿಗೆ ಬಂದಿದ್ದ ದೇವತೆಗಳೆಲ್ಲರ ತೇಜಸ್ಸನ್ನು ಆಕರ್ಷಿಸಿ ಅದಕ್ಕೆ ತನ್ನ ತೇಜಸ್ಸನ್ನು ಸೇರಿಸಿ ಆ ಸಂಪೂರ್ಣ ತೇಜೋರಾಶಿಯ ಪರಶಿವನಲ್ಲಿ ಸಮೀಕರಿಸುತ್ತಾನೆ. ಶಿವನು ಆ ತೇಜೋ ರಾಶಿಯನ್ನು ತನ್ನ ಶರೀರದಲ್ಲಿ ಧಾರಣೆ ಮಾಡಿ ಅದರಿಂದ ಹುಟ್ಟುವ ಮಹಾವೀರನಿಂದ ರಾಕ್ಷಸ ಕಾಟಗಳು ನಿವಾರಣೆಯಾಗುವುದೆಂದು ವಿಷ್ಣುವು ದೇವತೆಗಳಿಗೆ ಅಭಯ ನೀಡುತ್ತಾನೆ.

ಸ್ವಲ್ಪದಿನಗಳ ನಂತರ ಪರಶಿವನು ಪಾರ್ವತಿ ಸಮೇತವಾಗಿ ವೆಂಕಟಾಚಲ ಪರ್ವತದ ಚಿತ್ರವನದಲ್ಲಿ ವಿಹರಿಸಿ ವಿರಮಿಸುತ್ತಿರುವಾಗ ವಾನರ ಜೋಡಿಯೊಂದು ಕ್ರೀಡಿಸುತ್ತಿರುವುದನ್ನು ನೋಡಿ ಪಾರ್ವತಿಯು ಲಜ್ಜಾಭೂತಳಾಗುತ್ತಾಳೆ. ಇದನ್ನರಿತ ಪರಮೇಶ್ವರನು ವಾನರಜೋಡಿಯಾಗಿ ಪರಿವರ್ತನೆಗೊಂಡು ರಮಿಸುತ್ತಾರೆ.ಇದೇ ಸಂದರ್ಭದಲ್ಲಿ ಪರಮೇಶ್ವರನು ಸರ್ವ ದೇವತೆಗಳ ತೇಜೋಪುಂಜವನ್ನು ಪಾರ್ವತಿಯ ಗರ್ಭದಲ್ಲಿ ಇರಿಸುತ್ತಾನೆ. ನಂತರ ಇಬ್ಬರು ಸಸ್ವರೂಪವನ್ನು ಧರಿಸುತ್ತಾರೆ, ಆದರೆ ಆ ತೇಜೋರಾಶಿಯ ಶಾಖವನ್ನು ಸಹಿಸಲಾಗದೇ ಪಾರ್ವತಿ ಅದನ್ನು ಅಗ್ನಿಯಲ್ಲಿ ಸ್ಥಾಪಿಸುತ್ತಾಳೆ. ಅದರೆ ಆ ತೇಜೋಪುಂಜದ ಶಾಖವನ್ನು ಸ್ವಯಂ ಅಗ್ನಿದೇವರಿಗೂ ತಡೆದುಕೊಳ್ಳಲು ಸಾಧ್ಯವಾಗದೆ ಅಗ್ನಿಯು ಅದನ್ನು ವಾಯುದೇವರಲ್ಲಿ ಸ್ಥಾಪಿಸುತ್ತಾನೆ.

ರಾಧಂತರಕಲ್ಪದಲ್ಲಿ ಶಿವನೇ ನನ್ನ ಪುತ್ರನಾಗಿ ಹುಟ್ಟಬೇಕೆಂದು ತಪಸ್ಸು ಮಾಡಿ ವರಪಡೆದ ಕಶ್ಯಪನೆಂಬ ಬ್ರಾಹ್ಮಣನ ಬಗ್ಗೆ ಮೇಲೆ ತಿಳಿಸಿದ್ದೆ, ಆ ಕಶ್ಯಪನೆಂಬ ಬ್ರಾಹ್ಮಣ ತನ್ನ ನಂತರದ ಜನ್ಮದಲ್ಲಿ ಕೇಸರಿ ಎಂಬ ವಾನರ ರಾಜನಾಗಿ ಜನ್ಮವೆತ್ತಿರುತ್ತಾನೆ. ಸುಪರ್ವಗಿರಿ ಎಂಬ ಪರ್ವತ ಪ್ರದೇಶ ಇವನ ರಾಜ್ಯವಾಗಿರುತ್ತದೆ. ಇದೇ ಸಮಯದಲ್ಲಿ ಶಂಖ ಮತ್ತು ಸಬಲ ಎಂಬ ರಾಕ್ಷಸರು ಋಷಿಮುನಿಗಳಿಗೆ ತೊಂದರೆ ಕೊಡುತ್ತಿರುತ್ತಾರೆ. ರಾಕ್ಷಸರ ಬಾಧೆಯನ್ನು ತಾಳಲಾರದೇ ಕೇಸರಿಯ ಬಳಿ ಬಂದು ರಾಕ್ಷಸನನ್ನು ಸಂಹರಿಸಬೇಕೆಂದು ಋಷಿ ಮುನಿಗಳು ಕೇಳಿಕೊಳ್ಳುತ್ತಾರೆ. ಕೇಸರಿಯು ಋಷಿಮುನಿಗಳ ಕೋರಿಕೆಯಂತೆ ರಾಕ್ಷಸರನ್ನು ಸಂಹರಿಸುತ್ತಾನೆ. ಇದರಿಂದ ಸಂತೋಷಗೊಂಡ ಋಷಿಮುನಿಗಳು ಕೇಸರಿಗೆ ಪ್ರತ್ಯುಪಕಾರವಾಗಿ ಒಳ್ಳೆಯ ವಧುವನ್ನು ಹುಡುಕಿ ಕೇಸರಿಗೆ ವಿವಾಹವನ್ನು ಮಾಡಲು ನಿಶ್ಚಯಿಸುತ್ತಾರೆ.

ಇದೇ ಸಂದರ್ಭದಲ್ಲಿ ಕುಂಜರ ಮತ್ತು ವಿಂಧ್ಯಾವಳೀ ಎಂಬ ದಂಪತಿಗಳು ಬ್ರಹ್ಮನ ಅನುಗ್ರಹದಿಂದ ಅಂಜನಾದೇವಿ ಎಂಬ ಪುತ್ರಿಯನ್ನು ಪಡೆದಿರುತ್ತಾರೆ. ಅವಳು ಯೋಗ್ಯವಯಸ್ಸಿಗೆ ಬಂದಾಗ ದೇವತೆಗಳ ಅಜ್ಞಾನುಸಾರ ಅವಳ ವಿವಾಹವನ್ನು ಕೇಸರಿಯೊಂದಿಗೆ ನೆರವೇರಿಸುತ್ತಾರೆ. ಆದರೆ ಕೇಸರಿ ದಂಪತಿಗಳಿಗೆ ಬಹುಕಾಲದವರೆಗೆ ಮಕ್ಕಳಾಗುವುದಿಲ್ಲ. ಆಗ ಅಂಜನಾದೇವಿ ಶಿವನನ್ನು ಕುರಿತು ತಪಸ್ಸನ್ನಾಚರಿಸುತ್ತಾಳೆ. ಅವಳ ತಪಸ್ಸಿಗೆ ಮೆಚ್ಚಿದ ವಾಯುದೇವರು ಪ್ರತಿದಿನವೂ ಅಂಜನಾದೇವಿಗೆ ಹಣ್ಣೊಂದನ್ನು ಕೊಡುತ್ತಿರುತ್ತಾನೆ. ಒಂದು ದಿನ ವಾಯು ದೇವನು ಹಣ್ಣಿನ ಬದಲು ಅಗ್ನಿ ಕೊಟ್ಟ ಶಿವನ ತೇಜಸ್ಸನ್ನೇ ಹಣ್ಣಿನ ರೂಪದಲ್ಲಿ ಅಂಜಾನಾ ದೇವಿಗೆ ಕೊಡುತ್ತಾನೆ. ನಿತ್ಯವೂ ಕೊಡುವ ಹಣ್ಣೆಂದೇ



ತಿಳಿದು ಅಂಜನಾದೇವಿ ಅದನ್ನು ಭಕ್ಷಿಸುತ್ತಾಳೆ. ಈ ಹಣ್ಣನ್ನು ತಿಂದು ಕೆಲದಿನಗಳ ನಂತರ ಅವಳಿಗೆ ಗರ್ಭವತಿಯ ಲಕ್ಷಣ ಗಳು ಕಂಡು ಬಂದಾಗ ಆಶ್ಚರ್ಯಗೊಂಡು ತನ್ನ ವ್ರತ ಭಂಗವಾಯಿತೆಂದು ದುಃಖಿತಳಾಗುತ್ತಾಳೆ. ಆಗ ಅಶರೀರ ವಾಣಿಯೊಂದು ಅಂಜನೆಯು ಯಾವ ಪಾಪವನ್ನೂ ಮಾಡಿಲ್ಲ ವೆಂದೂ ದೇವಾನುದೇವತೆಗಳ ಅನುಗ್ರಹದಿಂದ ಆಕೆ ಮಹಾನ್ ಪರಾಕ್ರಮಿಗೆ ಜನ್ಮನೀಡುತ್ತಾಳೆ ಎಂದು ಹೇಳುತ್ತದೆ. ಇದರಿಂದ ಅಂಜನಾದೇವಿ ಸಂತೋಷಗೊಳ್ಳುತ್ತಾಳೆಯಲ್ಲದೇ ವೈಶಾಖಮಾಸದ ಬಹುಳ ದಶಮಿ ಶನಿವಾರದಂದು ಪೂರ್ವ ಭಾದ್ರ ನಕ್ಷತ್ರ, ವೈದ್ಯತೀಯೋಗದ ಮಧ್ಯಾಹ್ನದಲ್ಲಿ ಪುತ್ರರತ್ನಕ್ಕೆ ಜನ್ಮ ನೀಡುತ್ತಾಳೆ.ಮಾಣಿಕ್ಯ ಕುಂಡಲಗಳನ್ನು ಧರಿಸಿ ಮಣಿ ನೂಪುರಗಳಿಂದ ಅಲಂಕೃತನಾದ, ಯಜ್ಞೋಪವೀತವನು ಧರಿಸಿದ ಬಾಲಕನನ್ನು ನೋಡಲು ಎರಡು ಕಣ್ಣುಗಳು ಸಾಲ ದಾಗಿರುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ, ಹೆಣ್ಣು ವಾನರ ರೂಪ ಪಡೆದ ಆಂಜನಾದೇವಿ ಹಾಗೂ ವಾನರ ಕೇಸರಿಯ ಮಗನೇ "ಆಂಜನೇಯ" ಮೂಲತಃ ಅಂಜನಾದೇವಿ ಅಪ್ಸರೆಯಾಗಿದ್ದು ಬ್ರಹ್ಮದೇವನ ಆಸ್ಥಾನದಲ್ಲಿರುತ್ತಾಳೆ. ಮುನಿಯೋರ್ವನು ತಪೋ ಭಂಗಮಾಡಿದ್ದಕ್ಕಾಗಿ ಆಕೆ ಭೂಲೋಕದಲ್ಲಿ ಜನಿಸುತ್ತಾಳೆ. ಅಂಜನಾದೇವಿ ಬಾಲಕಿಯಾಗಿದ್ದಾಗ ತಪಸ್ಸು ಮಾಡುತ್ತಿದ್ದ ವಾನರನೊಬ್ಬಳನ್ನು ನೋಡುತ್ತಾಳೆ. ಚೇಷ್ಟೇ ಮಾಡಬೇಕೆನಿಸಿ ಅವನತ್ತ ಹಣ್ಣುಗಳನ್ನು ಎಸೆಯುತ್ತಾಳೆ. ತಪೋಭಂಗವಾಗಿದ್ದ ರಿಂದ ಕುಪಿತನಾದ ವಾನರ ಮುನಿಯ ರೂಪಧರಿಸಿ ಬಂದು ಆಂಜನೆಗೆ ನೀನು ಪ್ರೇಮ ಪಾಶದಲ್ಲಿ ಸಿಲುಕಿದಾಗ ಕಪಿಯಾಗಿ ಮಾರ್ಪಡುತ್ತೀಯೇ ಎಂದು ಶಾಪ ಕೊಡುತ್ತಾನೆ. ದಯವಿಟ್ಟು ನನ್ನನ್ನು ಮನ್ನಿಸಬೇಕೆಂದು ಬೇಡಿದಾಗ ಮುಂದೆ ನೀನು ಯಾರೊಂದಿಗೆ ಅನು ರಕ್ತಳಾದರೂ ಕಪಿ ಮುಖ ಹೊಂದಿ ದರು, ನಿನ್ನ ಮೇಲೆ ಅನುರಕ್ತ ನಾದವನು ನಿನ್ನ ಕಪಿ ಮುಖ ಲೆಕ್ಕಿಸದೇ ನಿನ್ನನ್ನೇ ವಿವಾಹವಾಗುತ್ತಾನೆ ಹಾಗೂ ಶಿವನ ಅಂಶದಿಂದ ಜನಿಸಿದ ಮಗುವಿನಿಂದ ನಿನ್ನ ಶಾಪವಿಮೋಚನೆ ಯಾಗುತ್ತದೆ ಎಂದು ವರ ಕೊಡುತ್ತಾನೆ.

ಹೀಗೆ ಶಾಪಗ್ರಸ್ಥಳಾದ ಅಂಜನಾದೇವಿ ಕುಂಜರ ಹಾಗೂ ವಿಂಧ್ಯಾವಲಿ ದಂಪತಿಗಳಿಗೆ ಬ್ರಹ್ಮನ ಅನುಗ್ರಹದಿಂದ ಹುಟ್ಟಿರುತ್ತಾಳೆ. ಭೂಲೋಕದಲ್ಲಿ ಅರಣ್ಯದಲ್ಲಿ ವಾಸಿಸುತ್ತಿದ್ದ ಅಂಜನಾದೇವಿ ಒಮ್ಮೆ ವಾನರನೊಬ್ಬನನ್ನು ನೋಡಿ ಅವನಲ್ಲಿ ಪ್ರೇಮಾಂಕುರವಾಗುತ್ತದೆ. ಆಗ ಅವಳ ಮುಖ ಕಪಿ ಮುಖವಾಗಿ ಮಾರ್ಪಟ್ಟರೂ ಅವಳಿಗೆ ಪ್ರೇಮಾಂಕುರವಾದ ವ್ಯಕ್ತಿ ವಾನರ ರಾಜಕೇಸರಿಯೇ ಆಗಿರುತ್ತಾನೆ ನಂತರ ಅವರಿಬ್ಬರ ವಿವಾ ಹವೂ ಆಗುತ್ತದೆ. ನಂತರ ಅಂಜನಾದೇವಿ ಶಿವನನ್ನು ಕುರಿತು ಉಗ್ರತಪಸ್ಸನ್ನಾಚರಿಸುತ್ತಾಳೆ. ತಪಸ್ಸಿಗೆ ಒಲಿದ ಶಿವ ಏನು ವರ ಬೇಕೆಂದು ಕೇಳಲು ತನ್ನ ಶಾಪವಿಮೋಚನೆಗಾಗಿ ಶಿವ ತನ್ನ ಹೊಟ್ಟೆಯಲ್ಲಿ ಹುಟ್ಟಿ ಬರಬೇಕೆಂದು ಬೇಡಿಕೊಳ್ಳುತ್ತಾಳೆ.

ಇದೇ ಸಮಯದಲ್ಲಿ ಅಯೋಧ್ಯೆಯಲ್ಲಿ ದಶರಥ ಮಹಾ ರಾಜ ಪುತ್ರಕಾಮೇಷ್ಟಿಯಾಗವನ್ನು ಮಾಡುತ್ತಿರುತ್ತಾನೆ. ಯಾಗ ದಿಂದ ಸಂತುಷ್ಟನಾದ ಅಗ್ನಿದೇವನು ದಶರಥನಿಗೆ ಪಾಯಸ ವನ್ನು ಕೊಟ್ಟು ದೈವಸ್ವರೂಪಿ ಪುತ್ರರನ್ನು ಪಡೆಯಲು ಆ ಪಾಯಸ ವನ್ನು ತನ್ನ ಮಡದಿಯರಿಗೆ ಕೊಡಬೇಕೆಂದು ತಿಳಿಸುತ್ತಾನೆ. ತನ್ನ ಹಿರಿಯ ಮಡದಿ ಕೌಸಲ್ಯೆಗೆ ಪಾಯಸವನ್ನು ಕೊಡಲು ಹೊರಟಾಗ ಶಿವನ ಅಣತಿಯಂತೆ ವಾಯುದೇವ ಪಾಯಸದ ಸ್ವಲ್ಪ ಭಾಗವನ್ನು ಗಾಳಿಯಲ್ಲಿ ತೇಲಿಸಿ ಅಂಜನಾದೇವಿಯ ಬೊಗಸೆಯಲ್ಲಿ ಹಾಕುತ್ತಾನೆ. ಪಾಯಸವನ್ನು ಹೀರಿದ ಅಂಜನಾ ದೇವಿಗೆ ಶಿವನ ಅನುಗ್ರಹವಾಗಿದ್ದು ಅನುಭವಕ್ಕೆ ಬರುತ್ತದೆ. ಇದಾದ ಬಳಿಕ ಅಂಜನಾದೇವಿಗೆ ಮಗುವಿನ ಜನನವಾಗುತ್ತದೆ. ಅಂಜನಾದೇವಿಗೆ ಜನಿಸಿದ ಮಗನಾದ್ದರಿಂದ ಆಂಜನೇಯ ನಾಗಿ, ವಾನರರಾಜ ಕೇಸರಿಯ ಮಗನಾದ್ದರಿಂದ ಕೇಸರಿ ನಂದನನಾಗಿ, ಇವನ ಜನನದಲ್ಲಿ ವಾಯುಪುತ್ರನ ಪಾತ್ರವೂ ಇದ್ದುದರಿಂದ ಪವನಪುತ್ರ ಅಥವಾ ವಾಯುಪುತ್ರನಾಗಿ ಭಕ್ತ ಮಾನಸದಲ್ಲಿ ಚಿರಸ್ಥಾಯಿಯಾಗುತ್ತಾನೆ.

ಮಹಾಪರಾಕ್ರಮ ಶಾಲಿಯಾದ ಹನುಮಂತನ ಜನ ನದ ನಂತರ ಅಂಜನಾದೇವಿಗೆ ಶಾಪವಿಮೋಚನೆಯಾಗಿ ಮತ್ತೆ ಅವಳಿಗೆ ಬ್ರಹ್ಮಲೋಕ ಪ್ರಾಪ್ತಿಯಾಗುತ್ತದೆ. ವಾನರ ರಾಜ ಕೇಸರಿ ಹಾಗೂ ಅಪ್ಸರೆ ಅಂಜನಾದೇವಿಯ ಗರ್ಭದಲ್ಲಿ ಜನಿಸಿದ ಹನು ಮಂತ ಮಹಾ ಪರಾಕ್ರಮಿಯಾಗುತ್ತಾನೆ.

ಹನುಮಂತನ ಹುಟ್ಟಿನ ಬಗ್ಗೆ ಇನ್ನೊಂದು ಕಥೆಯೂ ಇದೆ. ಕೇಸರಿಯನ್ನು ಮದುವೆಯಾದ ಅಂಜನಾದೇವಿಗೆ ಬಹಳ ವರ್ಷಗಳ ಕಾಲ ಮಕ್ಕಳಾಗಲಿಲ್ಲ. ಕೇಸರಿಯು ಒಮ್ಮೆ ತನ್ನ ನೋವನ್ನು ಮತಂಗ ಮುನಿಯ ಬಳಿ ಹೇಳಿಕೊಳ್ಳುತ್ತಾನೆ. ಆಗ ಮತಂಗ ಮುನಿಗಳು ಅಂಜನೆಗೆ ನೀನು ಪಂಪಾ ಸರೋವರದ ಪೂರ್ವದಲ್ಲಿರುವ ಆಕಾಶಗಂಗಾ ಎಂಬ ತೀರ್ಥದಲ್ಲಿ ಸ್ನಾನ ಮಾಡಿ ಭಕ್ತಿಯಿಂದ ಪರಶಿವನನ್ನು ಹಾಗೂ ಶ್ಯಾಮಲಾದೇವಿ ಯನ್ನು ಕುರಿತು ತಪಸ್ಸು ಮಾಡು. ಆಗ ನಿನ್ನ ಇಚ್ಛೆ ನೆರವೇರುತ್ತದೆ ಎಂದು ಹೇಳಿದರು. ಮುನಿಗಳ ಅಣತಿಯಂತೆ ಅಂಜನಾದೇವಿ ಸತತ 12 ವರ್ಷಗಳ ಕಾಲ ತಪಸ್ಸು ಮಾಡಿದಳು. ಅವಳ ಭಕ್ತಿಗೆ ಮೆಚ್ಚಿದ ಶಿವ ದಿನವೂ ಒಂದೊಂದು ಹಣ್ಣನ್ನು ವಾಯುದೇವರ ಮೂಲಕ ಅಂಜನಾದೇವಿಗೆ ತಲುಪಿಸುತ್ತಿದ್ದನು. ವಾಯುವಿನ ಅನುಗ್ರಹ ಹಾಗೂ ಚಕ್ರದೇವತೆಯ ವರಪ್ರಸಾದದಿಂದ ಅಂಜ ನಾದೇವಿ ಗರ್ಭಿಣಿಯಾಗಿ ಒಂದು ಶುಭದಿನದಲ್ಲಿ ಗಂಡು ಮಗು ವಿಗೆ ಜನ್ಮ ನೀಡುತ್ತಾಳೆ. ವಾಯುದೇವರ ಅನುಗ್ರಹದಿಂದ ಹುಟ್ಟಿದ ಕಾರಣಕ್ಕೆ ಪವನಪುತ್ರ ಎನ್ನಿಸಿಕೊಳ್ಳುವ ಅವನೇ ಆಂಜನೇಯ.

ಪುಸ್ತಕಾವಲೋಕನ




## ಪುಸ್ತಕದ ವಿವರ

## ಆಚಾರ್ಯ ಶ್ರೀ ಮಧ್ವ ಕಾವ್ಯ ವೈಭವ

**ಲೇಖಕರು :** ಡಾ॥ ಪ್ರದೀಪ ಕುಮಾರ ಹೆಬ್ರಿ

**ಪ್ರಕಾಶಕರು :** ಕಾರ್ತಿಕ್ ಎಂಟರ್ ಪ್ರೈಸಸ್, ಮೈಸೂರು - 9844018457

**ಪುಟಗಳು :** 1050 (3 ಸಂಪುಟಗಳು ಸೇರಿ)

**ಬೆಲೆ : ರೂ.** 900/-

'ಕಿರಣಮಾಲೆಯ ತೋರಣ', ಜಗದ ಎಲ್ಲರ ಮೋಹನ', 'ಒಲವಧಾರೆಯ ನಂದನ' ಮಂಡ್ಯದ ಡಾ॥ ಪ್ರದೀಪಕುಮಾರ ಹೆಬ್ರಿ ಅವರು ರಚಿಸಿದ ಆಚಾರ್ಯ ಶ್ರೀಮಧ್ವರ ಸುಮಾರು ನಾಲ್ಕು ಸಾವಿರ ಪಂಚಪದಿಗಳ ಮಹಾಕಾವ್ಯ.ಮಧ್ವಾಚಾರ್ಯರ ಜನನದ ಮುಂಚಿನ ಅವರ ಹೆತ್ತವರ ಬದುಕು.ಧಾರ್ಮಿಕ ಸ್ಥಿತಿಗಳ ಪರಿಚಯದಿಂದ ಹಿಡಿದು ಮಧ್ವಾಚಾರ್ಯರ ಜನನ, ಬಾಲ್ಯ, ಪವಾಡ, ವಿದ್ಯಾಭ್ಯಾಸ, ಸನ್ಯಾಸಾಶ್ರಮ ಸ್ವೀಕಾರ. ಅದರ ಸಮರ್ಪಕ ನಿರ್ವಹಣೆ, ದಿಗ್ವಿಜಯ ಮೊದಲಾದ ಹಂತಗಳು. ಕೊನೆಗೆ ಆ ಪೂರ್ಣಾವತಾರದ ಎಲ್ಲ ಘಟನಾವಳಿಗಳನ್ನು ಅತಿ ಸರಳವಾದ ಕನ್ನಡದಲ್ಲಿ ಮತ್ತು ಹೃದ್ಯಶೈಲಿಯಲ್ಲಿ ಕವಿಗಳು ನಮ್ಮ ಮುಂದಿಟ್ಟಿದ್ದಾರೆ.

**ಈ ಕಾವ್ಯದಲ್ಲಿನ ಕೆಲವು ಸೊಗಸಾದ ಮಾತುಗಳು ಹೀಗಿವೆ:**

"ಜ್ಞಾನವೆಂದರೆ ಜಗದ ಬೆಳಕಿನ ಸಾಧನ" .

"ದೇಹವೆನಿಸಲು ಎಲ್ಲ ಶಾಸ್ತ್ರ, ಶ್ವಾಸವಾಗಿ ತತ್ವಜ್ಞಾನ".

"ತನುವ ಸೋಂಪಿಗೆ ಅನ್ನಬೇಕು. ಮತಿಯ ಕಂಪಿಗೆ ಜ್ಞಾನಬೇಕು."

"ಅಂಗವಾಗಿ ಶಾಸ್ತ್ರವಿರಲು, ತತ್ವಜ್ಞಾನವು ಅಂಗಿಯು'

ಸ್ಮೃತಿ,ವೇದ,ಆಗಮ,ಮಂತ್ರ,ಬ್ರಾಹ್ಮಣ, ಅರಣ್ಯಕ.... ಜೊತೆಗೆ ಶಿಲ್ಪ, ನಿರುಕ್ತ, ಜ್ಯೋತಿಷ್ಯ, ಕಲ್ಪ, ಛಂದಸ್ಸು, ವ್ಯಾಕರಣಗಳೆಂಬ ಆರು ವೇದಾಂಗಗಳು, ಉಪನಿಷತ್ತು ಇತಿಹಾಸ,ಪುರಾಣಗಳು,ಮಹಾಪುರಾಣ,ಉಪಪುರಾಣ. ಈ ಎಲ್ಲ ಗ್ರಂಥಗಳು ಬದುಕನ್ನು ಸರಳ, ಸುಲಭವಾಗಿಸಲು ಹೇಗೆಲ್ಲ ಮಾರ್ಗದರ್ಶಕವಾದವು. ಯಾವುದು ಏನನ್ನು , ಹೇಗೆ ಹೇಳುತ್ತದೆ ಎನ್ನುವುದರ ಬಗ್ಗೆ ಸವಿಸ್ತಾರ ವಿಷಯಗಳಿವೆ.

ಈ ಕಾವ್ಯದಲ್ಲಿ ಪರಶುರಾಮ ಕ್ಷೇತ್ರದ ಕತೆ ಅತಿ ಸುಂದರವಾಗಿ ವಿವರಿಸಲ್ಪಟ್ಟಿದೆ.ಉಡುಪಿ ಮತ್ತು ಸುತ್ತ ಮುತ್ತಲಿನ ಊರುಗಳ, ಅಮ್ಮನವರ ಕ್ಷೇತ್ರಗಳು, ನಾಗನ ಕ್ಷೇತ್ರಗಳು, ಇವುಗಳ ಹೆಸರು, ವಿವರಣೆ ಎಲ್ಲವೂ ಕಣ್ಣಿಗೆ ಕಟ್ಟುವಂತೆ ಹೇಳಲ್ಪಟ್ಟಿದೆ. ಸವಿಸ್ತಾರವಾಗಿ ಸುಲಲಿತವಾದ ಓದಿಗೆ ಅನುವಾಗುವ ಹಾಗೆ ಕಾವ್ಯಾತ್ಮಕವಾಗಿ ವರ್ಣಿಸಲ್ಪಟ್ಟಿದೆ. ನಾಲ್ಕು ಸಾವಿರಕ್ಕೂ ಮೀರಿದ 'ಪಂಚಪದಿಯ' ಚರಣಗಳಿದ್ದರೂ ಎಲ್ಲೂ ಓದುವ ಪ್ರಕ್ರಿಯೆಗೆ ಭಂಗಬರದಂತೆ ಎಷ್ಟು ಬೇಕೋ ಅಷ್ಟು ತುಂಬ ಜಾಣ್ಮೆಯ ಪ್ರಾಸಗಳು, ಸೂಕ್ತವಾದ ಪ್ರತಿಮೆ, ರೂಪಕಗಳು ಎಲ್ಲೂ ತಪ್ಪದ ಗೇಯತೆಯ ಗುಣಗಳಿಂದ ಪೋಣಿಸಲ್ಪಟ್ಟಿದೆ.

ಹೀಗೆ ದ್ವೈತಮತ ಸಂಸ್ಥಾಪಕರಾದ ಶ್ರೀಮಧ್ವಾಚಾರ್ಯರ ಬಗೆಗಿನ ಅಗಾಧ ಮಾಹಿತಿಯನ್ನು ತುಂಬ ಸರಳ ರೂಪದಲ್ಲಿ ಅತ್ಯಂತ ಭಾವಪೂರ್ಣವಾಗಿ ನೀಡಲ್ಪಟ್ಟಿರುವ ಈ ಕಾವ್ಯ ಕನ್ನಡ ಸಾರಸ್ವತ ಲೋಕಕ್ಕೆ ಒಂದು ಮಹಾಕೊಡುಗೆ ಎಂದರದು ಅತಿಶಯೋಕ್ತಿಯಲ್ಲ.

**ಪುಸ್ತಕ ಪರಿಚಯ: ಪ್ರಣವ,**

**9035618076**



Edited and Published on behalf of T.T.Devasthanams by **Prof. K.Rajagopalan**, Phd.,
Chief Editor, T.T.D. and Printed at T.T.D. Press by **Sri P. Ramaraju,** M.A., Special Officer (Press & Publications), T.T.D. Press, Tirupati - 517 507.

## ತಿರುಮಲೆ ತಿರುಪತಿ ದೇವಸ್ಥಾನಗಳು

**ಶ್ರೀ ಪ್ರಸನ್ನ ವೆಂಕಟೇಶ್ವರಸ್ವಾಮಿ ಆಲಯವನ್ನು
(ಬೂರಗಮಂದ, ಸದುಂಮಂಡಲ, ಚಿತ್ತೂರು ಜಿಲ್ಲೆ)
20-11-2020 ರಂದು ತಿರುಮಲೆ ತಿರುಪತಿ ದೇವಸ್ಥಾನವು
ತನ್ನ ಅನುಬಂಧ ಆಲಯವಾಗಿ ಸ್ವೀಕರಿಸಿದೆ.**

**ಶಾಸ್ತ್ರೋಕ್ತವಾಗಿ ನಿರ್ವಹಿಸಿದ ಈ ಕಾರ್ಯಕ್ರಮಕ್ಕೆ ಆಂಧ್ರಪ್ರದೇಶ್ ರಾಜ್ಯದ ಪಂಚಾಯತಿ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಿಯಾದ ಗೌ॥ ಶ್ರೀ ಪೆದ್ದಿರೆಡ್ಡಿ ರಾಮಚಂದ್ರಾರೆಡ್ಡಿ ಯವರ ನೇತೃತ್ವದಲ್ಲಿ ನಡೆಯಿತು.**









**ತಿರುಚಾನೂರು ಶ್ರೀ ಪದ್ಮಾವತೀ ಅಮ್ಮನವರ ಆಲಯದಲ್ಲಿ ವೈಭವವಾಗಿ
ನಡೆದ ಲಕ್ಷಕುಂಕುಮಾರ್ಚನೆ ಮಹೋತ್ಸವ ದೃಶ್ಯ**



SAPTHAGIRI (KANNADA) ILLUSTRATED MONTHLY
Published by Tirumala Tirupati Devasthanams. printing on 25-11-2020.
Regd. with the Registrar of Newspapers under "RNI" No.10742,
Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020